ಸಂಪುಟ 24 ಸಂಚಿಕೆ 18
ಮೇ 5, 2002 ಬೆಲೆ ರೂ. 3.00

ಐಕ್ಯರಂಗ


ದುಡಿವ ಜನರ ಪ್ರಾಣಮಿತ್ರ


ಮೇ ದಿನಾಚರಣೆ



ಕಾರ್ಮಿಕ ವರ್ಗದ ಕರ್ತವ್ಯಗಳು

ಭಯೋತ್ಪಾದನೆ ಹಲವು ಮುಖಗಳು





ಗುಜರಾತ್ : ಪೋಲೀಸ್ ಮಿದುಳಿಗೆ ಕೋಮುವಾದದ ವಿಷ ಏರಿದೆ


- ಎಲ್.ರೇವಣಸಿದ್ದಯ್ಯ

ಹೋರಾಟಗಳ ಜಾಗತೀಕರಣ 'ಫೋಟೋ ಆಲ್ಬಂ'

ಪಂ.ಬಂಗಾಳದಲ್ಲಿ ಸತತ ಐದನೇ ಬಾರಿಗೆ ಎಡರಂಗ ಅಧಿಕಾರಕ್ಕೆ

ಲೋಕಸಭೆ ಮತ್ತು ಆರು ವಿಧಾನಸಭೆ ಚುನಾವಣೆಗಳನ್ನು ಮಾರ್ಚ್ 19 ರಂದು ಘೋಷಿಸಲಾಯಿತು. ಬಂಗಾಳ 12ನೇ ವಿಧಾನಸಭೆಯನ್ನು ಆಯ್ಕೆ ಮಾಡಬೇಕಿತ್ತು. ಏಪ್ರಿಲ್ 27, ಮೇ 2, ಮೇ 7 ಮತ್ತು ಮೇ 21ನ್ನು ಮತದಾನಕ್ಕೆ ನಿಗದಿಪಡಿಸಲಾಯಿತು.

ಕೊನೆ ದಿನವನ್ನು ಜಮ್ಮು ಮತ್ತು ಕಾಶ್ಮೀರಕ್ಕೆ ಮೀಸಲಿಡಲಾಯಿತು. ಮೇ 2 ರಂದು ಬಂಗಾಳದ 20 ಲೋಕಸಭೆ ಹಾಗೂ 140 ಅಸೆಂಬ್ಲಿ ಸ್ಥಾನಗಳಿಗೆ ಮತ್ತು ಮೇ 7 ರಂದು 22 ಲೋಕಸಭೆ ಹಾಗೂ 152 ಅಸೆಂಬ್ಲಿ ಸ್ಥಾನಗಳಲ್ಲಿ ಮತದಾನ ನಡೆಯಿತು.



ಎಡರಂಗ ಫೆಬ್ರವರಿ 26 ರಂದು ಚುನಾವಣೆ ಪ್ರಣಾಳಿಕೆ ಬಿಡುಗಡೆ ಮಾಡಿತು. 1995 ರಲ್ಲಿ ನಡೆದ ಸಭೆಯಲ್ಲಿ ಸಿ.ಆರ್.ಎಲ್.ಐ ಅನ್ನು ರಂಗಕ್ಕೆ ಸೇರಿಸಿಕೊಳ್ಳಲಾಗಿತ್ತು. ನಾವು 19 ಅಂಶಗಳ ಕಾರ್ಯಕ್ರಮವನ್ನು ಪ್ರಕಟಿಸಿದೆವು ಹಾಗೂ ರಾಜ್ಯದ ಪರವಾಗಿ ಕೇಂದ್ರದ ಮುಂದೆ 23 ಬೇಡಿಕೆಗಳನ್ನು ಮಂಡಿಸಿದೆವು. ಕಾಂಗ್ರೆಸ್‌ನಲ್ಲಿ ಎಂದಿನಂತೆ ಟಿಕೆಟ್‌ಗಾಗಿ ಹಣಾಹಣಿ ನಡೆಯಿತು. ಸಮಾಜವಿರೋಧಿಗಳಿಗೆ ಒಲವು ಅನಿರೀಕ್ಷಿತವೇನೂ ಅಲ್ಲ. ಇಂಥ ಒಳಜಗಳವಿಲ್ಲದೆ ಕಾಂಗ್ರೆಸ್ ಬದುಕಲಾರದು ಅದು ಅದರ ಸಂಸ್ಕೃತಿ.

ಚುನಾವಣೆಗಳು ಸಮೀಪಿಸುತ್ತಿರುವಂತೆಯೇ ಮೂರನೇ ಪರ್ಯಾಯ ರೂಪಿಸುವ ಅವಶ್ಯಕತೆ ಅನಿವಾರ್ಯವೆನಿಸಿತು. ಆ ವಿಚಾರದಲ್ಲಿ ನಾವು ಮುತುವರ್ಜಿ ವಹಿಸಿದ್ದರೂ ಪ್ರತಿಯೊಂದು ನಮ್ಮ ಕೈಯಲ್ಲಿ ಇರಲಿಲ್ಲ. ಹಾದಿಯಲ್ಲಿ ಅನೇಕ ಸಮಸ್ಯೆಗಳಿದ್ದವು. ವಿವಿಧ ಗುಂಪುಗಳನ್ನು ಒಂದೇ ಬ್ಯಾನರ್ ಅಡಿ ತರುವುದು ಸಲಭವಾಗಿರಲಿಲ್ಲ. ಏನಿದ್ದರೂ ಮೂರನೇ ಪರ್ಯಾಯದ ಘೋಷಣೆಗೆ ಚಾಲನೆ ಸಿಕ್ಕಿತು. ಆ ನಿಟ್ಟಿನಲ್ಲಿ ನಾವು ಕೆಲಸ ಮಾಡಿದೆವು. ಏಪ್ರಿಲ್ 17 ರಂದು ಸಿಪಿಐ(ಎಂ) ಸಹಿತ ಆರು ಪಕ್ಷಗಳು ಜಾತ್ಯಾತೀತ ಮತ್ತು ಜನತಾಂತ್ರಿಕ ಫಾರ್ವರ್ಡ್ ಬ್ಲಾಕ್, ಜನತಾದಳ ಮತ್ತು ಸಮಾಜವಾದಿ ಪಕ್ಷ ಅದರಲ್ಲಿದ್ದ ಇತರ ಪಕ್ಷಗಳು ಅದೇ ದಿನ ಜಂಟಿ ಮನವಿಯೊಂದನ್ನು ಬಿಡುಗಡೆ ಮಾಡಲಾಯಿತು. ಕೋಮುವಾದದ ಪರಾಭವ, ದುಡಿಯುವ ಹಕ್ಕಿಗೆ ಮೂಲಭೂತ ಹಕ್ಕಿನ ಮಾನ್ಯತೆ, 14 ಅವಶ್ಯಕ ಸಾಮಗ್ರಿಗಳ ಬೆಲೆ ನಿಯಂತ್ರಣ, ದೇಶದ ಸ್ವಾವಲಂಬನೆ, ಭ್ರಷ್ಟಾಚಾರದ ವಿರುದ್ಧ ಹೋರಾಟ ಮತ್ತು ರಾಜಕೀಯದ ಹೆಸರಿನಲ್ಲಿ ಎಗ್ಗಿಲ್ಲದೆ ನಡೆಯುತ್ತಿರುವ ದೇಶದ ಸುಲಿಗೆಗೆ ತಡೆ ಇವುಗಳಿಗೆ ಮನವಿ ಒತ್ತು ನೀಡಿತು. ಆನಂತರದ ದಿನಗಳಲ್ಲಿ ಸಂಯುಕ್ತ ರಂಗ ಅಂಗೀಕರಿಸಿದ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಮೂಲ ಇದರಲ್ಲಿ ಅಡಕವಾಗಿತ್ತು.

ಕಾಂಗ್ರೆಸ್‌ಗೆ ಗೆಲುವಿನ ಆಸೆಯೇ ಇರಲಿಲ್ಲ ಎಂಬುದು ಸ್ಪಷ್ಟವಾಗಿತ್ತು ಬರ್ಧಮಾನದ ನಬಭಟ ಪ್ರದೇಶಕ್ಕೆ ರಾವ್ ಚುನಾವಣೆ ಸಭೆಗೆ ಬಂದಿದ್ದು ನನಗೆ ನೆನಪಿದೆ. ಆ ಸಭೆ ಜನರಿಲ್ಲದೆ ಭಣಗುಟ್ಟಿತು. ಇದು ಬಂಗಾಳವಾದ್ದರಿಂದ ಹೀಗಾಯಿತು ಎಂದು ಅವರು ತೃಪ್ತಿ ಪಡಬಹುದಿತ್ತೇನೋ. ಆದರೆ ಅವರ ಸ್ವಂತ ರಾಜ್ಯವಾದ ಆಂಧ್ರ ಪ್ರದೇಶದಲ್ಲಿ ಕೂಡ ಅವರಿಗೆ ಅದೇ ಗತಿ ಆಯಿತು. ಉತ್ತರ ಭಾಗದಲ್ಲಿ ಕೂಡ ಅವರಿಗೆ ಒಳ್ಳೆಯ ಪ್ರತಿಕ್ರಿಯೆ ಸಿಗಲಿಲ್ಲ.

ಯಾವುದೇ ಕೂಟಕ್ಕೆ ಬಹಮತ ಸಿಗದೆ ಅಸ್ಥಿರ ಸಂಸತ್ತು ರಚನೆಯಾಯಿತು. ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷ ಅತಿದೊಡ್ಡ ಏಕೈಕ ಪಕ್ಷವಾಗಿ ಬಿಜೆಪಿ ಹೊರ ಹೊಮ್ಮಿದರೂ ತನ್ನ ಮಿತ್ರಪಕ್ಷಗಳಾದ ಅಕಾಲಿದಳ, ಶಿವಸೇನೆ ಮತ್ತು ಸಮತಾ ಪಕ್ಷಗಳ ಜತೆ ಸೇರಿಯೂ ಬಹುಮತ ಸಾಧಿಸಲು ಆಗಲಿಲ್ಲ. ಮೂರನೇ ಪರ್ಯಾಯದ ಅವಕಾಶ ಉಜ್ವಲವಾಯಿತು.

ಪಶ್ಚಿಮ ಬಂಗಾಳದಲ್ಲಿ ಎಡರಂಗ ಐದನೇ ಬಾರಿಗೆ ಅಧಿಕಾರಕ್ಕೆ ಬಂತು. ಲೋಕಸಭೆಯ 33 ಸ್ಥಾನಗಳಲ್ಲಿ ಜಯಿಸಿತು. ಮತಚಲಾಯಿಸಿದವರ ಪ್ರಮಾಣ ಶೇ. 82.92 ಆಗಿತ್ತು. ಇದು 1991ರಲ್ಲಿ ಶೇ. 76.62 ರಾಜ್ಯದಲ್ಲಿ ಕಾಂಗ್ರೆಸ್ ಒಂಬತ್ತು ಲೋಕಸಭೆ ಸ್ಥಾನಗಳಲ್ಲಿ ಗೆದ್ದಿತು. ಇದು ಕಳೆದ ಬಾರಿಯದ್ದಕ್ಕಿಂತ ಐದು ಹೆಚ್ಚು ಸಿಪಿಐ(ಎಂ) ಕಳೆದ ಸಲಕ್ಕಿಂತ ಐದು ಕಡಿಮೆ, ಅಂದರೆ 23ರಲ್ಲಿ ಜಯಶಾಲಿಯಾಯಿತು. ಆರ್.ಎಸ್.ಪಿ. ನಾಲ್ಕು, ಸಿಪಿಐ, ಫಾರ್ವರ್ಡ್ ಬ್ಲಾಕ್ ತಲಾ ಮೂರರಲ್ಲಿ ಗೆದ್ದವು. ಇದು ನಮ್ಮ ನಿರೀಕ್ಷೆಗೆ ತಕ್ಕುದಾಗಿರಲಿಲ್ಲ. ನಮ್ಮ ನಿರೀಕ್ಷೆಗಿಂತ ತುಂಬಾ ಕೆಳಮಟ್ಟದ ಸಾಧನೆಯನ್ನು ನಾವು ಮಾಡಿದೆವು ಎಂಬುದನ್ನು ಒಪ್ಪಿಕೊಳ್ಳಲೇ ಬೇಕು.

ಅಸೆಂಬ್ಲಿಯಲ್ಲಿ ಕೂಡ ಕಾಂಗ್ರೆಸ್ ತನ್ನ ಬಲವನ್ನು 43 ರಿಂದ 82ಕ್ಕೆ ಹೆಚ್ಚಿಸಿಕೊಂಡಿತು ಜಿ.ಎನ್.ಎಲ್.ಎಫ್. ಮೂರು ಸ್ಥಾನಗಳನ್ನು ಉಳಿಸಿಕೊಂಡಿತು. ಎಡರಂಗದ ಪಾಲು 242 ರಿಂದ 203 ಕ್ಕೆ ಇಳಿಯಿತು. ಆದರೆ ನಾವು ಪಡೆದಮತದ ಸಂಖ್ಯೆ ಮಾತ್ರ ಶೇ. 48.84 ರಿಂದ ಶೇ. 49.32 ಕ್ಕೆ ಏರಿತ್ತು.

ಸಿಪಿಐ(ಎಂ) ಒಂದೇ 32 ಸ್ಥಾನಗಳನ್ನು ಕಳೆದುಕೊಂಡಿತು. ಅದು 150 ಸ್ಥಾನಗಳನ್ನು ಪಡೆಯಿತು. ಸ್ಪಷ್ಟ ಬಹುಮತಕ್ಕೆ ಅದುವೇ ಸಾಕಿತ್ತು. ಆರ್.ಎಸ್.ಪಿ 18, ಫಾರ್ವರ್ಡ್ ಬ್ಲಾಕ್-21, ಸಿಪಿಐ -6, ಫಾರ್ವರ್ಡ್ ಬ್ಲಾಕ್ ಮಾರ್ಕ್ಸಿಸ್ಟ್-2, ಬಿಬಿಸಿ-1, ಸಮಾಜವಾದಿ ಪಕ್ಷ 3 ಮತ್ತು ಡಿಎಸ್.ಪಿ-2 ಕ್ಷೇತ್ರಗಳಲ್ಲಿ ಗೆದ್ದವು. ಆರ್.ಸಿ.ಪಿ.ಐ ಮತ್ತು ಸಿ.ಆರ್.ಎಲ್.ಐ ಕ್ರಮವಾಗಿ ಎರಡು ಮತ್ತು ಒಂದು ಕ್ಷೇತ್ರದಲ್ಲಿ ಸ್ಪರ್ಧಿಸಿದರೂ ಎಲ್ಲೂ ಗೆಲ್ಲಲಿಲ್ಲ. ನಾನು ಸತ್ಗಾಚಿಯಾ ಕ್ಷೇತ್ರದಿಂದ 11,110 ಮತಗಳ ಅಂತರದಿಂದ ಗೆದ್ದೆ.

ಎಡರಂಗದ 20 ವರ್ಷಗಳ ಆಡಳಿತ ನಂತರ, ರಂಗದ ಕೆಲವು ಅಂಗಪಕ್ಷಗಳಲ್ಲಿ ನುಸುಳಿದ್ದ ಆತ್ಮ ಸಂತೃಪ್ತಿಯನ್ನು ಈ ಚುನಾವಣೆ ಮತ್ತೊಮ್ಮೆ ಬಯಲಿಗೆ ತಂದಿತು. ನಮ್ಮ ಜವಾಬ್ದಾರಿಗಳು ಹೆಚ್ಚಿದವು ಜನರ ನಿರೀಕ್ಷೆಗಳು ಗಗನ ಮುಟ್ಟಿದವು ನಾವು ಒಳಗೊಂಡು ನಮ್ಮ ಬಗ್ಗೆಯೇ ಕಟು ಆತ್ಮವಿಮರ್ಶೆ ಮಾಡಿಕೊಳ್ಳುವುದು ತುಂಬಾ ಅಗತ್ಯ.


ದೆಹಲಿಯಲ್ಲಿ ಸಂಯುಕ್ತ ರಂಗ

ದೇಶದ ಎಲ್ಲಾ ಭಾಗಗಳಿಂದ ಫಲಿತಾಂಶ ಹೊರಬರುತ್ತಿದ್ದ ವೇಳೆ ನಾನು ದೆಹಲಿಗೆ ಧಾವಿಸಬೇಕಾಯಿತು. ಮೇ 10 ರಂದು ಪಾಲಿಟ್‌ಬ್ಯೂರೋ ಸಭೆ ಆರಂಭವಾಯಿತು. ಆಗ ದೆಹಲಿಯಲ್ಲಿ ಬಿರುಸಿನ ರಾಜಕೀಯ ಚಟುವಟಿಕೆ ನಡೆಯುತ್ತಿತ್ತು. ಸಂಯುಕ್ತ ರಂಗ ರಚನೆಯ ಸಾಧ್ಯತೆ ಉಜ್ವಲವಾಗಿತ್ತು.

ಸಿಪಿಐ(ಎಂ), ಸಿಪಿಐ, ಆರ್.ಎಸ್.ಪಿ, ಫಾರ್ವರ್ಡ್ ಬ್ಲಾಕ್, ಜನತಾದಳ, ಸಮಾಜವಾದಿ ಪಕ್ಷ, ತೆಲುಗುದೇಶಂ, ಟಿ.ಎಂ.ಸಿ. ಎ.ಜಿ.ಪಿ, ಡಿಎಂಕೆ, ಕಾಂಗ್ರೆಸ್ (ಟಿ), ಮಹಾರಾಷ್ಟ್ರವಾದಿ ಗೋಮಾಂತಕ ಪಕ್ಷ (ಒಂದೇ ಸ್ಥಾನ) ಮತ್ತು ಲೋಕಸಭೆಯಲ್ಲಿ ಯಾವುದೇ ಪ್ರಾತಿನಿಧ್ಯವಿಲ್ಲದ ರಿಪಬ್ಲಿಕನ್ ಪಕ್ಷ ಸೇರಿ 13 ಪಕ್ಷಗಳ ಸಂಯುಕ್ತ ರಂಗ ರಚನೆಯಾಯಿತು. 187 ಸ್ಥಾನಗಳಿದ್ದ ಈ ರಂಗ ಲೋಕಸಭೆಯಲ್ಲಿ ಅತಿದೊಡ್ಡ ಗುಂಪು ಆದರೂ ಸ್ಪಷ್ಟ ಬಹುಮತ ಇರಲಿಲ್ಲ. ಆಗ, ತಾನು ಬಿಜೆಪಿಯನ್ನು ಬೆಂಬಲಿಸುವುದಿಲ್ಲ, ಸಂಯುಕ್ತ ರಂಗವನ್ನು ಬೆಂಬಲಿಸುವುದಾಗಿ ಕಾಂಗ್ರೆಸ್ ಹೇಳಿತು. ಹೀಗಾಗಿ ಕಾಂಗ್ರೆಸೇತರ ಜಾತ್ಯಾತೀತ ಸಮ್ಮಿಶ್ರ ಸರಕಾರವೊಂದರ ರಚನೆ ಅಸಾಧ್ಯ ಆಗಿರಲಿಲ್ಲ.

ನಾನು ದೆಹಲಿ ತಲುಪಿದ ದಿನ ಸುರ್ಜಿತ್ ಮತ್ತು ನಾನು ರಾಷ್ಟ್ರಪತಿಯವರನ್ನು ಭೇಟಿಯಾದೆವು. ಸರಕಾರ ರಚಿಸಲು ರಂಗಕ್ಕೆ ಅವಕಾಶ ನೀಡುವಂತೆ ಮನವಿ ಮಾಡಿದೆವು. ನಮ್ಮನ್ನು ಬೆಂಬಲಿಸುವುದಾಗಿ ಕಾಂಗ್ರೆಸ್ ಹೇಳುತ್ತಿರುವುದರಿಂದ ಬಿಜೆಪಿಗೆ ಅವಕಾಶ ಇಲ್ಲ ಎಂದು ನಾವು ಹೇಳಿದೆವು. ನಾವೇ ಸಹಜ ಹಕ್ಕುದಾರರಾಗಿದ್ದೆವು. ಸಿಪಿಐ(ಎಂ) ಸೇರಬೇಕು ಹಾಗೂ ನಾನು ಪ್ರಧಾನಮಂತ್ರಿ ಆಗಬೇಕು ಎಂದು ರಂಗದ ಎಡಯೇತರ ಪಕ್ಷಗಳು ಸಿಪಿಐ(ಎಂ) ಗೆ ಮನವಿ ಮಾಡಿದವು.

ಮುಂದುವರಿಯುವುದು



ಕಳೆದ ಸಂಚಿಕೆಯಲ್ಲಿ ಪಿವಿಎನ್ ರಾವ್ ಗುರು ಚಂದ್ರಸ್ವಾಮಿ ಮೇಲೆ ಹಲವು ಆರೋಪಗಳು, ಹಗರಣಗಳಲ್ಲಿ ಸಿಕ್ಕಿಬಿದ್ದ ಕೇಂದ್ರದ ಹಲವು ಮಂತ್ರಿಗಳ ರಾಜೀನಾಮೆ, ಕಾಂಗ್ರೆಸ್ಸಿಗರ ಜೊತೆ ದೇಶಭಕ್ತ ಬಿಜೆಪಿ! ಮುಖಂಡರು ಹವಾಲ ಹಗರಣದ ಬಲೆಯಲ್ಲಿ ದಲಿತ ಕ್ರೈಸ್ತರ ಮೀಸಲಾತಿ ಸುಗ್ರೀವಾಜ್ಞೆಗೆ ರಾಷ್ಟ್ರಪತಿಗಳ ತಿರಸ್ಕಾರ ಈ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಲೋಕಸಭೆ ಮತ್ತು ಆರು ವಿಧಾನಸಭೆಗಳಿಗೆ ಚುನಾವಣೆ ಘೋಷಣೆ, ಮೂರನೇ ಪರ್ಯಾಯ ರಚನೆಯ ಅನಿವಾರ್ಯತೆ, ಪ.ಬಂಗಾಳದಲ್ಲಿ ಸತತ ಐದನೇ ಬಾರಿಗೆ ಎಡರಂಗದ ವಿಜಯದ ಕಹಳೆ, ಅತಂತ್ರ ಲೋಕಸಭೆ, ಹದಿಮೂರು ಪಕ್ಷಗಳ ಸಂಯುಕ್ತ ರಂಗ ಅಸ್ತಿತ್ವಕ್ಕೆ ಈ ಬಗ್ಗೆ ಓದಿ...

ಈ ಸಂಚಿಕೆಯಲ್ಲಿ - ಬೊಗಸೆ ತುಂಬಾ ಕೆಂಪು ಹೂಗಳು....

ಜಗತ್ತಿನ ಇಡೀ ದುಡಿವ ವರ್ಗ ಸಂಭ್ರಮಿಸುವ, ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಸಮರಶೀಲ ಹೋರಾಟವನ್ನು ಇನ್ನೂ ಉನ್ನತ ಹಂತಕ್ಕೊಯ್ಯುವುದಾಗಿ ಸಂಕಲ್ಪಿಸುವ ಕೆಂಪು ಕಂಪಿನ ಮೇ ದಿನಾಚರಣೆ ಮತ್ತೆ ಬಂದಿದೆ. ತ್ಯಾಗ, ಬಲಿದಾನಗಳ ಮಹಾನ್ ಪರಂಪರೆಯ ಈ ದಿನವನ್ನು ಆಚರಿಸಲು ಇಡೀ ದುಡಿವ ವರ್ಗ ಹಲವು ರೀತಿಯಲ್ಲಿ ಸಿದ್ಧಗೊಳ್ಳುತ್ತಿದೆ. ಈಗಲೂ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಈ ಆಚರಣೆಯೆಂದರೆ ಒಂದು ಭಾರಿ ಸಂಘರ್ಷವೇ. ಮೇ ದಿನದ ಆಚರಣೆಯೆಂದರೆ ದುಡಿವ ವರ್ಗದ ವರ್ಗ ಪ್ರಜ್ಞಾವಂತಿಕೆಯ ಆರಂಭ.

ಜಾಗತೀಕರಣದ ಹೊಸ ಹೊಸ ದಾಳಿಗಳು ಹೆಚ್ಚುತ್ತಿವೆ. ಸಾಮ್ರಾಜ್ಯಶಾಹಿ ವಿಭಿನ್ನ ತಂತ್ರಗಾರಿಕೆಯಿಂದ ತನ್ನ ಸುಲಿಗೆ, ಆಕ್ರಮಣ ಶೀಲತೆಯನ್ನು ಹೆಚ್ಚಿಸಿದೆ. ಶ್ರಮಿಕ ವರ್ಗ ಇನ್ನೂ ಅಧಿಕ ಸುಲಿಗೆಗೆ ಈಡಾಗುತ್ತಿದೆ. ಆಯಾ ದೇಶಗಳಲ್ಲಿಯೂ ಆಳುವರ್ಗದ ಆಕ್ರಮಣಗಳು ತೀವ್ರ ಪ್ರತಿಗಾಮಿ ಸ್ವರೂಪ ಪಡೆದುಕೊಳ್ಳುತ್ತಿವೆ. ಭಾರತದಲ್ಲಿಯೂ ವಿನಾಶಕಾರಿ ಆರ್ಥಿಕ ನೀತಿಗಳು, ಅದನ್ನು ಮರೆಸಲು ಅತ್ಯಂತ ಪ್ರತಿಗಾಮಿ ಕೋಮುವಾದದ ಮುಸುಕಿನ ದಾಳಿ ಜೊತೆಜೊತೆಗೆ ನಡೆದಿವೆ.

ಜಗತ್ತಿನಲ್ಲಿ ವೈಜ್ಞಾನಿಕ ಸಮಾಜವಾದಕ್ಕೆ ತಾತ್ಕಾಲಿಕ ಹಿನ್ನಡೆಯಾದರೂ ಸಮಾಜವಾದಿ ಶಕ್ತಿಗಳು ಹೋರಾಟ ಕೈಬಿಟ್ಟಿಲ್ಲ. ಈಗಲೂ ಅವರದ್ದು ವಿಶ್ವದಲ್ಲಿ ಒಂದು ಗಟ್ಟಿ ಧ್ವನಿಯೇ ಆಗಿದೆ. ದುಡಿವ ವರ್ಗಕ್ಕೆ ಕ್ಯೂಬಾ, ವಿಯೆಟ್ನಾಂ, ಚೀನಾ ಮುಂತಾದ ರಾಷ್ಟ್ರಗಳು ಸ್ಫೂರ್ತಿ ನೀಡುತ್ತಿವೆ. ಇಂತಹ ಸನ್ನಿವೇಶದಲ್ಲಿ ದುಡಿವ ಜನರ ಪ್ರಾಣ ಮಿತ್ರ ಎಂದಿನಂತೆ ಮೇ ದಿನದ ವಿಶೇಷ ಲೇಖನಗಳನ್ನು ಹೊತ್ತು ತಮ್ಮ ಬಳಿ ಬಂದಿದೆ. ಮುಖ್ಯವಾಗಿ ಭಯೋತ್ಪಾದನೆಯ ವಿವಿಧ ಆಯಾಮಗಳನ್ನು ಪ್ರಬುದ್ಧವಾಗಿ ವಿಶ್ಲೇಷಿಸುವ ಲೇಖನ ಈ ಸಂಚಿಕೆಯ ವಿಶೇಷ ಕೊಡುಗೆ. ಮೇ ದಿನದ ಪರಂಪರೆ ನೆನಪಿಸಿ, ಕರ್ತವ್ಯಗಳನ್ನು ಗುರುತಿಸುವ ಬರಹಗಳು ಇಲ್ಲಿವೆ. ಹಾಗೆಯೇ ಜಗತ್ತಿನಾದ್ಯಂತ ಕಳೆದ ಒಂದು ವರುಷದಲ್ಲಿ ಸುಲಿಗೆಯ ಜಾಗತೀಕರಣದ ವಿರುದ್ಧ ಚಿಮ್ಮಿದ ಹೋರಾಟಗಳನ್ನು ವಿಶೇಷವಾಗಿ ಫೋಟೋ ಸಹಿತ ನೀಡಲಾಗಿದ್ದು ವೈವಿಧ್ಯವಾಗಿದೆ. ಮತ್ತು ಎಂದಿನಂತೆ ದೇಶದ -ರಾಜ್ಯದ ಸಂಗತಿಗಳು ನಿಮ್ಮ ಮುಂದೆ.

ಗುಜರಾತ್: 'ಪೋಲೀಸ್ ವ್ಯವಸ್ಥೆಯ ಮಿದುಳಿಗೆ ಕೋಮುದ್ವೇಷದ ವಿಷ ಏರಿದೆ'

- ನಿವೃತ್ತ ಪೋಲಿಸ್ ಮಹಾನಿರ್ದೇಶಕ ಎಲ್.ರೇವಣಸಿದ್ದಯ್ಯ

"ಗುಜರಾತ್‌ನಲ್ಲಿ ನಡೆದದ್ದು ಕೋಮುಗಲಭೆ ಅಲ್ಲ. ಕೋಮುಗಲಭೆ ಎಂದರೆ ಎರಡು ಕೋಮುಗಳ ಜನರು ಪರಸ್ಪರರ ವಿರುದ್ಧ ಹಿಂಸಾಚಾರ ನಡೆಸುವುದು. ಇಂತಹ ಸಂದರ್ಭಗಳಲ್ಲಿ ಸರ್ಕಾರ ಗಲಭೆ ನಿಯಂತ್ರಿಸಲು ಪ್ರಯತ್ನಿಸುತ್ತದೆ. ಆದರೆ ಗುಜರಾತಿನಲ್ಲಿ ನಡೆದದ್ದೇ ಬೇರೆ. ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯಕ್ಕೆ ಸೇರಿದ ಜನರ ವಿರುದ್ಧ ಸರ್ಕಾರವು ಸೇರಿ ಹತ್ಯಾಕಾಂಡಗಳನ್ನು ನಡೆಸಲಾಗಿದೆ."

ಹೀಗೆಂದು ಖಚಿತವಾದ ನುಡಿಗಳಲ್ಲಿ ಘೋಷಿಸಿದವರು ಹತ್ತಿ ಉರಿಯುತ್ತಿರುವ ಗುಜರಾತ್‌ಗೆ ಪ್ರತ್ಯಕ್ಷ ಭೇಟಿ ನೀಡಿ ಬಂದ ನಿವೃತ್ತ ಪೋಲಿಸ್ ಮಹಾ ನಿರ್ದೇಶಕ ಎಲ್.ರೇವಣಸಿದ್ದಯ್ಯನವರು.

ಗುಜರಾತ್ ರಾಜ್ಯದಲ್ಲಿ ನಡೆದ - ಈಗಲೂ ನಡೆಯುತ್ತಿರುವ ಮಾರಣ ಹೋಮ-ನರಮೇಧಗಳ ಪ್ರತ್ಯಕ್ಷ ಸಾಕ್ಷಿಯಾಗಿ ಅವರು ತಾವು ಕಂಡದ್ದನ್ನು - ಕೇಳಿದ್ದನ್ನು ಕಿಂಚಿತ್ತಾದರೂ ಮನುಷ್ಯತ್ವ ಉಳ್ಳಂತಹವರನ್ನು ದಂಗು ಬಡಿಸುವಂತಹ ಹೃದಯ ವಿದ್ರಾವಕ ಚಿತ್ರಣವನ್ನು ಸಭಿಕರ ಮುಂದೆ ಬಿಡಿಸಿಟ್ಟರು.

ಏ. 25 ರಂದು 'ಸಮುದಾಯ - ಬೆಂಗಳೂರು' ಸಂಘಟಿಸಿದ 'ಗುಜರಾತ್ ಹತ್ಯಾಕಾಂಡ' ಒಂದು ವಿಶ್ಲೇಷಣೆ - ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡುತ್ತಿದ್ದರು. ನೀಚ ಮನಸ್ಸುಗಳಿಲ್ಲದ ಯಾರೂ ನಾಚಿ ನೋವಿನಿಂದ ತಲೆತಗ್ಗಿಸಬೇಕಾದ ಅವರು ಕೊಟ್ಟ ಚಿತ್ರಣ ಹೀಗಿದೆ -

ಮನುಷ್ಯ ಹೆಣಗಳ ಲೆಕ್ಕವೇ ಇಲ್ಲ!!!

"ನಾಗರೀಕ ಸಮಾಜದಲ್ಲಿ ನಾಯಿ ನರಿಗಳು ಸತ್ತರೂ ಲೆಕ್ಕವಿಡಬೇಕು. ಇಲ್ಲಿ ಮನುಷ್ಯ ಹೆಣಗಳ ಲೆಕ್ಕವೇ ಇಲ್ಲ!!!

ಗುಜರಾತ್ ನರಮೇಧದಲ್ಲಿ ಸತ್ತವರ ಸಂಖ್ಯೆಯು ಸರ್ಕಾರ ಹೇಳುತ್ತಿರುವುದಕ್ಕಿಂತ, ಮಾಧ್ಯಮಗಳಲ್ಲಿ ವರದಿಯಾಗಿರುವುದಕ್ಕಿಂತ ಖಂಡಿತ ಹೆಚ್ಚು ಎನ್ನುತ್ತಾರೆ ಅವರು. ಏಕೆಂದರೆ ಅವರು ಗುಜರಾತ್‌ನಲ್ಲಿ ಶವಪರೀಕ್ಷೆ ನಡೆಸುವ ಸರ್ಕಾರಿ ವೈದ್ಯರನ್ನು ಕಂಡು ಮಾತನಾಡಿಸಿದರಂತೆ, ವೈದ್ಯರು ಹೇಳುತ್ತಾರೆ, ಸತ್ತವರು ಎಷ್ಟು ಎಂದರೆ ಎಷ್ಟೆಂದು ಹೇಳುವುದು ? ಒಂದಷ್ಟು ಕೈ, ಕಾಲುಗಳು, ಛಿದ್ರಗೊಂಡ ದೇಹದ ಭಾಗಗಳ ರಾಶಿಯನ್ನು ತಂದು ಸುರಿದು ಶವ ಪರೀಕ್ಷೆ ನಡೆಸಿ ಎಂದರೆ ಏನು ಶವಪರೀಕ್ಷೆ ನಡೆಸುವುದು, ಎಷ್ಟು



ಜನ ಸತ್ತಿದ್ದಾರೆಂದು ಹೇಗೆ ಹೇಳುವುದು?

ಗಲಭೆ ಆರಂಭವಾದ 5-6 ದಿನಗಳಷ್ಟು ತಡವಾಗಿ ಗುಜರಾತಿಗೆ ಭೇಟಿ ನೀಡುತ್ತಿರುವ ಬಗೆಗೆ ಅವರಿಗೆ ಮೊದಲು ಅಪರಾಧಿ ಪ್ರಜ್ಞೆ ಕಾಡುತ್ತಿತ್ತಂತೆ. ಅಲ್ಲಿ ಹೋಗಿ ನೋಡಿದರೆ, ಸಂತ್ರಸ್ತ ಜನರನ್ನು ಸಂತೈಸಲು ಪ್ರಧಾನಿ, ಗೃಹಮಂತ್ರಿ, ರಾಜ್ಯ ಸರ್ಕಾರ ಮಂತ್ರಿಗಳು, ಅಧಿಕಾರಿಗಳು ಯಾರು ಇಲ್ಲ!! ಸ್ವತಃ ಪ್ರಧಾನಮಂತ್ರಿಗಳೇ ಹಲವಾರು ವಾರಗಳ ನಂತರ ಗುಜರಾತ್ ಭೇಟಿ ನೀಡಿದರು!!!

'ಗುಜರಾತ್‌ನಲ್ಲಿ ನಡೆದದ್ದು ಕೋಮುಗಲಭೆಯಲ್ಲ ವ್ಯವಸ್ಥಿತ ನರಮೇಧ'

ಸಮುದಾಯ ಸಂಘಟಿಸಿದ್ದ 'ಗುಜರಾತ್ ಹತ್ಯಾಕಾಂಡ ಒಂದು ವಿಶ್ಲೇಷಣೆ' ಸಂಕಿರಣದಲ್ಲಿ ವ್ಯಕ್ತವಾದ ಖಚಿತ ನುಡಿಗಳು

ವ್ಯವಸ್ಥಿತ ಹಿಂಸಾಚಾರ

ಒಂದು ಕೋಮಿನ ಜನ, ಪೆಟ್ರೋಲ್, ಸೀಮೆಎಣ್ಣೆ, ನಾಫ್ತಾ, ಗ್ಯಾಸ್‌ಸಿಲಿಂಡರ್‌ಗಳನ್ನು ವ್ಯಾನು-ಜೀಪು, ಲಾರಿಗಳಲ್ಲಿ ತುಂಬಿಕೊಂಡು ಮತದಾರರ ಪಟ್ಟಿಯನ್ನು ಹಿಡಿದುಕೊಂಡು ಅಲ್ಪಸಂಖ್ಯಾತ ಮನೆ ಮನೆಗಳಿಗೆ ನುಗ್ಗಿ ನಿರ್ಧಿಷ್ಟವಾಗಿ ಗುರುತಿಸಿ ಮನೆಗೆ ಬೆಂಕಿ ಇಡುವುದು, ಗ್ಯಾಸ್ ಸಿಲಿಂಡರ್ ಸ್ಫೋಟಿಸಿ ಮನೆಯೊಳಗಿನ ಮನುಷ್ಯರನ್ನು ಸೇರಿಸಿ ಬೂದಿ ಮಾಡುವುದು, ವಾಹನಗಳಲ್ಲಿ ಹೋಗುವವರನ್ನು ಸಜೀವ ಸುಡುವುದು. ಅಲ್ಪಸಂಖ್ಯಾತರ ಊರು, ಹಳ್ಳಿಗಳಿಗೇ ಬೆಂಕಿ ಇಡುವುದು.

ಪೋಲೀಸರ ಹಾಗೂ ಸೈನ್ಯದ ನಿಯೋಜನೆಗೆ ಅವಕಾಶವಿದ್ದರೂ ಸರ್ಕಾರದಿಂದ ಯಾವದೇ ಕ್ರಮವಿಲ್ಲ. ಮನೆ ಮಠ ಕಳೆದುಕೊಂಡವರು ಸಿಕ್ಕ ಶಾಲೆ-ದರ್ಗಾ-ಮಸೀದಿಗಳಿಗೆ ಎಲ್ಲೆಂದರಲ್ಲಿ ಆಶ್ರಯಕ್ಕಾಗಿ ಓಡಿದರು. ಮಾಜಿ ಲೋಕಸಭಾ ಸದಸ್ಯರ ಮನೆಯಲ್ಲಿ ರಕ್ಷಣೆ ಸಿಗಬಹುದೆಂದು ಸೈಯದ್ ಜೆಫ್ರಿ ಅವರ ಮನೆಗೆ ಹೋದರೆ ಸ್ವತಃ ಜೆಫ್ರಿಯವರಿಗೆ ರಕ್ಷಣೆಯಿಲ್ಲ. ಯಾವ ಫೋನ್ ಕರೆ-ಮೊರೆಗೂ ಬೆಲೆಯಿಲ್ಲ. ಸುಮಾರು 50 ಮಂದಿ ಜೆಫ್ರಿಯವರ ಮನೆಯಲ್ಲಿ ಸುತ್ತುವರಿದ ಸಾವಿರಾರು ಕಟುಕರ ನಡುವೆ ಜೀವಂತೆ ಸುಟ್ಟು ಬೂದಿಯಾದರು.

ಪೋಲೀಸ್ ವ್ಯವಸ್ಥೆಯ ಮಿದುಳಿಗೆ ಕೋಮುದ್ವೇಷದ ವಿಷ ಏರಿದೆ. ಒಬ್ಬ ಹಿರಿಯ ಪೋಲೀಸ್ ಅಧಿಕಾರಿ ಈ ಮಾಜಿ ಪೋಲೀಸ್ ಅಧಿಕಾರಿಯೊಂದಿಗೆ ಅಸಹಾಯಕತೆ ತೋಡಿಕೊಂಡಿದ್ದಾರೆ.

ಗಲಭೆ ನಿರತ ದುಷ್ಕರ್ಮಿಗಳತ್ತ ಗುಂಡು ಹಾರಿಸಲು ಆಜ್ಞೆ ಕೊಟ್ಟರೆ ಒಂದು ಕೋಮಿನ ಜನರತ್ತ ಢಣ, ಢಣ ಎಂದು ಗುಂಡು ಹಾರುತ್ತವೆ. ಆದರೆ ಗಲಭೆ ನಿರತ ಇನ್ನೊಂದು ಕೋಮಿನತ್ತ ಇದೇ ಪೋಲೀಸರ ಗುಂಡು ತುಸುಕು-ಪುಸುಕ್ ಎಂದು ಹುಸಿಯಾಗುತ್ತವೆ(ಗುರಿ ತಪ್ಪುತ್ತವೆ)

ಅವರಿಗೇಕೆ ಬೇಕು ರಕ್ಷಣೆ?

ಜೀವಂತ ಸುಡಲು ಮಹಿಳೆಯರು-ಮಕ್ಕಳು ಎಂಬ ತಾರತಮ್ಯ ಇಲ್ಲ. ಸರ್ಕಾರ ತಾನಾಗಿ ಯಾವ ನಿರಾಶ್ರಿತರ ಶಿಬಿರವನ್ನು ತೆರೆಯಲಿಲ್ಲ. ಅದನ್ನು ಆರಂಭಿಸಿದ್ದೆಲ್ಲವೂ ಸ್ವಯಂ ಸೇವಾ ಸಂಘಟನೆಗಳು. ಇಂತಹ ಶಿಬಿರಗಳಲ್ಲಿ ಅಂಗೈಯಲ್ಲಿ ಜೀವ ಹಿಡಿದು ಬದುಕುವ ಜನರಿಗಾದರೂ ಪೋಲೀಸರ ಕಾವಲು, ರಕ್ಷಣೆ ಏನಾದರೂ ಇದೆಯೇ? ಅದೂ ಇಲ್ಲ. ಅವರಿಗೆ ರಕ್ಷಣೆ ಏಕೆ ಬೇಕು ಎನ್ನುತ್ತಾರಂತೆ ಅಧಿಕಾರಸ್ಥರು.

ನಿರಾಶ್ರಿತರ ಶಿಬಿರಗಳಿಗೂ ರಕ್ಷಣೆ ನೀಡದ ಪೋಲೀಸರು ಪರಿಸ್ಥಿತಿಯನ್ನು ಪರಿಶೀಲಿಸಲು ಬರುವ ಸಂಘ ಸಂಸ್ಥೆಗಳ, ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಮಾತ್ರ ದಾರಿ ತಪ್ಪಿಸುತ್ತಾರೆ. ಪೋಲೀಸರು ಒಪ್ಪಿದ ಶಿಬಿರಕ್ಕೆ ಮಾತ್ರ ಪ್ರವೇಶ, ಭೇಟಿಗೆ ಅವಕಾಶ. (ಒಂದು ಹಂತದವರೆಗೆ ಅದೂ ಸಹ ಇಲ್ಲ. ಖ್ಯಾತ ನಟಿ ಶಬನಾ ಅಜ್ಮಿ, ಕಾಂ. ಸೀತಾರಾಂ ಯೆಚೂರಿಯವರಿಗೂ ಗುಜರಾತಿನಲ್ಲಿ ಸಂಚಾರ ನಿರ್ಬಂಧಿಸಲಾಗಿತ್ತು.

ಪುಟ 10 ಕ್ಕೆ

ಚಾಟಿಗಳು

ಬಿಜೆಪಿ ಸಹಿತ ಸಂಘಪರಿವಾರವು ಗುಜರಾತ್ ಸರ್ಕಾರವನ್ನು ಸಮರ್ಥಿಸಿಕೊಳ್ಳುತ್ತಿರುವುದು ಅತ್ಯಂತ ಹೇಯ ಕೃತ್ಯ. ಸಮೀದ್ ಕೊನೆಗೂ ಸೂಕ್ತ ನಿರ್ಧಾರವನ್ನೇ ಕೈಗೊಂಡು ಸಂಸತ್ತಿನ ಕಲಾಪಗಳು ನಿಲ್ಲದೆ ನಡೆಯುವಂತೆ ನೋಡಿಕೊಂಡಿದ್ದಾರೆ. ಆವರ ಕ್ರಮ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದು ಮೈಲಿಗಲ್ಲು.

- ಪ್ರಜಾವಾಣಿ ಸಂಪಾದಕೀಯ

★ ★ ★

ಇಂತಹ ಆತ್ಮವಂಚನೆಯನ್ನು ಬಿಟ್ಟು ಮನುಷ್ಯತ್ವವಿದ್ದರೆ ಮೋದಿ ಸರ್ಕಾರವನ್ನು ವಜಾ ಮಾಡಲಿ. ಅದಕ್ಕಾಗಿ ಪ್ರಜ್ಞಾವಂತರಾದವರೆಲ್ಲ ಒತ್ತಾಯಿಸಬೇಕಾದ್ದು ಈ ಘಳಿಗೆಯ ತುರ್ತು. ಸಂರಕ್ಷಕನಾಗುವುದರ ಬದಲು ಸಂಹಾರಕನಾದ ಯಾವ ಪೊಲೀಸ್ ಅಧಿಕಾರಿಯನ್ನೂ ಈವರೆಗೆ ಬಹಿರಂಗ ವಿಚಾರಣೆಗೆ ಒಳ ಪಡಿಸಿಲ್ಲ ಇದಕ್ಕೆ ಕಾರಣವೂ ಸ್ಪಷ್ಟ. ಹೀಗಾದಾಗ, ಪೊಲೀಸ್ ಜತೆಗಿನ ಅಪರಾಧಿಗಳು, ಭೂಗತ ಜಗತ್ತು ರಾಜಕೀಯ ನಂಟುಗಳೆಲ್ಲವೂ ಬಯಲುಗೊಳ್ಳುತ್ತದೆ.

- ಕುಲದೀಪ ನಯ್ಯರ್, ಗುಜರಾತ್ ಹತ್ಯಾಕಾಂಡದ ಬಗ್ಗೆ ಬರೆಯುತ್ತಾ

★ ★ ★

ಬೇರೆಯವರಿಗೆ ತೊಂದರೆ ಕೊಡಬಾರದು. ಚೂರಿ ಹಾಕಬಾರದು ಅಂತ ಧರ್ಮಗ್ರಂಥಗಳನ್ನು ಓದಿ ತಿಳಿದುಕೊಳ್ಳಬೇಕಾದ ಅಗತ್ಯವಿಲ್ಲ" ಧಾರ್ಮಿಕ ಮುಖಂಡರುಗಳೆಲ್ಲ ಅವರದ್ದೇ ಆದ ಪ್ರತ್ಯೇಕ ಡಿಕ್ಷನರಿಗಳನ್ನು ಇಟ್ಟುಕೊಂಡಿದ್ದಾರೆ. ಭಗವದ್ಗೀತೆಯಲ್ಲಿ ಹೀಗಿದೆ. ಕುರಾನಿನಲ್ಲಿ ಹಾಗಿದೆ. ಬೈಬಲ್ ಹೀಗೆ ಹೇಳುತ್ತದೆ ಎಂದೆಲ್ಲಾ ಹೇಳುವ ಈ ಧಾರ್ಮಿಕ ಮುಖಂಡರ ವರ್ತನೆಯೇ ಬೇರೆ ಇರುತ್ತದೆ "ಮೂಲಭೂತವಾದಿಗಳ ಕೈಗೆ ಅಧಿಕಾರ ಕೊಟ್ಟರೆ ಭಾರತ ಇನ್ನೊಂದು ಅಫ್ಘಾನಿಸ್ತಾನವಾಗುತ್ತದೆ" "ಜಾತಿ ನಿರ್ಮೂಲನೆಯನ್ನು ಒಂದು ಚಳುವಳಿಯಾಗಿ ರೂಪಿಸಬೇಕಿದೆ".

- ತೇಜಸ್ವಿ

★ ★ ★

"ಇಮಾಮ್ ಭುಖಾರಿಯವರು ಅಫ್ಘಾನಿಸ್ತಾನದ ತಾಲಿಬಾನ್‌ಗೆ ಬೆಂಬಲ ಮಾಡುವುದಿದ್ದರೆ, ಭಾರತದ ಸರ್ಕಾರ ಅವರನ್ನು ಅಫ್ಘಾನಿಸ್ತಾನಕ್ಕೆ ಎತ್ತಿಹಾಕುವುದೇ ಒಳ್ಳೆಯದು."

★ ★ ★

"ನಾನು ಪಾಕಿಸ್ತಾನಿಯರಾದ ನಿಮ್ಮನ್ನು ಮಾತನಾಡಿಸುವಾಗ ಭಾರತೀಯನಾಗಿ ಮಾತನಾಡುವೆ, ಆದರೆ ನನ್ನ ದೇಶದಲ್ಲಿ ಶಿವಸೇನೆಯ ಠಾಕ್ರೆಯೊಂದಿಗೆ ಅಲ್ಪಸಂಖ್ಯಾತ ಸಮುದಾಯದ ಬಗ್ಗೆ ಚರ್ಚಿಸುವಾಗ ಭಾರತೀಯ ಮುಸ್ಲಿಂನಾಗಿ ಮಾತನಾಡುವೆ. ನನ್ನಿಂದ ಭಾರತದ ವಿರುದ್ಧವಾದುದೇ ಹೇಳಿಕೆ ನಿಮಗೆ ಲಭಿಸುವುದಿಲ್ಲ".

- ಸುಪ್ರಸಿದ್ಧ ಕವಿ **ಜಾವೇದ್ ಅಖ್ತರ್**.

★ ★ ★

ಕಳೆದ ವಾರ ಸುಪ್ರೀಂಕೋರ್ಟ್ ಒಂದು ಮಹತ್ವದ ತೀರ್ಪನ್ನು ನೀಡಿತು. ವಿಷಾದವೆಂದರೆ, ಕೆಲವೇ ಕೆಲವು ದಿನಪತ್ರಿಕೆಗಳು ಇದನ್ನು ಹೈಲೈಟ್ ಮಾಡಿ ಪ್ರಕಟಿಸಿದವು. ಮಿಕ್ಕವು ಮೂಲೆಯೊಂದರಲ್ಲಿ ತುರುಕಿದ್ದವು.

ತೆರೆದ ಸ್ಥಳಗಳಲ್ಲಿ ಮುಸ್ಲಿಂರಿಗೆ ನಮಾಜು ಮಾಡಲು ಅವಕಾಶ ನೀಡಬಾರದೆಂದು ಸುಪ್ರೀಂ ಕೋರ್ಟಿಗೆ ಮನವಿ ಸಲ್ಲಿಸಿದ್ದರ ಬಗ್ಗೆ ಈ ತೀರ್ಪಾಗಿತ್ತು.

ವಾರಣಾಸಿಯ ವ್ಯಾಪಾರಿ ಅರುಣ್ ಕುಮಾರ್ ಜೈಸ್ವಾಲ್ ಎಂಬುವವನು ಈ ಮನವಿಯನ್ನು ಸಲ್ಲಿಸಿದ್ದ. ಅವನ ಪ್ರಕಾರ ತೆರೆದ ಸ್ಥಳಗಳಲ್ಲಿ ಮುಸಲ್ಮಾನರು ನಮಾಜು ಮಾಡುವುದು ಇತರೆ ಧರ್ಮಗಳ ಜನರ ಧಾರ್ಮಿಕ ಭಾವನೆಗಳನ್ನು ನೋಯಿಸುತ್ತಿದೆ ಎಂದು.

ಅಲ್ಲಾ, ಬೆಂಗಳೂರನ್ನೇ ಉದಾಹರಣೆಯಾಗಿ ತೆಗೆದುಕೊಳ್ಳಿ, ಗಣೇಶ ಹಬ್ಬದ ಗಲಾಟೆಗಳು, ಅಯ್ಯಪ್ಪ ಸ್ವಾಮಿಗಳ 'ಸಂಗೀತ' ಗೋಷ್ಠಿಗಳು, ಒಂದು ತಿಂಗಳು ಪೂರ್ತಿ ನಡೆಯುವ ಕನ್ನಡ ರಾಜ್ಯೋತ್ಸವದ ಅರ್ಭಟ, ಪ್ರತಿನಿತ್ಯ ದೇವಸ್ಥಾನಗಳಿಂದ ಹೊಮ್ಮುವ ಭಕ್ತಿಗೀತೆಗಳು ಇವೆಲ್ಲಾ ಜನರ ನೆಮ್ಮದಿಯನ್ನು ಕೆಡಿಸುತ್ತಿದ್ದಾಗ್ಯೂ ಮಸೀದಿಗಳಿಂದ ಹೊರಬರುವ ನಮಾಜಿನ ಬಗ್ಗೆ ಮಾತ್ರ ಯಾಕೆ ಇಷ್ಟೊಂದು ಕಾಳಜಿ?

ಅದೇನೆ ಇರಲಿ, ಸುಪ್ರೀಂ ಕೋರ್ಟಿನ ಮೂರು ಸದಸ್ಯರ ನ್ಯಾಯಪೀಠ ಜೈಸ್ವಾಲ್‌ನ ಮನವಿಯನ್ನು ಖಡಾಖಂಡಿತವಾಗಿ ತಿರಸ್ಕರಿಸಿತ್ತಲ್ಲದೆ, "ರಾಷ್ಟ್ರದಲ್ಲಿ ರಕ್ತದ ಕೋಡಿ ಹರಿಯಲು ನಿಮ್ಮಂತಹವರೇ ಕಾರಣ" ಎಂದು ಛೀಮಾರಿ ಹಾಕಿತು. ಅಷ್ಟೇ ಅಲ್ಲದೆ, ಇಂತಹ ಕುಚೇಷ್ಟೆಯ ಮನವಿಯನ್ನು ಸಲ್ಲಿಸಿದ್ದಕ್ಕಾಗಿ ಆತ ಹತ್ತು ಸಾವಿರ ರೂಪಾಯಿಗಳನ್ನು ದಂಡವಾಗಿ ನೀಡಬೇಕೆಂದು ಆಜ್ಞೆ ನೀಡಿತು.

ಆದರೆ ಆ ಅರ್ಜಿದಾರನಿಗಿಂತಲೂ ಭಂಡನಾಗಿದ್ದ ಆತನ ವಕೀಲ ನ್ಯಾಯಪೀಠ ತನ್ನ ತೀರ್ಪನ್ನು ನೀಡಿದ ನಂತರವೂ ತನ್ನ ಕಕ್ಷಿದಾರನ ವಾದವನ್ನು ಮತ್ತೆ ಮಂಡಿಸಲು ಯತ್ನಿಸಿದ. "ನೀವು ಹೀಗೆ ನಿಮ್ಮ ವಾದವನ್ನು ಮುಂದುವರಿಸಿದರೆ, ದಂಡವನ್ನು ದ್ವಿಗುಣಗೊಳಿಸಲಾಗುವುದು" ಎಂದೂ ಎಚ್ಚರಿಕೆ ನೀಡಿತು ನ್ಯಾಯಪೀಠ!

ತನ್ನ ಕೈಗಳನ್ನು ರಕ್ತಸಿಕ್ತವಾಗಿರಿಸಿಕೊಂಡಿರುವ ನರೇಂದ್ರ ಮೋದಿ ಪರವಾಗಿ ಪ್ರಧಾನಿ ವಾಜಪೇಯಿ ನಿಂತಿರುವಾಗ, ಟಿಡಿಪಿಯ ಚಂದ್ರಬಾಬು ನಾಯ್ಡು ಹುಸಿ ಬಂಡಾಯ ಹೂಡಿರುವಾಗ, ಕಾಂಗ್ರೆಸ್ ಪಕ್ಷ ದಿಕ್ಕುದಿಶೆಯಿಲ್ಲದಂತೆ ವರ್ತಿಸುತ್ತಿರುವಾಗ, ದೇಶವನ್ನು ಕೋಮು ದ್ವೇಷವೇ ನಾಶ ಮಾಡುತ್ತಿರುವಾಗ, ನಮ್ಮ ಸುಪ್ರೀಕೋರ್ಟ್‌ನ್ನು ಕಂಡು ಸ್ವಲ್ಪವಾದರೂ ನಿರ್ಮಲವಾಗಿರಬಹುದು ಎಂದೆನಿಸುತ್ತದೆ.

- ಗೌರಿ ಲಂಕೇಶ್

ವಿಜಾಪುರ-ಗದಗ ಬ್ರಾಡ್‌ಗೇಜ್ ಕೇಂದ್ರಸರ್ಕಾರದ ನಿರ್ಲಕ್ಷ್ಯ

ವಿಜಾಪುರ ಜಿಲ್ಲೆ ಕರ್ನಾಟಕದ ಅತೀ ಹಿಂದುಳಿದ ಜಿಲ್ಲೆ ಎಂಬ ಹಣೆ ಪಟ್ಟಿ ಕಟ್ಟಿಕೊಂಡಿದೆ. ದೇಶದ ಅತೀ ಹಿಂದುಳಿದ 20 ಜಿಲ್ಲೆಗಳ ಪೈಕಿ ವಿಜಾಪುರವೂ ಒಂದು ಎಂದು ತಿಳಿದು ಬಂದಾಗ ಅಲ್ಲಿನ ಜನರ ಜೀವನ ಸ್ಥಿತಿ ಎಂಥವರಿಗೂ ಅರ್ಥವಾದೀತು. ಕಳೆದ 5-6 ಶತಮಾನಗಳಿಂದ ಈ ಜಿಲ್ಲೆ ಬರಗಾಲ ಪೀಡಿತವೆಂದು ದಾಖಲಾಗಿ ಇತಿಹಾಸ ಸೃಷ್ಟಿಸಿದೆ. ನದಿ ಕೊಳ್ಳಗಳು ಹರಿದರೂ ಜನತೆಗೆ ಅನುಕೂಲವಾಗುವಂತಹ ಪರಿಸ್ಥಿತಿಯನ್ನು ನಿರ್ಮಾಣ ಮಾಡಲು ಇದುವರೆಗೆ ನಮ್ಮನ್ನಾಳಿದ ಸರ್ಕಾರಗಳು ಮುಂದಾಗಿಲ್ಲ. ಜನ ಜಾನುವಾರು ಕುಡಿಯುವ ನೀರಿಗೂ ದಿನನಿತ್ಯ ಪರದಾಡುವಂತಾಗಿದೆ.

ದೇಶ ಬ್ರಿಟೀಷರ ಆಳ್ವಿಕೆಯಿಂದ ಮುಕ್ತವಾಗಿ ಅರ್ಧ ಶತಮಾನ ಕಳೆದರೂ ಆಡಳಿತದ ಚುಕ್ಕಾಣಿ ಹಿಡಿದ ಬಂಡವಾಳಶಾಹಿ, ಭೂಮಾಲಿಕ ವರ್ಗ ಇಲ್ಲಿನ ಜನರ ಜೀವನ ಮಟ್ಟ ಸುಧಾರಿಸುವ ಸಾಕಷ್ಟು ಪ್ರಯತ್ನ ಮಾಡುತ್ತಿಲ್ಲ. ಬದಲಿಗೆ ಜನತೆಯ ಮುಗ್ಧತೆಯನ್ನೇ ತಮ್ಮ ಮತ ಬ್ಯಾಂಕ್‌ಗಳಾಗಿ ಪರಿವರ್ತಿಸಿಕೊಂಡು ಜನರ ಬದುಕಿನ ಮೇಲೆ ಸವಾರಿ ನಡೆಸುತ್ತಿದ್ದಾರೆ. ಸಂಘಟನಾ ಪ್ರಜ್ಞೆ ಇಲ್ಲದ ಇಲ್ಲಿನ ಜನತೆಗೆ ತಮ್ಮ ಹಕ್ಕು , ಸೌಲಭ್ಯಗಳಿಗಾಗಿ ಜನಪ್ರತಿನಿಧಿಗಳೊಂದಿಗೆ ಚೌಕಾಶಿ ಮಾಡುವ ಶಕ್ತಿ ಇಲ್ಲದಂತಾಗಿದೆ. ಶತಮಾನಗಳಿಂದ ಬೆಳೆದು ಬಂದ ಮೌಢ್ಯಗಳು ಇನ್ನೂ ಇವರನ್ನು ಆವರಿಸಿವೆ. ಅನಕ್ಷರತೆ, ಬಡತನ, ಹಸಿವು, ದಾರಿದ್ರ್ಯ ಈ ಜನರ ಜೀವನದ ಒಂದು ಬಾಗವೇ ಆಗಿ ಹೋಗಿದೆ. ಆಳುವ ವರ್ಗದ ಶೋಷಣೆ ಯಾವುದೇ ಎಗ್ಗಿಲ್ಲದೇ ಸಾಗಿದೆ. ಬದುಕು ಸಾಗಿಸಲು ಉದ್ಯೋಗ ಅರಸಿ ದೂರದ ನಗರ ಪಟ್ಟಣಗಳಿಗೆ ವಲಸೆ ಹೋಗಿ ದುಡಿಯಲೇಬೇಕಾದ ಶೋಚನೀಯ ಪರಿಸ್ಥಿತಿಗೆ ಇಲ್ಲಿನ ಬಹುಪಾಲು ಬಡಜನರು ತಳ್ಳಲ್ಪಟ್ಟಿದ್ದಾರೆ.

ಇಲ್ಲಿನ ಜನತೆಯ ಬಹುದಿನದ ಬೇಡಿಕೆಗಳಾದ ವಿಜಾಪುರ-ಗದಗ ಬ್ರಾಡ್‌ಗೇಜ್, ವಿಜಾಪುರ ಕುಡಿಯುವ ನೀರಿನ ಸೌಲಭ್ಯ, ಮುಳವಾಡ ಏತ ನೀರಾವರಿ, ವಿದ್ಯುತ್ ಸಮಸ್ಯೆ, ಇವುಗಳು ಇನ್ನೂ ಯಾವುದೇ ಪರಿಹಾರ ಕಾಣದೇ ಜನತೆ ಸಂಕಷ್ಟದಲ್ಲೇ ಕಾಲ ನೂಕುವಂತಾಗಿದೆ. ಚುನಾವಣೆಯ ಸಮಯದಲ್ಲಿ ಭರವಸೆ ನೀಡುವ ಜನಪ್ರತಿನಿಧಿಗಳು ನಂತರ ವೈಯಕ್ತಿಕ ಶ್ರೇಯೋಭಿವೃದ್ಧಿಗಾಗಿಯೇ ತಮ್ಮ ಅಧಿಕಾರಾವಧಿಯನ್ನು ಕಳೆಯುತ್ತಾರೆ.

ಬ್ರಾಡ್‌ಗೇಜ್‌ಗಾಗಿ ಹೋರಾಟ

ಹಿಂದುಳಿದ ಪ್ರದೇಶದ ಅಭಿವೃದ್ಧಿಗೆ ರೈಲುಮಾರ್ಗ ನಿರ್ಮಾಣ ಪ್ರಮುಖವಾದದ್ದು. ಹುಟಗಿ-ಗದಗ ಬ್ರಾಡ್‌ಗೇಜ್ ಕಾಮಗಾರಿಯು 8ನೇ ಪಂಚವಾರ್ಷಿಕ ಯೋಜನೆ ಅವದಿಯಲ್ಲಿಯೇ ಕೈಗೆತ್ತಿಕೊಳ್ಳಲಾಗಿದ್ದರೂ ಇನ್ನೂ ಪೂರ್ಣಗೊಂಡಿಲ್ಲ. ಇದೇ ಯೋಜನೆಯಲ್ಲಿ ಕೈಗೆತ್ತಿಕೊಂಡ ಇತರೇ 7 ಯೋಜನೆಗಳು ಪೂರ್ಣಗೊಂಡಿದ್ದರೂ ವಿಜಾಪುರ-ಗದಗ ವರೆಗಿನ 100 ಕಿ.ಮೀನ ಬ್ರಾಡ್‌ಗೇಜ್ ಪರಿವರ್ತನಾ ಕಾಮಗಾರಿ ನನೆಗುದಿಗೆ ಬಿದ್ದಿದೆ.

ಮಹಾರಾಷ್ಟ್ರದ ಸೊಲ್ಲಾಪುರ, ಕರ್ನಾಟಕದ ವಿಜಾಪುರ, ಬಾಗಲಕೋಟೆ, ಗದಗ ಭಾಗದ ಸುಮಾರು 25 ಲಕ್ಷ ಜನರು ಇದರಿಂದ ವಂಚಿತರಾಗಿದ್ದಾರೆ.

ವರ್ಷಕ್ಕೊಮ್ಮೆ ಕೇಂದ್ರ ಸರ್ಕಾರ ತನ್ನ ಬಜೆಟ್‌ನಲ್ಲಿ ಈ ಯೋಜನೆಗೆಂದು 5-10 ಕೋಟಿ ರೂ. ಮಾತ್ರ ತೆಗದಿರಿಸುತ್ತಾ ಬಂದಿದೆ. ಈ ಸಾಲಿನ ಬಜೆಟ್‌ನಲ್ಲೂ ಕೇವಲ 20 ಕೋಟಿ ರೂ ಮಾತ್ರ ತೆಗೆದಿರಿಸಿದೆ. ಈ ಮೊತ್ತ ಅಲ್ಲಿನ ಸಿಬ್ಬಂದಿ ವೇತನ ಮತ್ತು ಯೋಜನಾ ವೆಚ್ಚ ಏರಿಕೆಗೆ (ವರ್ಷಕ್ಕೆ ಶೇ.5ರಷ್ಟು) ಮಾತ್ರ ಸಾಕಾಗುವಷ್ಟಿದ್ದು ಕಾಮಗಾರಿ ಮುಂದುವರೆಯುತ್ತಿಲ್ಲ. ರಾಜ್ಯ ಸರ್ಕಾರ ಈ ಸಾಲಿನ ತನ್ನ ಬಜೆಟ್‌ನಲ್ಲಿ 20 ಕೋಟಿ ರೂ.ಗಳನ್ನು ಈ ಯೋಜನೆಗೆ ಮೀಸಲಿಟ್ಟಿರುವುದು ಸ್ವಾಗತಾರ್ಹವೆನಿಸಿದರೂ ಯೋಜನೆ ಪೂರ್ಣಗೊಳ್ಳಲು ಇದಿಷ್ಟು ಮೊತ್ತ ಸಾಕಾಗುವುದಿಲ್ಲ.

ಗದಗ-ವಿಜಾಪುರ ಈಡೇರದ ಬ್ರಾಡ್‌ಗೇಜ್ ಪರಿವರ್ತನೆಯತ್ತ... ಹೋರಾಟದ ಪ್ರಯತ್ನದ ವರದಿ

ಹೋರಾಟ ಸಮಿತಿ ರಚನೆ

ಕಳೆದ ವರ್ಷ ವಿಜಾಪುರದಲ್ಲಿ ಬಿಕ್ಕುಬಾಯಿ ಸಹ ಅವರ ಅಧ್ಯಕ್ಷತೆ... ಬ್ರಾಡ್‌ಗೇಜ್ ಹೋರಾಟ ಸಮಿತಿ ಅಸ್ತಿತ್ವಕ್ಕೆ ಬಂದರೂ ಅದು ಕೇಂದ್ರ ಸರ್ಕಾರದ ಮೇಲೆ ಒತ್ತಡ ಬೀರುವಂತಹ ಯಾವುದೇ ಹೋರಾಟ ನಡೆಸದೇ ನಿಷ್ಕ್ರಿಯವಾಗಿತ್ತು. ಹೀಗಾಗಿ ಹೊಸದಾಗಿ ಮತ್ತೊಂದು ಹೋರಾಟ ಸಮಿತಿಯನ್ನು ವಕೀಲರಾದ ಶ್ರೀಧರ ಕುಲಕರ್ಣಿಯವರ ಸಂಚಾಲಕತ್ವದಲ್ಲಿ ರಚಿತವಾಗಿದೆ. ಈ ಸಮಿತಿಯಲ್ಲಿ ವಕೀಲರಾದ ಎಂ.ಎಂ.ಸುತಾರ, ವಿ.ಎಸ್.ವಾಡೆ, ಸಾಮಾಜಿಕ ಕಾರ್ಯಕರ್ತರಾದ ಅಲೆಕ್ಸಾಂಡರ್ ಸದಸ್ಯರಾಗಿರುತ್ತಾರೆ. ಸಿಪಿಐ(ಎಂ) ಒಳಗೊಂಡು ವಿವಿಧ ರಾಜಕೀಯ ಪಕ್ಷಗಳ, ಸಂಘ ಸಂಸ್ಥೆಗಳ ಮುಖಂಡರನ್ನೊಳಗೊಂಡ ಈ ಹೋರಾಟ ಸಮಿತಿ ಬ್ರಾಡ್‌ಗೇಜ್ ಪರಿವರ್ತನೆಗೆ ತೀವ್ರ ಹೋರಾಟ ನಡೆಸಲು ಮುಂದಾಗಿದೆ.

ರೈಲ್ವೆ ಸಚಿವರಿಗೆ ಮನವಿ

ರೈಲ್ವೆಯ ಪೂರಕ ಮುಂಗಡ ಪತ್ರದಲ್ಲಿ ವಿಜಾಪುರ ಗದಗ ಮಾರ್ಗದ ಗೇಜ್ ಪರಿವರ್ತನೆಗೆ ಪೂರ್ಣ ಪ್ರಮಾಣದ ಹಣ ಬಿಡುಗಡೆ ಮಾಡಬೇಕೆಂದು, ಬ್ರಾಡ್‌ಗೇಜ್ ಹೋರಾಟ ಸಮಿತಿ ಕೇಂದ್ರ ರೈಲ್ವೆ ಸಚಿವರಿಗೆ ಮನವಿಯೊಂದನ್ನು ಸಲ್ಲಿಸಿದೆ. ಪ್ರಧಾನ ಮಂತ್ರಿ ವಾಜಪೇಯಿ ಹಾಗೂ ಈ ಭಾಗದ ಸಂಸದರಿಗೂ ಸಹ ಮನವಿ ಪತ್ರ ಸಲ್ಲಿಸಿ, ಇದೂ ಸೇರಿದಂತೆ ನಾಲ್ಕು ಪ್ರಮುಖ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿದೆ. ವಿಜಾಪುರದಿಂದ ಮುಂಬೈಗೆ ಎಕ್ಸ್‌ಪ್ರೆಸ್ ರೈಲೊಂದನ್ನು ಆರಂಭಿಸಿ ಅದಕ್ಕೆ 'ಜಗಜ್ಯೋತಿ ಬಸವೇಶ್ವರ' ಎಕ್ಸ್‌ಪ್ರೆಸ್ ಎಂದು ನಾಮಕರಣ ಮಾಡಬೇಕೆಂದು ಸಮಿತಿ ಒತ್ತಾಯಿಸಿದೆ. ಮುಂದಿನ ದಿನಗಳಲ್ಲಿ ಜನತೆಯನ್ನು ಅಣಿ ನೆರಸಿ ತೀವ್ರತರ ಹೋರಾಟ ನಡೆಸಲು ಬ್ರಾಡ್‌ಗೇಜ್ ಹೋರಾಟ ಸಮಿತಿ ಸಿದ್ದತೆಯಲ್ಲಿದೆ. ಚಳುವಳಿಗೆ ಜನತೆಯು ಬಾಗವಹಿಸುವಿಕೆಯಿಂದ ಸಮಸ್ಯೆಗೆ ಉತ್ತರ ಕಂಡುಕೊಳ್ಳಬೇಕಾಗಿದೆ. ಆದರೆ, ಈ ಯೋಜನೆ ಜೊತೆಯಲ್ಲೆ ನಿಗದಿಪಡಿಸಿದ್ದ ಯೋಜನೆಗಳು ಪೂರ್ಣಗೊಂಡಿದ್ದರೂ ವಿಜಾಪುರ-ಗದಗ ಯೋಜನೆ ಪೂರ್ಣಗೊಳಿಸಿಲ್ಲವೇಕೆ? ಈ ಭಾಗದ ಜನರ ಪ್ರತಿನಿಧಿಯಾಗಿ ಆಯ್ಕೆಯಾಗಿರುವ ಸಂಸದ ಬಸನಗೌಡ ಪಾಟೀಲ ಯತ್ನಾಳರವರು ಕೇಂದ್ರ ತನ್ನ ಬಜೆಟ್‌ನಲ್ಲಿ ರೈಲ್ವೆ ಅಭಿವೃದ್ಧಿಗೆ ಕೇವಲ 20 ಕೋಟಿ ರೂಪಾಯಿ ನಿಗದಿಪಡಿಸಿರುವುದನ್ನು ಸ್ವಾಗತಿಸಿಸಿರುವುದೇಕೆ? ಸಂಸದ ವಿಜಯ ಸಂಕೇಶ್ವರ ಮಾಲೀಕತ್ವದ ಸಾರಿಗೆ ವ್ಯವಸ್ಥೆಗೆ ಅನುಕೂಲ ಮಾಡುವುದಕ್ಕಾಗಿ ಈ ನಾಟಕವೆ? ಎಂಬ ವಿಜಾಪುರ ಜನತೆಯ ಪ್ರಶ್ನೆಗೆ ಜನಪ್ರತಿನಿದಿಗಳೇ ಉತ್ತರಿಸಬೇಕಾಗಿದೆ.

ಶ್ರೀಧರ ಕುಲಕರ್ಣಿ- ಸಿದ್ದಯ್ಯ

ದಲಿತರಿಗೆ ಇಲ್ಲವಾದ ಯುಗಾದಿ

ಸಾತನೂರು ಹೋಬಳಿಯ ಮಳವಳ್ಳಿ ದಲಿತರಿಗೆ ಈ ಸಲದ ಉಗಾದಿ ಇಲ್ಲವಾಯಿತು. ಯಾಕೆ?

ಇಂದು ಉಗಾದಿ ಹಬ್ಬ. ಪ್ರಕೃತಿಯೂ ಸೇರಿದಂತೆ ಹೊಸ ಚೈತನ್ಯಕ್ಕೆ ಹಾತೊರೆಯುವ ಹಂಬಲ. ದಲಿತರ ಪಾಲಿಗಂತೂ ಉಗಾದಿ ಹಬ್ಬ ವರದಾನವೂ ಹೌದು. ಪುರಸೊತ್ತಿಲ್ಲದೆ ದುಡಿ-ದುಡಿದು ಮಾಸಿದ ಚಿಂದಿ ಬಟ್ಟೆಯಲ್ಲಿದ್ದವರು, ಸ್ನಾನ ಕಾಣದೆ ಇದ್ದವರು ಒಮ್ಮೆಗೆ ಎರಡು ಬಾರಿ ಎಣ್ಣೆ ಸೀಗೆಕಾಯಿ ಸ್ನಾನ ಮಾಡಿ ಹೇಗೋ ಸಂಪಾದಿಸಿದ ಹೊಸ ದಿರುಸುಗಳ ದರಿಸುವ ಹಬ್ಬ. ಕೂಲಿ-ನಾಲಿ ಮಾಡಿದ ಹಣದಿಂದ ಬಾಡೂಟದ ಜೋರು ಇದೆಲ್ಲಕ್ಕಿಂತ ಮಿಗಿರಾಗಿ ಒಂದೆರಡು ದಿವಸ ಕೆಲಸವಿಲ್ಲದೆ ವಿರಾಮ. ಇಂಥ ವರ್ಷಕ್ಕೊಂದಬ್ಬವಾದ ಉಗಾದಿ ಹಬ್ಬ ಮುಳಹಳ್ಳಿ ದಲಿತರ ಪಾಲಿಗೆ ಮುಳುವಾಗಿತ್ತು.

ಕನಕಪುರ ತಾಲ್ಲೂಕಿನ ಸಾತನೂರು (ಕುಖ್ಯಾತಿಯ ಡಿ.ಕೆ. ಶಿವಕುಮಾರ್ ಗೆದ್ದಿರುವ ಕ್ಷೇತ್ರ) ಹೋಬಳಿಯಲ್ಲಿ ಇರುವ ಮುಳಹಳ್ಳಿಯೆಂಬ ಗ್ರಾಮದಲ್ಲಿ ಮೇಲ್ಜಾತಿ ಭೂಮಾಲಿಕರ ರಾಜಕೀಯ ದಾಳಿಗಳಿಗೆ ಬಲಿಯಾಗಿ ಬೆಂದಿದ್ದಾರೆ. **ಮೊನ್ನೆ ತಾನೆ ಮುಗಿದ ಕನಕಪುರ ಲೋಕಸಭಾ, ಉಪಚುನಾವಣೆಯಲ್ಲಿ ಅರ್ಭಟಿಸಿದ ಕಾಂಗ್ರೇಸ್ ಮತ್ತು ದಳದ ನಾಯಕರು ಈ ಹಳ್ಳಿಯ ದಲಿತರು ನಮ್ಮ ಮಾತು ಕೇಳಲಿಲ, ನಮ್ಮ ಪಕ್ಷಕ್ಕೆ ಓಟು ಹಾಕಲಿಲ್ಲ ಎಂಬ ದ್ವೇಷದ ಕಿಚ್ಚನ್ನು ಹಚ್ಚಿ ದಲಿತರ ಕೇರಿಯಲ್ಲಿ ರಕ್ತದ ಓಕುಳಿಯಾಡಿದ್ದಾರೆ.**

ಮುಳಹಳ್ಳಿ ಗ್ರಾಮದಲ್ಲಿ ಮೇಲ್ಜಾತಿ ದಳದ ಒಂದು ಗುಂಪು ಮತ್ತು ಕಾಂಗ್ರೆಸಿನ ಗುಂಪು ದಲಿತ- ದಲಿತರಲ್ಲಿ ಎತ್ತಿ ಕಟ್ಟಿ ಸಾರಾಯಿಗಳನ್ನು ಕುಡಿಸಿ ಮಚ್ಚು- ದೊಣ್ಣೆಗಳಿಂದ ಹೊಡೆದಾಡಿಸಿದ್ದಾರೆ. ಹೊಟ್ಟೆ ಪಾಡಿಗಾಗಿ ಕೂಲಿ-ನಾಲಿ ಮಾಡಿ ಸಂಜೆ ಗುಡಿಸಲುಗಳಿಗೆ ಹಿಂದಿರುಗುತ್ತಿದ್ದ ಅಮಾಯಕ ಮುಗ್ಧ ದಲಿತರ ಮೇಲೆ ಹಲ್ಲೆ ಮಾಡಿಸಿದ್ದಾರೆ. ಮುದುಕರು ಹೆಂಗಸರು, ಮಕ್ಕಳು ಎನ್ನುವುದಕ್ಕಿಂತ ಮಿಗಿಲಾಗಿ ತನ್ನ ಒಡಹುಟ್ಟಿದ ಅಣ್ಣ ತಮ್ಮಂದಿರು ಎಂಬ ಅರಿವಿಲ್ಲದೆ ಕುಡಿದ ಮತ್ತಿನಲ್ಲೇ ಹೊಡೆದಾಡಿದ್ದಾರೆ. ಇತ್ತ ದಲಿತ ಕೇರಿಯಲ್ಲಿ ರಕ್ತಹರಿದರೆ, ಅತ್ತ ಮೇಲ್ಜಾತಿ ಕೇರಿಗಳಲ್ಲಿ ಎರಡು ಗುಂಪಿನವರು ಒಂದಾಗಿ ಕುಣಿದು ಕುಪ್ಪಳಿಸಿ, ಪೋಲೀಸಿನವರು ತಕರಾರು ತಮ್ಮ ಹತ್ತಿರ ಬಂದಂತೆ ವ್ಯವಸ್ಥೆ ಮಾಡಿಕೊಂಡು, ದಲಿತರನ್ನೆ ಬಂಧಿಸಲು ಪೋಲೀಸರಿಗೆ ತಿಳಿಸಿದರು. ಒಡಹುಟ್ಟಿದ ಅಣ್ಣ ತಮ್ಮಂದಿರುಗಳೇ ತಲೆ ತಲೆಗಳನ್ನು ಬಡಿದುಕೊಂಡು ಕೆಲವರು ಪೊಲೀಸರಿಂದ ತಪ್ಪಿಸಿಕೊಂಡು ಓಡಿದರು, ಓಡಲಾಗದ ವೃದ್ದರು ಪೋಲೀಸರ ಕೈ ಸೇರಿ ಬಂಧಿತರಾದರು. ಉಳಿದ ದಲಿತರು ಹೆಂಗಸರು ಮಕ್ಕಳನ್ನು ಬಿಟ್ಟು ಓಡಿದರು. ಏನು ತಪ್ಪುಗಳನ್ನು ಮಾಡದ ವಯಸ್ಸಾದ ಮುದುಕರ ತಲೆಗಳಿಗೆ ಪೆಟ್ಟು, ಹರಿಯುವ ರಕ್ತದಲ್ಲೇ ಆಸ್ಪತ್ರೆಗೂ ಹೋಗದೆ ಪೊಲೀಸ್ ಠಾಣೆಗೆ ಹೋಗುವಂತಾಯಿತ್ತು. ಊರೆಲ್ಲಾ ಬಿಕೊ ಎನ್ನುವ ಸ್ಥಿತಿ. ಹೆಂಗಸರು ಮಕ್ಕಳ ಅರೆ ಹೊಟ್ಟೆ ಉಪವಾಸ, ಗೋಳಾಟಗಳು ತಲೆಎತ್ತಿತು. ತಿಂಗಳು ಕಳೆದರೂ ಬೇಲ್ ಸಿಗಲಿಲ್ಲ. ಗಲಭೆ ಸೃಷ್ಟಿಸಿದ ಮಹಾಶಯರು ಎರಡೂ ಪಕ್ಷದ ರಾಜಕೀಯ ಮುಖಂಡರು ದೂರ ಉಳಿದರು. ಬೇಲ್ ಕೊಡಿಸುತ್ತೇವೆಂದು ಹೆದರಬೇಡಿರೆಂದವರು ನೀವೂ ನಮ್ಮ ಹತ್ತಿರ ಬರಬೇಡಿ ಎಂದರು.

ಈ ಮಧ್ಯ ದಲಿತರಿಗೆ ಹರುಷ ತರುವ ಉಗಾದಿ ಹಬ್ಬವೂ ಬಂತು. ಮೇಲ್ಜಾತಿಯವರಿಗೆ ಹಬ್ಬದ ಜೋರಾದರೆ ದಲಿತ ಹೆಗಸರು ಮಕ್ಕಳಿಗೆ ಗಂಜಿಯೂ ಇಲ್ಲದಂತಾಯಿತು. ಉಗಾದಿ ಹಬ್ಬದಂದು ಇತ್ತ ಬೇಲು ಸಿಗದೆ, ಪೋಲೀಸರ ಕಣ್ಣುತಪ್ಪಿಸಿ ಹೆಂಡತಿ ಮಕ್ಕಳ ಮುಖ ನೋಡುವ ಧೈರ್ಯವೂ ಇಲ್ಲದೆ ಓಡಿ ಹೋದ ದಲಿತರು ಕಂಗಾಲಾದರು. ಯಾರೋ ಮಾಡಿದ ತಪ್ಪಿಗೆ ಇಡೀ ದಲಿತ ಕೇರಿಯೇ ಸ್ಮಶಾನ ಮೌನವಾಗಿತ್ತು.

ಮೊದಲೇ ದಲಿತ ವಿರೋಧಿ ಡಿ.ಕೆ. ಶಿವಕುಮಾರ್ ಇಂಥ ಘಟನೆಗಳಿಗೆ ಕುಮ್ಮಕ್ಕು ಕೊಡುತ್ತಾನೆಯೇ ಹೊರತು ದಲಿತರಿಗೆ ನ್ಯಾಯ ಒದಗಿಸಿಕೊಡುವುದು ಅಸಾಧ್ಯದ ಮಾತು. ತಾನು ಓಟಿಗೆ ನಿಲ್ಲಲು, ನಾಮ ಪತ್ರ ಸಲ್ಲಿಸಲು ಈ ದಲಿತರು ಬೆಂಗಳೂರಿಗೆ ಲಾರಿಯಲ್ಲಿ ಬಂದಿದ್ದರು. ಡಿ.ಕೆ. ಶಿವಕುಮಾರ್ ಜಯವಾಗಲಿ ಎಂದು ಹಾರೈಸಿದ್ದರು. ಅದಕ್ಕಾಗಿ ಈ ದಲಿತರಿಗೆ ಈ ಶಿಕ್ಷೆಯಾಗಿದೆ. ಇತ್ತ ದಳದ ನಾಯಕರು ಸಹ ದೇವೇಗೌಡರು ಗೆದ್ದರೆ ನಿಮ್ಮ ಗುಡಿಸಲುಗಳಿಗೆ ಬದಲಾಗಿ ಹೆಂಚಿನ ಮನೆ, ಲೈಟ್, ನೀರು ಅನುಕೂಲ ಮಾಡುತ್ತೇವೆ ನಮ್ಮಲ್ಲಿ ಏಕೆ ಜಾತಿ ತಾರತಮ್ಯವೆಂದಿದ್ದವರು. ದಲಿತರಲ್ಲೇ ಬಡಿದಾಟ ಸೃಷ್ಟಿಸುವಲ್ಲಿ ನಿಸ್ಸೀಮರಾದರು.

ಸ್ವಾಭಿಮಾನ ಬಿಟ್ಟ ದಲಿತನಾಯಕರು

ತಲೆಗೊಂದು ಹೆಸರಿಟ್ಟುಕೊಂಡು ದಲಿತೊದ್ದಾರಕರೆಂದು ಪೋಸು ಕೊಡುವ ದಲಿತ ಸಂಘಟನೆಯ ನಾಯಕರು ಮುಳಹಳ್ಳಿಗೆ ಭೇಟಿ ಕೊಡಲಿಲ್ಲ. ದಲಿತರ ಹೆಸರೇಳಿ ಬಲಿತ ದಲಿತ ಮಂತ್ರಿಗಳ್ಯಾರು ಇತ್ತ ತಲೆ ಕೆಡಿಸಿಕೊಳ್ಳಲಿಲ್ಲ, ಮೊದಲಾಗಿ ಈ ಘಟನೆ ಹೊರಗೆ ಬರದಂಗೆ ನೋಡಿ ಕೊಳ್ಳಲಾಯಿತು. ಸುತ್ತ ಮುತ್ತಲಿನ ದಲಿತ ವಿದ್ಯಾವಂತ ಯುವಕರು ನರ ಸತ್ತವರಂತೆ ಮುಗುಮ್ಮಾಗಿ ಬಿಟ್ಟರು. ಇಂಥ ಘಟನೆಗಳು ದಿನನಿತ್ಯ ನಡೆಯುತ್ತಿರುತ್ತವೆ. ಅಮಾಯಕ ದಲಿತರು ದೌರ್ಜನ್ಯಕ್ಕೆ ಸಿಲುಕುತ್ತಿದ್ದಾರೆ. ಇಂದು ದಲಿತ ಸಂಘಟನೆಗಳು ಸ್ವಾರ್ಥ ಸಂಘಟನೆಗಳಾಗಿ ಬೆಳೆಯುತ್ತಿವೆ. **ದಲಿತರನ್ನು ಉದ್ದಾರ ಮಾಡುತ್ತೇವೆಂದು ಬಂದ ಬಿಎಸ್‌ಪಿ ಹಿಂದಿನಿಂದಲೂ ದಲಿತರ ಪರಮ ವೈರಿಯಾದ ಬಿಜೆಪಿ, ಕಾಂಗ್ರೆಸ್ ಜೊತೆ ಮೈತ್ರಿ ಮಾಡಿಕೊಳ್ಳಲು ಹೊರಟಿದೆ. ಇಂಥ ದ್ರೋಹ ಬಿಎಸ್‌ಪಿ ದಲಿತರಿಗೆ ಬಗೆಯುತ್ತದೆಂದೂ ಮುಗ್ಧ ದಲಿತರೂ ಎಂದೂ ಯೋಚಿಸಿರಲಿಲ್ಲ. ಇದೊಂದು ಬಿಎಸ್‌ಪಿ ದಲಿತರಿಗೆ ಬಗೆದ ಮಹಾ ದ್ರೋಹವೇ ಆಗಿದೆ.** ಇನ್ನಾದರೂ ಹೊಸ ತಲೆ ಮಾರಿನ ದಲಿತ ಯುವಕರು ಗುಡುಗಬೇಕಿದೆ. ಪಾಳೆಗಾರಿ, ಬಂಡವಾಳ ಶಾಹಿ, ಸಾಮ್ರಾಜ್ಯಶಾಹಿ ವ್ಯವಸ್ಥೆ ಇರುವ ವರೆಗೂ ದಲಿತರು ಬಡವರು ಇಂಥ ಆಳುವ ಕುತಂತ್ರಿಗಳ ರಾಜಕೀಯ ದಾಳಗಳಾಗುವುದನ್ನು ತಪ್ಪಿಸಲು ಪ್ರಜಾಸತ್ತಾತ್ಮಕ ಸಂಘಟನೆಗಳ ಜೊತೆ ಒಗ್ಗೂಡಬೇಕಿದೆ.

[illegible]

ಹೊಣೆಗಾರಿಕೆ ನಿರಾಕರಿಸುವ ಫ್ಯಾಸಿಸ್ಟರು



ಫ್ಯಾಸಿಸ್ಟರ ಒಂದು ಪ್ರಮುಖ ಗುಣವೆಂದರೆ ಹೊಣೆಗಾರಿಕೆಯನ್ನು ನಿರಾಕರಿಸುವುದು, ಗುಜರಾತಿನ ದಳ್ಳುರಿ, ಮಾರಣ ಹೋಮ ಕುರಿತು ಲೋಕಸಭೆಯ ಉಪಸಭಾಪತಿಗಳು ಚರ್ಚೆಯ ನಂತರ ಮತ ಚಲಾಯಿಸಲು ಅವಕಾಶ ಒದಗಿಸುವ ನಿಯಮ 184ರನ್ವಯ ಲೋಕಸಭೆಯಲ್ಲಿ ಚರ್ಚೆಗೆ ಅನುಮತಿಸಿರುವ ರೂಲಿಂಗ್ ನೀಡಿರುವುದರ ಕುರಿತು ಪ್ರಧಾನ ಮಂತ್ರಿಗಳು ದುರಾದೃಷ್ಟಕರ ಎಂದು ಪ್ರತಿಕ್ರಿಯಿಸಿರುವುದು ಇದರ ಪ್ರತಿಫಲನ.

ಹೊಣೆಯಿಂದ ನುಣುಚಿಕೊಳ್ಳುವಿಕೆ

ವಿರೋಧ ಪಕ್ಷಗಳು ಹಕ್ಕು ಚ್ಯುತಿ ಮಂಡನೆಗೆ ನೋಟೀಸ್ ನೀಡಿರುವ ಪರಿಣಾಮವಾಗಿ ಪ್ರಧಾನಿಗಳು ತಮ್ಮ ಮೊದಲ ಪ್ರತಿಕ್ರಿಯೆಯಿಂದ ಹಿಂದೆ ಸರಿದಿದ್ದಾರೆ. ಪ್ರಧಾನಿಗಳ ಪ್ರತಿಕ್ರಿಯೆ ಮತ್ತು ಅದರಿಂದ ಹಿಂದೆ ಸರಿಯುವಿಕೆ ಎರಡೂ ಅವರ ಯೋಜಿತ ಉದ್ದೇಶದ ಭಾಗವಾಗಿದೆ. ವಿವಿಧ ವಿಭಾಗಗಳ ಮುನ್ನಣೆ ಪಡೆಯಲು ಈ ರೀತಿ ಪ್ರತಿಕ್ರಿಯೆ ನಿರಾಕರಣೆಯನ್ನು ಮಾಡಲಾಗಿದೆ. ಮೊದಲನೆ ಪ್ರತಿಕ್ರಿಯೆ ಕಾವಿ ಪಡೆಗಳಿಗಾದರೆ ನಂತರದ ನಿರಾಕರಣೆ ಉದಾರವಾದಿ ಪ್ರಜಾಪ್ರಭುತ್ವವಾದಿಗಳಿಗೆ ರಾಷ್ಟ್ರ ಹುಗು ಜನತೆ ಈ ಆಷಾಡಭೂತತನ ಮತ್ತು ಇಬ್ಬಗೆಯ ಮಾತುಗಾರಿಕೆಯನ್ನು ಗಮನಿಸಿದ್ದಾರೆ. ಮಾನ್ಯ ವಾಜಪೇಯಿರವರ ಎಲ್ಲಾ ಮುಖವಾಡಗಳು ಕಳಚಿಬಿದ್ದು, ಮತ್ತಾವುದೆ ಮುಖವಾಡ ಧರಿಸಲು ಇಲ್ಲವಾಗಿವೆ.

ಗುಜರಾತಿನ ಜನರ ಹತ್ಯೆ ಕುರಿತು ಸರ್ವೋಚ್ಚ ನ್ಯಾಯಾಲಯದ ಹಾಲಿ ನ್ಯಾಯಾದೀಶರಿಂದ ತನಿಖೆ ನಡೆಸಬೇಕೆಂಬ ಅಲ್ಪಸಂಖ್ಯಾತರ ರಾಷ್ಟ್ರೀಯ ಆಯೋಗದ ಶಿಫಾರಸ್ಸನ್ನು ಗೃಹ ಸಚಿವರು ನಿರಾಕರಿಸಿರುವ ಹಿಂದೆಯೂ ಸಹಾ ಹೊಣೆಗಾರಿಕೆಯಿಂದ ನುಣಚಿಕೊಳ್ಳುವ ಅಂಶ ಅಡಗಿದೆ.

ಗುಜರಾತಿನಲ್ಲಿ ಮಾನವ ಹಕ್ಕುಗಳ ತೀವ್ರ ಉಲ್ಲಂಘನೆ ಕುರಿತು ಬಾರತದಲ್ಲಿನ ವಿದೇಶ ಧೂತಾವಾಸಗಳು ತೀವ್ರ ಆತಂಕಕ್ಕೊಳಗಾಗಿರುವಾಗ ವಿದೇಶಾಂಗ ವ್ಯವಹಾರಗಳ ಸಚಿವಾಲಯ, ವಿದೇಶಗಳಲ್ಲಿ ನೀವು ತಪ್ಪು ಮಾಹಿತಿಗಳ ವಿಚಾರವನ್ನು ಹರಿಬಿಟ್ಟಿದೆ. ಗುಜರಾತಿನಲ್ಲಿ ಎಲ್ಲಾ ಸಹಜ ಸ್ಥಿತಿಯಲ್ಲಿದೆ ಎಂಬ ಅಭಿಪ್ರಾಯ ಮೂಡಿಸಲು ತಾಳೆಯಿಲ್ಲದ ಅಂಕಿ ಸಂಖ್ಯೆ ಹಾಗೂ ಮಾಹಿತಿಯನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವೆಬ್‌ಸೈಟ್‌ಗೆ ತುಂಬಲಾಗಿದೆ. ಇದೇ ಸರ್ಕಾರದ ಪ್ರಸಕ್ತ ವಿದೇಶಾಂಗ ನೀತಿಯಾಗಿ ಮಾರ್ಪಟ್ಟಿದೆ.

ಅಪ್ರಬುದ್ಧ ಪ್ರಸ್ತಾವ

ಈಗಂತೂ ಸಂಸತ್ತಿನ ಎರಡೂ ಸದನಗಳು ಈ ಕುರಿತು ಚರ್ಚಿಸಿ, ಮತ ಚಲಾಯಿಸಲಿವೆ. ಆದಕಾರಣ ಬಿ.ಜೆಪಿ ತನ್ನ ತಂತ್ರವನ್ನು ಬದಲಿಸಿ ವಿರೋಧ ಪಕ್ಷಗಳು ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿನ ಕಾನೂನು ಸುವ್ಯವಸ್ಥೆ ಕುರಿತು ಚರ್ಚೆ ನಡೆಸುವುದರ ಬಗ್ಗೆ ಪ್ರಸ್ತಾಪಿಸುತ್ತಿವೆ.

ಕೊನೆಗೂ ಗುಜರಾತ್ ಹತ್ಯಾಕಾಂಡದ ಬಗ್ಗೆ 184 ರ ಕಲಮಿನಡಿ ಸಂಸತ್ತಿನಲ್ಲಿ ಚರ್ಚಿಸಲು ಪ್ರಕಟಿಸಿಯಾಗಿದೆ. ಆದರೆ ತಮ್ಮ ಹೊಣೆಗಾರಿಕೆ ಒಪ್ಪದ ಫ್ಯಾಸಿಸ್ಟ್ ಸಂತರು ಪ.ಬಂಗಾಳ, ಬಿಹಾರದ ಬಗ್ಗೆ ಚರ್ಚೆ ಮಾಡುವುದಾಗಿ ಹೇಳುತ್ತಿದ್ದಾರೆ

ಈ ಪ್ರತಿಕ್ರಿಯೆ ಒಂದು ರೀತಿ ಬಾಲಿಶ, ಅಪ್ರಬುದ್ಧ ಮತ್ತು ದಿಕ್ಕು ತಪ್ಪಿಸುವುದಾಗಿದೆ. ವಿರೋಧ ಪಕ್ಷಗಳು ಕೇವಲ ಕಾನೂನು ಸುವ್ಯವಸ್ಥೆ ಕುಸಿದಿದೆ ಎಂಬ ಕಾರಣಕ್ಕಾಗಿ ಸಂಸತ್ತಿನಲ್ಲಿ ಚರ್ಚೆಗೆ ಒತ್ತಾಯಿಸಿಲ್ಲ. ಅಮಾನವೀಯ ಫ್ಯಾಸಿಸ್ಟ್ ಪೋಗ್ರಾಮ್ (ಒಂದು ಜನಾಂಗವನ್ನು ಇಡಿಯಾಗಿ ಗುರಿಯಾಗಿಸಿ ಹತ್ಯೆಗೈಯ್ಯುವುದು) ಯಾವುದು ಗುಜರಾತ್‌ನಲ್ಲಿ ನಡೆದಿದೆ, ನಡೆಯುತ್ತಿದೆ ಅದಕ್ಕೆ ಸರ್ಕಾರ ಉತ್ತೇಜಿಸುತ್ತಿರುವುದು, ಬೆಂಬಲಿಸುತ್ತಿರುವುದು, ಜಾರಿಮಾಡುತ್ತಿರುವುದರ ಕುರಿತು, ಆ ನಿಟ್ಟಿನಲ್ಲಿ ಸರ್ಕಾರ ವಹಿಸಬೇಕಿದ್ದ ವಹಿಸದಿರುವ ಸಂವಿಧಾನಿಕ ಕರ್ತವ್ಯಗಳ ಚ್ಯುತಿ ಕುರಿತು ಚರ್ಚಿಸಲು ವಿರೋಧ ಪಕ್ಷಗಳು ಒತ್ತಾಯಿಸುತ್ತಿರುವುದು. ಇಂತಹ ಅಘಾತಕಾರಿ ಘಟನೆಗಳು ದೇಶದ ಯಾವುದೇ ರಾಜ್ಯದಲ್ಲಿ ನಡೆದರು, ಅದರ ಕುರಿತು ಚರ್ಚಿಸಿ, ಪರಿಹಾರೋಪಾಯ ಸೂಚಿಸುವುದು ಸಂಸತ್ತಿನ ಕರ್ತವ್ಯ ಮತ್ತು ಮಧ್ಯ ಪ್ರವೇಶಿಸಿ ಅಲ್ಲಿ ಶಾಂತಿ- ಸುವ್ಯವಸ್ಥೆ ಮರುಕಳಿಸುವಂತೆ ಮಾಡುವುದು, ತಪ್ಪಿತಸ್ತರನ್ನು ಶಿಕ್ಷೆಗೆ ಒಳಪಡಿಸುವುದು ಕೇಂದ್ರ ಸರ್ಕಾರದ ಕರ್ತವ್ಯ.

ಮರೆತ ವಾಜಪೇಯಿ

ವಾಜಪೇಯಿ ನೇತೃತ್ವದ ಕೇಂದ್ರ ಸರ್ಕಾರ ಮಾತ್ರ ಮಧ್ಯಪ್ರವೇಶಿಸಲು ನಿರಾಕರಿಸಿದೆ. ಗುಜರಾತ್ ಮುಖ್ಯಮಂತ್ರಿ ಹಾಗೂ ಅವರ ಆಡಳಿತ ಕಾರಣಭೂತವಾಗಿರುವ ಗುಜರಾತಿನಲ್ಲಿ ನಡೆದಿರುವ ಪೋಗ್ರಾಮ್‌ನಲ್ಲಿ ಇವರೂ ಸಹಾ ಭಾಗಿಗಳಾಗಿರುವ ಕಾರಣ ಅದರ ಕುರಿತು ಚರ್ಚೆಯನ್ನೆ ಅವರು ನಿರಾಕರಿಸುತ್ತಿದ್ದಾರೆ. ಇದರಿಂದ ಅರ್ಥವಾಗುವ ಅಂಶವೆಂದರೆ ಇದರ ಕುರಿತು ಚರ್ಚಿಸಲು ಅವಕಾಶ ಮಾಡಿಕೊಡಬಾರದೆಂಬ ಉದ್ದೇಶ ಅವರದಾಗಿದ್ದ ಕಾರಣ ಇಡೀ ಒಂದು ವಾರ ಸಂಸತ್ತನ್ನು ನಡೆಯದಿರುವಂತೆ ಮಾಡಿದರು.

ಈ ಕುರಿತು ಎರಡೂ ಸದನಗಳಲ್ಲಿನ ಚರ್ಚೆ ಮುಂದಿನ ದಿನಗಳಿಗೆ ಒಂದು ಕೆಟ್ಟ ಮೇಲ್ಪಂಕ್ತಿಯನ್ನು ಹಾಕಿಕೊಡಲಿದೆ ಎಂಬ ಬಿಜೆಪಿ ವಾದದಲ್ಲಿ ಹುರುಳಿಲ್ಲಾ. ರಾಷ್ಟ್ರದ ಹಿತಕ್ಕೆ ಧಕ್ಕೆ ತರುವಂತಾ ಘಟನೆಗಳು ಈ ಹಿಂದೆ ರಾಜ್ಯಗಳಲ್ಲಿ ನಡೆದಾಗ, ಬಹಳಷ್ಟು ರಾಜ್ಯಗಳ ವಿಷಯಗಳ ಕುರಿತು ಸಂಸತ್ತಿನಲ್ಲಿ ಚರ್ಚಿಸಲಾಗಿದೆ. **ಪ್ರಧಾನ ಮಂತ್ರಿಗಳ ನೆನಪಿನ ಶಕ್ತಿ ಕ್ಷೀಣವಾಗಿರುವ ಕಾರಣ ಅವರಿಗೆ ನಾವು ನೆನೆಪಿಸಬೇಕಿದೆ. ಅವರೇ ಸ್ವತಃ ವಿರೋಧ ಪಕ್ಷದ ನಾಯಕರಾಗಿ ಬಿಹಾರದ ಕಾನೂನು ಸುವ್ಯವಸ್ಥೆ ಕುರಿತು ನಿಯಮ 184 ರನ್ವಯ ಚರ್ಚಿಸುವ ಗೊತ್ತುವಳಿಯನ್ನು ಲೋಕಸಭೆಯಲ್ಲಿ ಮಂಡಿಸಿದ್ದರು.** ಹಾಗೆಯೇ 1997ರಲ್ಲಿ ಮಹಾರಾಷ್ಟ್ರದಲ್ಲಿ ನಡೆದ ದಲಿತರ ಮೇಲಿನ ಗೋಲಿಬಾರ್‌ನಲ್ಲಿ ಕುರಿತು ಸಹಾ ಸಂಸತ್ತಿನಲ್ಲಿ ಚರ್ಚಿಸಲಾಗಿದೆ.

ಚರ್ಚೆ ಅನಿವಾರ್ಯ


ಈ ಗುಜರಾತ್ ಘಟನೆಗಳು ನೇರವಾಗಿ ರಾಷ್ಟ್ರದ ಐಕ್ಯತೆ ಸಮಗ್ರತೆಯನ್ನು ಭಾದಿಸುವುದರಿಂದ, ಇದರ ಕುರಿತು ಚರ್ಚೆ ಅಗತ್ಯ ಅನಿವಾರ್ಯವಾಗಿದೆ. ಸಂಘ ಪರಿವಾರದ ದುಷ್ಟ ಆಟದ ಭಾಗವಾಗಿ ಇದನ್ನೆಲ್ಲಾ ನಡೆಸಿ, ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತದ ಗಣರಾಜ್ಯವನ್ನು ಹಾಳುಗೆಡವಿ ಅದರ ಜಾಗದಲ್ಲಿ ಫ್ಯಾಸಿಸ್ಟ್ 'ಹಿಂದೂ ರಾಷ್ಟ್ರ' ನಿರ್ಮಿಸುವುದು ಅವರ ಉದ್ದೇಶವಾಗಿರುವ ಕಾರಣ, ದೇಶದ ಸಂಸತ್ತು ಈ ಕುರಿತು ಚರ್ಚಿಸಲೇಬೇಕಿದೆ.

ಭಾರತದ ಜನತೆ ಬಿಜೆಪಿ ಮತ್ತು ಸಂಘ ಪರಿವಾರದವರು ಹೊಣೆಗಾರಿಕೆಯಿಂದ ನುಣಚಿಕೊಳ್ಳಲು ಬಿಡುವುದಿಲ್ಲಾ. ಅಂತೆಯೆ ಎನ್.ಡಿ.ಎ ಮಿತ್ರ ಪಕ್ಷಗಳು ಒಂದೆಡೆ ಜಾತ್ಯಾತೀತತೆಗೆ ತಮ್ಮ ಬದ್ಧತೆ ವ್ಯಕ್ತಪಡಿಸುತ್ತಲೆ ಮತ್ತೊಂದೆಡೆ ಚರ್ಚೆಯ ನಂತರ ಸದನದ ಅಭಿಪ್ರಾಯ ರೂಪಿಸುವ ಪ್ರತಿಕ್ರಿಯಿಸುವ ಮತದಾನದಲ್ಲಿ ಮತದಾನ ಮಾಡದೇ ಹೋದರೆ, ಅಥವ ಸರ್ಕಾರದ ಜೊತೆ ಮತ ಚಲಾಯಿಸಿದರೆ ಜನತೆಯು ಅವರ ಸೋಗಲಾಡಿತನವನ್ನು ಅರಿಯಲಿದ್ದಾರೆ ಮತ್ತು ಅದಕ್ಕೆ ಸೂಕ್ತ ಪಾಠವನ್ನು ಕಲಿಸಲಿದ್ದಾರೆ.

- ಕೆ.ಎನ್.ಉಮೇಶ್

ಏಕೆ ಈ ಗದ್ದಲ? 184 ಹೇಳುವುದೇನು?

ಕೆ.ಎನ್.ಉಮೇಶ್



ಪಿ.ಎಂ.ಸೈಯದ್
ಉಪ ಸಭಾಧ್ಯಕ್ಷರು

ದೇಶದ ತುಂಬೆಲ್ಲಾ ಗುಲ್ಲು. ಸಂಸತ್ತಿನ ಎರಡು ಸದನಗಳು ಒಂದು ವಾರ ಕಾಲ ನಡೆಯಲಿಲ್ಲ. ವಿರೋಧ ಪಕ್ಷಗಳು ಸಮಸ್ಯೆಯಲ್ಲದ ಗುಜರಾತ್ ವಿಷಯಯನ್ನು ಸಮಸ್ಯೆಯಾಗಿಸಿ, ನಿಯಮ 184 ರಲ್ಲಿಯೆ ಚರ್ಚಿಸಬೇಕೆಂದು ಹಟಹಿಡಿಯುತ್ತಿದ್ದಾರೆ. ಸಾರ್ವಜನಿಕ ಹಣವನ್ನು ಪೋಲು ಮಾಡುತ್ತಿದ್ದಾರೆ. ಚರ್ಚಿಸಲು ಬಹಳ ವಿಷಯಗಳಿವೆ, ಆದರೆ ಸಮಯ ವ್ಯರ್ಥಮಾಡುತ್ತಿದ್ದಾರೆ. ನಿಯಮ 193 ರಲ್ಲಿ ಚರ್ಚಿಸೋಣ ಎಂದು ಬಿಜೆಪಿ ಇನ್ನೊಂದೆಡೆ ಹಠ ಹಿಡಿದಿತ್ತು. ಅಂತಿಮವಾಗಿ ಲೋಕಸಭೆಯ ಉಪಸಭಾಪತಿಗಳು ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ಮಧ್ಯೆ ಒಮ್ಮತ ಏರ್ಪಡದಿದ್ದ ಕಾರಣ, ಎರಡು ಕಡೆಯ ವಿಚಾರ ಆಲಿಸಿ, ನಿಯಮ 184 ರಡಿ ಚರ್ಚೆ ನೆಡಸಲು ರೂಲಿಂಗ್ ನೀಡಿದ ಕಾರಣ ಲೋಕಸಭೆಯ ಕಲಾಪಗಳು ಸುಸೂತ್ರವಾಗಿ ನಡೆಯುವಂತಾಯಿತು.

ಸಂಸತ್ತನ್ನು ನಡೆಸಲು, ಯಾವ ಯಾವ ವಿಷಯವನ್ನು ಹೇಗೆ ಚರ್ಚಿಸಬೇಕು ಎಂಬುದಕ್ಕೆ ಸಂಸದೀಯ ಕಲಾಪಗಳ ನಿಯಮಾವಳಿಗಳಿವೆ. ಆ ನಿಯಮಗಳಲ್ಲಿ ಲೋಕಸಭೆಗೆ ಸಂಬಂಧಪಟ್ಟಂತೆ ನಿಯಮ 184 ಅತಿ ಮುಖ್ಯವಾದದ್ದು. ಈ ನಿಯಮದಡಿ ಗಂಭೀರವಾದ ವಿಷಯವನ್ನು ಆಳ, ಅಗಲ, ವಿಸ್ತಾರ, ತೀವ್ರತೆಯನ್ನು ಪರಿಗಣಿಸಿ, ಇಡೀ ಸದನ ತನ್ನ ಅಂದರೆ ಸದನದ ಅಭಿಪ್ರಾಯವನ್ನು ವ್ಯಕ್ತ ಪಡಿಸಲು ಸಾಧ್ಯವಿದೆ. ಸದನ ಅಭಿಪ್ರಾಯ-ಅಭಿಮತ ಎಂದಾಗ, ಸದನದಲ್ಲಿ ಒಮ್ಮತವಿರದಿದ್ದರೆ, ಚರ್ಚಿತ ವಿಷಯ ಕುರಿತು ಸದನದ ಅಭಿಪ್ರಾಯ ರೂಪಿಸಲು ಸದನದಲ್ಲಿ ಮತಗಣನೆ, ಮೂಲಕ ಬಹುಮತ-ಅಲ್ಪಮತದ ಆಧಾರದಲ್ಲಿ ಚರ್ಚಿತ ವಿಷಯ ಕುರಿತು ಸದನದ ಅಭಿಪ್ರಾಯ ವ್ಯಕ್ತಪಡಿಸಲಾಗುವುದು. ವಿರೋಧ ಪಕ್ಷಗಳು ಗುಜರಾತ್‌ನಲ್ಲಿ ಕಳೆದ ಒಂದುವರೆ ತಿಂಗಳುಗಳ ಕಾಲ ನಡೆದ ಇಂದಿಗೂ ನಡೆಯುತ್ತಿರುವ 'ಜನಹತ್ಯೆ' ಕುರಿತು, ಇಂತಹ ಗಂಬೀರ ವಿಷಯ ನಿಯಮ 184 ರನ್ವಯ ಚರ್ಚಿಸಬೇಕೆಂದು, ಆಮೂಲಕ ಈ ಜನಹತ್ಯೆಗೆ ಕಾರಣರಾದವರಿಗೆ ಸಂಸತ್ತಿನ ಮೂಲಕ ರಾಷ್ಟ್ರದ ಅಭಿಪ್ರಾಯಯವನ್ನು ವ್ಯಕ್ತಪಡಿಸಬೇಕು. ಎಂಬ ಸಂದೇಶ ಕಳುಹಿಸಲು ಬಯಸಿದವು. ಆದರೆ, ಆಡಳಿತಾರೂಢ ವೈತ್ರಿಕೂಟದ ನಾಯಕತ್ವವಹಿಸಿರುವ ಬಿಜೆಪಿ ಮತ್ತು ಪ್ರಧಾನಿಯಾದಿಯಾಗಿ ಅವರ ಸಚಿವ ಸಂಪುಟ ನಿಯಮ 193 ರಡಿಯಲ್ಲಿ ಚರ್ಚಿಸಬಹುದೆಂದು ಹಠಹಿಡಿದಿದ್ದಕ್ಕೆ ಕಾರಣ ನಿಯಮ 193 ರಡಿಯಲ್ಲಿ ಘಂಟೆಯವರೆಗೆ ಮಾತ್ರ ಚರ್ಚಿಸಬಹುದು. ಆದರೆ ಸದನದ ಅಬಿಪ್ರಾಯ ಅಥವಾ ಮತದಾನದ ಅವಕಾಶವಿರದು. ವಾಗ್ದಂಡನೆಗಂತೂ ಅವಕಾಶವಿರದು, ಅದೊಂದು ರೀತಿ ವಿಸ್ತೃತ ಪ್ರಶ್ನೋತ್ತರ ಎಂದರೆ ತರಪ್ಪಾಗಲಾರದು.

ಇದೇ ರೀತಿ ರಾಜ್ಯಸಭೆಗೆ ಸಂಬಂಧಪಟ್ಟಂತೆ ಲೋಕಸಭೆಯ ಕಲಾಪ ನಿಯಮ 184 ಕ್ಕೆ ಸಮಾನವಾಗಿ ನಿಯಮ 170 ಇದ್ದರೆ, ಲೋಕಸಭೆಯ ನಿಯಮ 193 ಕ್ಕೆ ಸಮಾನವಾಗಿ ನಿಯಮ 176 ಇದೆ. ಅಲ್ಲೂ ಸಹಾ ಮೇಲೆ ಹೇಳಿದಂತೆಯೆ ಲೋಕಸಭೆಯ ಕಲಾಪಗಳ ನಿಯಮ 184 ನಿಯಮ 193 ರ ನಡುವೆ ಇರುವ ವ್ಯತ್ಯಾಸವೇ ರಾಜ್ಯಸಭೆ ಕಲಾಪಗಳ ನಿಯಮ 170 ಮತ್ತು 176 ರ ನಡುವೆ ಇರುವ ವ್ಯತ್ಯಾಸ. ಲೋಕಸಭೆಯಲ್ಲಿ ನಿಯಮ 184 ರಡಿ ಚರ್ಚಿಸುವುದೆಂದಾಗಿದೆ. ಪ್ರಸ್ತುತ ಈ ನಿಯಮದಡಿ ಲೋಕಸಭೆ ಹಾಗು ರಾಜ್ಯಸಭೆಗಳಲ್ಲಿ ಚರ್ಚೆ ನಡೆದು, ರಾಷ್ಟ್ರದ ಅಭಿಮತವಾಗಿ, ರಾಷ್ಟ್ರದ ಜಾತ್ಯಾತೀತ, ಪ್ರಜಾಸತ್ತಾತ್ಮಕ, ಗಣರಾಜ್ಯದ ಸಾರ್ವಭೌಮತೆಯ ಪ್ರತೀಕವಾದ ಸಂಸತ್ತಿನ ಎರಡೂ ಸದನಗಳಲ್ಲೂ ಸಾವಿರಾರು ಜನರ, ಅಲ್ಪಸಂಖ್ಯಾತರ ಮಾರಣಹೋಮಕ್ಕೆ, ಲಕ್ಷಾಂತರ ಜನರ

ಯುಗಪರಿರ್ತನೆಯ ಕ್ರಾಂತಿಕಾರಿ ಮೇ

ಇಂದಿನ ಕರ್ತವ್ಯಗಳ

ವಿಶ್ವದ ಕಾರ್ಮಿಕ ವರ್ಗ ಒಂದಾಗಿ ಸುಲಿಗೆ, ಶೋಷಣೆಯ ವ್ಯವಸ್ಥೆಯನ್ನು ಬುಡಮೇಲುಗೊಳಿಸುವ ಮಹಾಸಮರ ಸಾರಿರುವ ಮೇ ದಿನಾಚರಣೆ ಮತ್ತೇ ಬಂದಿ
ಜಗತ್ತಿನ ಗತಿಯನ್ನೇ ಬದಲಾಯಿಸಿ ದುಡಿವ ವರ್ಗದ ಕ್ರಾಂತಿಕಾರಿ ಪರಂಪರೆಯನ್ನು ಸ್ಪೂರ್ತಿಯಿಂದ ನೆನಪಿಸಿಕೊಂಡು, ವರ್ತಮಾನದ ಸವಾಲುಗಳನ್ನು ಎದುರಿಸ
ಸನ್ನದ್ಧವಾಗುವ ಸಂದರ್ಭಕ್ಕೆ ಈ ಎರಡು ಲೇಖನಗಳು. ಇಂದಿನ ಸನ್ನಿವೇಶ ಹಾಗೂ ಕಾರ್ಮಿಕ ವರ್ಗದ ಮುಂದಿರುವ ಕರ್ತವ್ಯಗಳನ್ನು ಮುಂದಿರಿಸಿದ್ದಾರೆ ಸಿಐಟಿ
ವಿನ ರಾಜ್ಯ ಅಧ್ಯಕ್ಷರೂ, ಅ.ಭಾ. ಉಪಾಧ್ಯಕ್ಷರಾದ ಸಂಗಾತಿ ಎಸ್.ಸೂರ್ಯನಾರಾಯಣ ರಾವ್‌ರವರು. ಹಾಗೆಯೇ ಮೇ ದಿನದ ಕ್ರಾಂತಿಕಾರಿ ಪರಂಪರೆಯ
ಪಂಚಿಯಸುತ್ತಾ, ಈ ಆಚರಣೆ ಹೇಗಿರಬೇಕು ಎಂದು ಎಚ್ಚರಿಸಿದ್ದಾರೆ ಭಾರತದ ಮಹಾನ್ ಕ್ರಾಂತಿಕಾರಿ ನಾಯಕ, ಸಿಐಟಿಯು ಸಂಸ್ಥಾಪಕ ರಾಷ್ಟ್ರ ಅಧ್ಯಕ್ಷರೂ,
ಸಿಪಿಐ(ಎಂ)ನ ಪೊಲಿಟ್‌ಬ್ಯೂರೋ ಸದಸ್ಯರಾಗಿದ್ದ ಸಂಗಾತಿ ಬಿ.ಟಿ.ರಣದಿವೆಯವರು. ವರ್ಗ ಹೋರಾಟದ ಪ್ರಖರ ವಿಚಾರಗಳನ್ನು ಓದಿ

ಮೇ ದಿನ, ಅಂತರಾಷ್ಟ್ರೀಯ ಕಾರ್ಮಿಕ ವರ್ಗದ ದಿನಾಚರಣೆಯ ದಿನ ಪ್ರಪಂಚದ ಎಲ್ಲಾ ಕಾರ್ಮಿಕ ವರ್ಗಕ್ಕೂ ಅಭಿನಂದನೆಗಳು. ಕೆಲವು ಸಮಾಜವಾದಿ ರಾಷ್ಟ್ರಗಳಲ್ಲಿ ಹಿಂಜರಿತ ಬಂದು, ಬಂಡವಾಳಶಾಹಿ ಕಡೆ ನೋಡಿದ್ದರೂ ಕೆಲವು ಸಮಾಜವಾದಿ ರಾಷ್ಟ್ರಗಳು ಸಮಾಜವಾದಿ ಬಾವುಟವನ್ನು ಎತ್ತಿಹಿಡಿದಿರುವುದನ್ನು ಸಿಐಟಿಯು ಅಭಿನಂದಿಸುತ್ತದೆ. ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಈ ನವ ಜಾಗತೀಕರಣ ನೀತಿಯ ವಿರುದ್ಧ ಬಂಡವಾಳಶಾಹಿ ವ್ಯವಸ್ಥೆ ವಿರುದ್ಧ ಹೋರಾಡುತ್ತಿರುವುದನ್ನು ಅಭಿನಂದಿಸುತ್ತದೆ. ಅದೇ ರೀತಿ ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಸಾಮ್ರಾಜ್ಯಶಾಹಿ ರಾಷ್ಟ್ರಗಳ ದಾಳಿ ಹಾಗೂ ಆ ದೇಶದ ಬಂಡವಾಳ ಶಾಹಿ ವರ್ಗದ ದಾಳಿಯನ್ನು ಎದುರಿಸುತ್ತಿರುವುದು ಅಭಿನಂದನೀಯ.

ಹೆಚ್ಚಿನ ಸಾಮ್ರಾಜ್ಯಶಾಹಿ ಆಕ್ರಮಣ

ಕಳೆದ ವರ್ಷ ಸೆ. 11 ರಂದು ಭಯೋತ್ಪಾದಕರು ನ್ಯೂಯಾರ್ಕ್‌ನ ವಿಶ್ವ ವ್ಯಾಪಾರ ಕೇಂದ್ರ ಹಾಗೂ ವಾಷಿಂಗ್‌ಟನ್‌ನ ಪೆಂಟಗಾನ್ ಮೇಲೆ ದಾಳಿ ಮಾಡಿದನ್ನು ಅಮೇರಿಕಾ ಸಾಮ್ರಾಜ್ಯಶಾಹಿ ದುರುಪಯೋಗಿಸಿ ಕೊಂಡು, ಆಕ್ರಮಣಕಾರಿ ಧಾಳಿಯನ್ನು ತೀವ್ರಗೊಳಿಸಿದೆ.

ಅಮೇರಿಕಾದ ಆಡಳಿತ ಭಯೋತ್ಪಾದಕರ ಮೇಲೆ ಯುದ್ಧವನ್ನೆ ಸಾರಿದ್ದೇನೆಂದು ಹೇಳುತ್ತಾ, ಯಾರೆಲ್ಲಾ ಅಮೇರಿಕಾ ದೇಶ ಮಾಡಲು ಹೊರಟಿರುವ ದಾಳಿಯನ್ನು ವಿರೋಧಿಸುವವರೆಲ್ಲರನ್ನು ಭಯೋತ್ಪಾದಕರೆಂದು ಹೇಳುತ್ತಾ ಅವರೆಲ್ಲರನ್ನು ನಿಗ್ರಹಿಸುತ್ತೇನೆ ಎಂದು ಹೇಳಿ, ಇರಾನ್, ಇರಾಕ್, ಉತ್ತರ ಕೋರಿಯಾ ಎಲ್ಲವೂ ದುಷ್ಟ ಶಕ್ತಿಗಳೆಂದು ಹೇಳುತ್ತಾ ಹೊರಟಿವೆ. ಆದೇ ಅಮೇರಿಕಾ ಪ್ಯಾಲಿಸ್ಟೇನ್ ಮೇಲಿನ ಇಸ್ರೇಲ್ ದಾಳಿಯನ್ನು ಸೂಕ್ಷ್ಮವಾಗಿ ಬೆಂಬಲಿಸಿದೆ. ಪ್ಯಾಲಿಸ್ಟೇನ್ ನಾಯಕ ಅರಾಫತ್ ಅನ್ನು ಗೃಹ ಬಂಧನದಲ್ಲಿರಿಸಿದೆ. ಅಮೇರಿಕಾ ದೇಶದ ಆರ್ಥಿಕ ದಿಗ್ಬಂಧನವನ್ನು ಇರಾಕ್, ಕ್ಯೂಬಾ, ಲಿಬಿಯಾ ಮೇಲೆ ಹೇರಿ, ಅಲ್ಲಿನ ಜನರನ್ನು ಆರ್ಥಿಕ ಸಂಕಷ್ಟಕ್ಕೆ ಸಿಲುಕಿಸಿದೆ. ಅಭಿವೃದ್ಧಿ ಹೊಂದಿದ ಜಿ.7 ಗುಂಪು, ಅಮೇರಿಕಾ ದಾಳಿ ದೌರ್ಜನ್ಯವನ್ನು ಸಹಾ ಬೆಂಬಲಿಸುತ್ತಿವೆ.

ಬಂಡವಾಳಶಾಹಿ ಜಗತ್ತು ಉತ್ಪಾದಕತೆಯಲ್ಲಿ ಸ್ಥಗಿತವಾಗಿರುವ ಕಾರಣ, ವಿಪರೀತವಾಗಿ ತ್ವರಿತ ಶೋಷಣೆ ಮಾಡುವ ಮೂಲಕ ವರಮಾನದ ಅಂತರವನ್ನು ಜಗತ್ತಿನಾದ್ಯಂತ ಹೆಚ್ಚಿಸುತ್ತಿದೆ. ಸಾಮ್ರಾಜ್ಯವಾದಿಗಳ ಈ ನೀತಿಯ ಪರಿಣಾಮವಾಗಿ ಆದರಲ್ಲೂ ಅಮೇರಿಕಾದ ಸಾಮ್ರಾಜ್ಯವಾದವನ್ನು ಉಗ್ರಗಾಮಿಗಳು ಉಪಯೋಗಿಸಿಕೊಂಡು ತಲೆ ಎತ್ತುತ್ತಿವೆ. ಈ ದುಷ್ಟಕೂಟ ಪ್ರಜಾಪ್ರಭುತ್ವ ಮತ್ತು ಪ್ರಗತಿಪರ ಶಕ್ತಿಗಳನ್ನು ನಾಶಮಾಡುವ ಕುರುಹುಗಳಾಗಿವೆ.

ಸಿಐಟಿಯು ಸಾಮ್ರಾಜ್ಯಶಾಹಿಗಳ ಈ ಎಲ್ಲಾ ದುಷ್ಟ ಯೋಜನೆಗಳನ್ನು ಖಂಡಿಸುತ್ತದೆ. ಅದೇ ಸಂದರ್ಭದಲ್ಲಿ ದಾಳಿಯಿಂದ ತೊಂದರೆಗೊಳಗಾದವರಿಗೆ ಸಹಾನುಭೂತಿ ವ್ಯಕ್ತಪಡಿಸುತ್ತದೆ. ಇದರ ವಿರುದ್ಧ ಹೋರಾಡಲು ಪ್ರತಿಜ್ಞೆ ಮಾಡುತ್ತದೆ.



ಕೋಮುವಾದದ ಬೆದರಿಕೆ

ನಮ್ಮ ದೇಶದಲ್ಲಿ ಹಿಂದೆಂದೂ ಕಂಡರಿಯದ ರೀತಿಯಲ್ಲಿ ಕೋಮು ಗಲಭೆ ಮತ್ತು ಅಲ್ಪಸಂಖ್ಯಾತರ ಮೇಲೆ ಹಲ್ಲೆ ಇಡೀ ದೇಶವನ್ನು ದಿಗ್ಭ್ರಮೆಗೊಳಿಸಿದೆ. ಬಿಜೆಪಿಯು ಇತ್ತೀಚಿನ ಚುನಾವಣೆಗಳಲ್ಲಿ ಬಹುತೇಕ ಕಡೆ ಸೋಲನ್ನು ಅನುಭವಿಸಿ ತನ್ನ ಕೋಮುವಾದಿ ರಾದ್ರ್ಯಾವ್ ತಾರ್‌ದಿಂದ್ ಅಲ್ಪಸಂಖ್ಯಾತರನ್ನು ಗುರಿಯಾಗಿರಿಸಿ ದಾಳಿ ಮಾಡಿ ಮುಂದಿನ ದಿನಗಳಲ್ಲಿ ಬಹುಸಂಖ್ಯಾತ ಹಿಂದೂಗಳ ಮತಗಳಿಸಿ ಅಧಿಕಾರ ನಡೆಸಲು ಯತ್ನಿಸುತ್ತಿದೆ. ಇದನ್ನು ಅವರು ಅಧಿಕಾರದಲ್ಲಿರುವ ಗುಜರಾತ್‌ನಲ್ಲಿ ಕಾಣಬಹುದು. ಗೋದ್ರಾದಲ್ಲಿ ರೈಲಿಗೆ ಬೆಂಕಿ ಹಚ್ಚಿ, 54 ಜನರ ಸಜೀವ ದಹನ ನಡೆಸಿದ್ದು ಖಂಡನೀಯ. ಆದರೆ ಅದನ್ನೆ ನೆಪಮಾಡಿ, ಸಂಘ ಪರಿವಾರದ, ವಿ.ಹೆಚ್.ಪಿ, ಭಜರಂಗದಳದವರು ಬಿಜೆಪಿ ಮುಖ್ಯಮಂತ್ರಿ ಮೋದಿ ಬೆಂಬಲದೊಂದಿಗೆ, ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸಿ, ಅವರ ಆಸ್ತಿ ಪಾಸ್ತಿ ಮೇಲೆ ದಾಳಿ ನಡೆಸಿ, ಸಾವಿರಾರು ಜನರ ಸಾವು, ಲಕ್ಷಾಂತರ ಜನರನ್ನು ನಿರಾಶ್ರಿತರಾಗುವುದಕ್ಕೆ ಕಾರಣರಾಗಿದ್ದಾರೆ. ಈ ನರಮೇಧವನ್ನು ಮಾನವ ಹಕ್ಕುಗಳ ಆಯೋಗ, ಅಲ್ಪಸಂಖ್ಯಾತರ ಆಯೋಗ, ಮಹಿಳೆಯರ ನಿಯೋಗ ಇತ್ಯಾದಿಗಳು ತೀವ್ರವಾಗಿ ಖಂಡಿಸಿ, ತನಿಖೆ ನಡೆಯಬೇಕೆಂದು ಒತ್ತಾಯಿಸಿವೆ. ಸಂಸತ್ತಿನಲ್ಲೂ ಸಹಾ ಮೋದಿ ರಾಜಿನಾಮೆ ಕೊಡಬೇಕೆಂದು ಇದರ ಬಗ್ಗೆ ನಿಯಮ 184 ರಡಿಯಲ್ಲಿ ಚರ್ಚೆ ನಡೆಯಬೇಕೆಂದು ಒತ್ತಾಯಿಸಿದಾಗ ಅದು ಸಾಧ್ಯವಿಲ್ಲವೆಂದು ಕೇಂದ್ರ ಸರ್ಕಾರ ಹೇಳಿದ ಕಾರಣ ಒಂದು ವಾರ ಕಲಾಪಗಳೇ ನಡೆಯಲಿಲ್ಲ. ಎನ್.ಡಿ.ಎ ಪಕ್ಷಗಳಾದ ಪಾಸ್ವಾನರವರ ಪಕ್ಷ, ಸಂಯುಕ್ತ ಜನತಾದಳ, ಮಮತಾ ರವರ ತೃಣಮೂಲ ಮೋದಿ ರಾಜೀನಾಮೆಗೆ ಒತ್ತಾಯಿಸಿವೆ. ಹೊರಗಿನಿಂದ ಬೆಂಬಲ ನೀಡಿರುವ ತೆಲುಗು ದೇಶಂ ಸಹಾ ಈ ಒತ್ತಾಯ ಮಾಡಿದೆ. ಲೋಕಸಭೆಯ ಉಪಾಧ್ಯಕ್ಷರು, ಈ ಸಮಸ್ಯೆ ಪರಿಹಾರವಾಗದಿದ್ದಾಗ, ಮಾತುಕತೆ ನಡೆಸಿ, ನಿಯಮ 184 ಪ್ರಕಾರ ಚರ್ಚೆ ನಡೆಯಬೇಕೆಂದು ರೂಲಿಂಗ್ ನೀಡಿದ್ದಾರೆ ಇದನ್ನು ಪ್ರಧಾನ ಮಂತ್ರಿಗಳು ದುರಾದೃಷ್ಟಕರ ಎಂದು ಬಣ್ಣಿಸಿರುವುದು ಖಂಡನೀಯ.

ಇದು ಸಾಲವೆಂದು ಬೆಂಗಳೂರಿನಲ್ಲಿ ನಡೆದ ಆರ್.ಎಸ್.ಎಸ್. ಅಖಿಲ ಭಾರತ ಪ್ರತಿನಿಧಿ ಸಭೆಯಲ್ಲಿ, ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯ ಈ ದೇಶದಲ್ಲಿ ಜೀವನ ನಡೆಸಬೇಕಾದರೆ ಬಹುಸಂಖ್ಯಾತ ಹಿಂದೂಗಳ ಕೃಪೆಯಲ್ಲಿರಬೇಕು ಎಂದಿರುವುದು ಖಡನೀಯ, ಹಾಗೂ ದೇಶದ ಜಾತ್ಯಾತೀತ ಸಿದ್ಧಾಂತಕ್ಕೆ ವಿರುದ್ಧವಾಗಿದೆ. ದುಡಿಯುವ ವರ್ಗದ ಐಕ್ಯತೆ ಪ್ರತಿಪಾದಿಸುವ ಹಾಗೂ ರಾಷ್ಟ್ರದ ಐಕ್ಯತೆ ಸಮಗ್ರತೆಗೆ ಪಣತೊಟ್ಟಿರುವ ಸಿಐಟಿಯು ಈ ಸಂಘ ಪರಿವಾರ ದುಷ್ಟ ಯೋಜನೆ ಹಿಮ್ಮೆಟ್ಟಿಸಿ, ದುಡಿಯುವ ವರ್ಗದ ಐಕ್ಯತೆ ಕಾಪಾಡಲು ಈ ಕೋಮು ಧಳ್ಳುರಿಯನ್ನು ತಡೆಯಲು ಎಲ್ಲಾ ರೀತಿಯ ಕೆಲಸ ಮಾಡಬೇಕಿದೆ.


ಆರ್ಥಿಕ ನೀತಿ ತಂದ ವಿನಾಶ

ಕೇಂದ್ರ ಸರ್ಕಾರದ ಹೊಸ ಆರ್ಥಿಕ ನೀತಿ ನಮ್ಮ ದೇಶದ ಆರ್ಥಿಕ ವ್ಯವಸ್ಥೆಯ ಹಿಂಜರಿತಕ್ಕೆ ಕಾರಣವಾಗಿದೆ. ಕೈಗಾರಿಕಾ ಉತ್ಪನ್ನ ಕಡಿಮೆಯಾಗಿದೆ. ದೇಶದ ಒಳಗೆ ಉತ್ಪಾದನೆಯಾದ ಸರಕಿಗೆ ಬೇಡಿಕೆ ಕಡಿಮೆಯಾಗಿದೆ. ಇದಕ್ಕೆ ಕಾರಣ ನಿರ್ಬಂಧಗಳನ್ನು ತೆಗೆದು, ಹೊರದೇಶದಿಂದ ಮುಕ್ತವಾಗಿ ಸರಕುಗಳು, ಗ್ರಾಹಕ ಸಾಮಗ್ರಿಗಳು ಹೇರಳವಾಗಿ ಲಭ್ಯವಾಗಿರುವ ಕಾರಣ ದೇಶದ ಮಾರುಕಟ್ಟೆ ಕುಸಿದಿದೆ. ಉದ್ಯೋಗದ ಬೆಳವಣಿಗೆ ಶೇ.1 ರಷ್ಟು ಮಾತ್ರವಾಗಿದೆ. ಸಂಘಟಿತ ವಲಯದಲ್ಲಿ ಆಧುನಿಕ ಯಂತ್ರದ ಅಳವಡಿಕೆಯಿಂದ ಉದ್ಯೋಗದ ಅವಕಾಶಗಳು, ಇರುವ ನೌಕರರ ಸಂಖ್ಯೆ ಕಡಿಮೆಯಾಗುತ್ತಿದೆ. ಉದ್ಯೋಗ ಅವಕಾಶಗಳು ಸೃಷ್ಟಿಯಾಗುತ್ತಿಲ್ಲ. ಇದು ಕೃಷಿ



ಖಾಸಗೀಕರಣದ ಪೆಡಂಭೂತದಿಂದ ಅನೇಕ ಕೈಗಾರಿಕೆಗಳು ರೋಗಗ್ರಸ್ತವಾಗಿ ಮುಚ್ಚುವ ಪರಿಸ್ಥಿತಿ ಬಂದಿದೆ. ನಮ್ಮ ದೇಶದಲ್ಲಿ ಪ್ರಥಮಬಾರಿಗೆ ಅಸ್ತಿತ್ವಕ್ಕೆ ಬಂದ ಬೆಂಗಾಲ ಲ್ಯಾಂಪ್ಸ್ ಕಳೆದ 10 ವರ್ಷದಿಂದ ಮುಚ್ಚಿದೆ, ಬಿ.ಐ.ಎಫ್.ಆರ್. ಇತ್ಯರ್ಥ ಮಾಡಿಲ್ಲ. 120 ವರ್ಷದಿಂದ ಇದ್ದ ಕೆ.ಜಿ.ಎಫ್. ಚಿನ್ನದ ಗಣಿ, ಉತ್ಪಾದನೆ ನಿಲ್ಲಿಸಿದೆ, ಒಂದೂವರೆ ವರ್ಷದಿಂದ ಕಾರ್ಮಿಕರಿಗೆ ಸಂಬಳ ನೀಡಿಲ್ಲ, ಈಗ ಉಚ್ಚ ನ್ಯಾಯಾಲಯ ರೂ. 4000 ಪರಿಹಾರ ನೀಡಬೇಕೆಂದು ತೀರ್ಪು ನೀಡಿದೆ. ಮೈಸೂರು

ದೇಶದಾದ್ಯಂತ ಏಪ್ರಿಲ್ 16 ರ ಮುಷ್ಕರದಲ್ಲಿ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರು



ಎರಡು ಧ
ಕ್ರಾಂತಿಕಾರಿ ಮತ್ತು

ಬಿ.ಟಿ



ಮಾರ್ಕ್ಸ್‌ವಾದ - ಲೆನಿನ್ ವಾದದಲ್ಲಿ ಅಚಲ ನಂಬಿಕೆಯಿದ್ದ ಜಗತ್ತಿನ ಕಾರ್ಮಿಕ ವರ್ಗದ ಕ್ರಾಂತಿಕಾರಿ ಧೋರಣೆಯೇ ಈ ಎಲ್ಲಾ ವಿಜಯಗಳಿಗೆ ಕಾರಣ. ಪ್ರಥಮ ಮೇ ದಿನದ ಆಚರಣೆ, ಅಂದು ಮಂಡಿಸಿದ್ದ ಆರ್ಥಿಕ ರಾಜಕೀಯ ಬೇಡಿಕೆಗಳೆಲ್ಲ, ಮಾರ್ಕ್ಸ್‌ರ
ಮಾರ್ಗದರ್ಶನದಲ್ಲಿದ್ದ ಮೊದಲನೇ
ಅಂತರರಾಷ್ಟ್ರೀಯದ ನಿರ್ದೇಶನಕ್ಕೆ ಬದ್ಧವಾಗಿತ್ತು.
ಪ್ರಥಮ ಮೇ ದಿನದ ಸಂದರ್ಭದಲ್ಲಿ ಘೋಷಿಸಲಾದ
ಪ್ರಾರಂಭಿಕ ಸಿದ್ಧಾಂತಕ್ಕೆ ನಿಷ್ಠರಾದ ಪಕ್ಷಗಳೇ
ಯಶಸ್ವಿಯಾದ ಸಮಾಜವಾದಿ ಕ್ರಾಂತಿಗಳ
ನಾಯಕರಾಗಿದ್ದವು ಎನ್ನುವುದು ಆಕಸ್ಮಿಕವಲ್ಲ.
ಪಕ್ಷಗಳೆಲ್ಲ ಮಾರ್ಕ್ಸ್‌ವಾದಿ, ಲೆನಿನ್ ವಾದಿ
ಪಕ್ಷಗಳಾಗಿದ್ದವು. ಹಿಂದಿನ ಮೇ ದಿನಾಚರಣೆಗಳ
ಸಂದರ್ಭದಲ್ಲಿ ಕ್ರಾಂತಿಕಾರಿ ತಿಳುವಳಿಕೆ ಮತ್ತು
ನಿರ್ದೇಶನಕ್ಕೆ ಬೆನ್ನು ಹಾಕಿ ದೂರ ನಿಂತವರಿಗೆ
ಯಶಸ್ವಿಯಾದ ಸಮಾಜವಾದಿ ಕ್ರಾಂತಿಯನ್ನು
ನಡೆಸಲು ಸಾಧ್ಯವಾಗಲಿಲ್ಲ. ಅಥವಾ ಯಾವುದೇ
ಬಂಡವಾಳಶಾಹಿ ದೇಶದಲ್ಲಿ ಶಾಂತಿಯುತ
ಸಮಾಜವಾದಿ ಪರಿವರ್ತನೆ ಸಾಧ್ಯವಾಗಲಿ
ಎನ್ನುವುದೂ ಕೂಡ ಆಕಸ್ಮಿಕವಲ್ಲ. ಅವರೆಲ್ಲ ಹೆಚ್ಚು
ಬಂಡವಾಳಶಾಹಿ ಚೌಕಟ್ಟಿನೊಳಗೆ ಒಂದು ವಿರೋ
ಪಕ್ಷವಾಗಿ ಕೆಲಸ ನಿರ್ವಹಿಸುತ್ತಿದ್ದರು. ಮತ್ತು ಸರ್ಕಾ
ರಚಿಸಲು ಚುನಾಯಿತರಾದಾಗ ಅವರಿಗೆ ಶೋಷ
ವ್ಯವಸ್ಥೆಯನ್ನು ಎಳ್ಳಷ್ಟೂ ಬದಲಿಸ

...ನಾಚರಣೆ

...ಂಪ್ಸ್, ಮೈಸೂರು ಪೇಪರ್ ಮಿಲ್ಸ್ ...್.ಜಿ.ಇ.ಎಫ್, ಭದ್ರಾವತಿ ಉಕ್ಕಿನ ...ರ್ಖಾನೆ, ಕೆ.ಎಸ್.ಡಿ.ಎಲ್. ಎಲ್ಲವೂ ಮುಚ್ಚುವ ...ತದಲ್ಲಿವೆ. ಕೇಂದ್ರ ಸರ್ಕಾರದ ಹೊಸ ಆರ್ಥಿಕ ನೀತಿ, ಎಲ್ಲಾ ನಿರ್ಬಂಧಗಳನ್ನು ತೆಗೆಯುವುದು, ಬಹುರಾಷ್ಟ್ರೀಯ ಕಂಪನಿಗಳಿಗೆ ರಿಯಾಯಿತಿಯನ್ನು ನೀಡುವುದರ ಪರಿಣಾಮವಾಗಿ ಸಣ್ಣ-ಮಧ್ಯಮ ಪ್ರಮಾಣದ ಸಾವಿರಾರು ಕಾರ್ಖಾನೆಗಳು ಮುಚ್ಚಿದ್ದು, ಲಕ್ಷಾಂತರ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ, ನಿರುದ್ಯೋಗಿಗಳಾಗಿದ್ದಾರೆ.



ಇದರ ಜೊತೆಗೆ ದೊಡ್ಡ ಕೈಗಾರಿಕೆಗಳಲ್ಲಿಯೂ ಸಹಾ ಆಧುನಿಕ ತಂತ್ರಜ್ಞಾನ ಅಳವಡಿಸಿ, ಕಾರ್ಮಿಕರ ಸಂಖ್ಯೆ ಕಡಿತಗೊಳಿಸಲಾಗುತ್ತಿದೆ. ಇದರ ಜೊತೆಗೆ ಕೇಂದ್ರ, ರಾಜ್ಯ ಸರ್ಕಾರಗಳು ಹುದ್ದೆಗಳನ್ನು ರದ್ದು ...ಡಿ, ಉದ್ಯೋಗಿಗಳನ್ನು ಕಡಿತಗೊಳಿಸುತ್ತಿವೆ.

ಪುಟ 10 ಕೆ

...ತೆಗಳು ...ಾರಣಾವಾದಿ

ಸುಧಾರಣಾವಾದಿ ಸೋಷಿಯಲ್ ಡೆಮೊಕ್ರೆಟಿಕ್ ಪಕ್ಷಗಳ ಮತ್ತು ಯುರೋಪ್‌ನ ಲೇಬರ್ ಪಕ್ಷಗಳ ಇತಿಹಾಸ ಆ ಪಕ್ಷಗಳು ಕ್ರಾಂತಿಯಿಂದ ವಿಮುಖವಾದದ್ದು ಮಾತ್ರವಲ್ಲದೆ ಕಾರ್ಮಿಕ ವರ್ಗದ ಅಂತರಾಷ್ಟ್ರೀಯ ಐಕ್ಯತೆಯಿಂದ ಕೂಡ ವಿಮುಖವಾದುದನ್ನು ...ಟ್ಟಿದೆ. ಎಲ್ಲಾ ನಿರ್ಣಾಯಕ ಸಂದರ್ಭಗಳಲ್ಲಿ ಈ ಸುಧಾರಣಾವಾದಿ ಪ್ರವೃತ್ತಿಯು ...ಷ್ಟ್ರೀಯ ಸೌಹಾರ್ದತೆಗೆ ದ್ರೋಹ ಬಗೆದು ...ವಿ ವರ್ಗದ ಅಂತರಾಷ್ಟ್ರೀಯತೆಯ ...ನ್ನು ಕೈಬಿಟ್ಟಿದೆ.

...ದಲನೆಯ ಸಾಮ್ರಾಜ್ಯಶಾಹಿ ಯುದ್ಧದಲ್ಲಿ ...ವಿರೋಧಿ ಯುದ್ಧದ ಸಂದರ್ಭದಲ್ಲಿ ಬ್ರಿಟನ್ನಿನ ...ಪಕ್ಷ, ಯುರೋಪಿನ ಸೋಷಿಯಲ್ ...ಟಿಕ್ ಪಕ್ಷಗಳು ಶ್ರಮಜೀವಿ ವರ್ಗದ ಐಕ್ಯತೆಗೆ ...ಬಗೆದವು ಅವುಗಳು ಆಯಾ ಸರಕಾರಗಳ ...ದ್ದವು. ಫ್ಯಾಸಿಸ್ಟ್ ವಿರೋಧಿ ಯುದ್ಧದ ...ದಲ್ಲಿ ಆಯಾ ದೇಶದ ಸರ್ಕಾರಗಳು ...ಮಾತ್ರ, ಹಿಟ್ಲರ್‌ನ ವಿರೋಧದ ...ದಲ್ಲಿ ಸೇರಲು ತಯಾರಾದರು.

...ಪಕ್ಷವು ಸಮರ ಧೀರತೆಯಿಂದ ನಮ್ಮ ...ವನ್ನು ಮುನ್ನಡೆಸಿ ಇವತ್ತಿನ ಅಪಾಯಕಾರಿ ...ದಿಂದ ದೇಶವನ್ನು ಪಾರು ಮಾಡಲು ...ಗೆ ಕರೆ ನೀಡಲು ಮೇ ದಿನಾಚರಣೆಯ ...ವ ಅವಕಾಶವನ್ನು ಮಾಡುತ್ತದೆ.


ಮೇ ದಿನದ ಕ್ರಾಂತಿಕಾರಿ ಪರಂಪರೆ

1886ರ ಪೂರ್ವದ ಬೆಳವಣಿಗೆಗಳು

ಒಂದು ನೂರು ವರ್ಷಗಳ ಹಿಂದೆ ಬರ್ಬರವಾದ ಬಂಡವಾಳಶಾಹಿ, ಕಾರ್ಮಿಕ ವರ್ಗದ ಯಾವುದೇ ಹಕ್ಕುಗಳನ್ನು ಲೆಕ್ಕಿಸುತ್ತಿರಲಿಲ್ಲ. ಆದರೆ ಬಂಡವಾಳಶಾಹಿ ವ್ಯವಸ್ಥೆಯ ಮೂಲ ನೆಲೆಗಳಾದ ಯೂರೋಪ್ ಮತ್ತು ಅಮೇರಿಕಾದಲ್ಲಿ ದುಡಿಮೆಯ ಗಂಟೆಗಳನ್ನು ನಿಗದಿಪಡಿಸಲು ಮತ್ತು ದಿನವೊಂದಕ್ಕೆ ಎಂಟು ಗಂಟೆಗಳ ಕೆಲಸಕ್ಕಾಗಿ ಹೋರಾಟ ಬೆಳೆದು ಬರುತ್ತಿತ್ತು.

1866ರ ಆಗಸ್ಟ್‌ನಲ್ಲಿ ಅಮೇರಿಕಾದ ಬಾಲ್ಟಿಮೋರ್‌ನಲ್ಲಿ ನಡೆದ ದುಡಿಯುವ ಜನರ ಸಮಾವೇಶದಲ್ಲಿ ದಿನಕ್ಕೆ ಎಂಟು ಗಂಟೆಗಳ ಕೆಲಸವನ್ನು ನಿಗದಿಪಡಿಸುವ ಬೇಡಿಕೆಯ ಗೊತ್ತುವಳಿಯನ್ನು ಅಂಗೀಕರಿಸಲಾಯಿತು. ಈ ಸಮಾವೇಶ ನಡೆದು ಎರಡು ವಾರದೊಳಗೆ ಮಾರ್ಕ್ಸ್‌ರಿಂದ ಸ್ಥಾಪಿಸಲ್ಪಟ್ಟ ಮೊದಲನೆಯ ಅಂತರ್ರಾಷ್ಟ್ರೀಯದ ಜಿನೀವಾ ಅಧಿವೇಶನದಲ್ಲಿ ಇದೇ ಬೇಡಿಕೆಯನ್ನು ಮಂಡಿಸಲಾಯಿತು. 'ದುಡಿಮೆಯ ದಿನವನ್ನು ಕಾನೂನಿನ ಮೂಲಕ ನಿಗದಿಪಡಿಸುವುದು ಒಂದು ಪ್ರಾಥಮಿಕ ಶರತ್ತು ಮತ್ತು ಇದಿಲ್ಲದೆ ಇನ್ನು ಮುಂದು ಕಾರ್ಮಿಕ ವರ್ಗದ ವಿಮೋಚನೆ ಮತ್ತು ಅಭಿವೃದ್ಧಿಗೆ ಮಾಡುವ ಎಲ್ಲ ಪ್ರಯತ್ನಗಳೂ ವಿಫಲವಾಗುವುವು. ಈ ಅಧಿವೇಶನ ದುಡಿಮೆಯ ದಿನವನ್ನು ಎಂಟು ಗಂಟೆಗೆ ಕಾನೂನಿನ ರೀತ್ಯಾ ಸೀಮಿತಗೊಳಿಸಬೇಕೆಂದು ಸೂಚಿಸುತ್ತದೆ" ಎಂದಿತು.

> ಮೇ ದಿನವು ಅಂತರ್ರಾಷ್ಟ್ರೀಯ ಸೌಹಾರ್ದತೆಯ ಘೋಷಣೆಯನ್ನು ನೀಡುವ ಸಾಮಾನ್ಯ ಘೋಷಣೆಯಾಗುವುದರ ಬದಲು, ಪ್ರತಿಯೊಂದು ರಾಷ್ಟ್ರದ ನಿರ್ದಿಷ್ಟ ಕ್ರಾಂತಿಕಾರಿ ಕರ್ತವ್ಯಗಳ ಬಗ್ಗೆ ಕಾರ್ಮಿಕರು ಎಚ್ಚೆತ್ತುಕೊಳ್ಳಬೇಕು
>
> **- ಲೆನಿನ್**



ಅದೇ ಸಮಯದಲ್ಲಿ ಕಾರ್ಮಿಕ ವರ್ಗದ ಎರಡು ವಿಭಾಗಗಳು ಇದೇ ಬೇಡಿಕೆಯನ್ನಿಟ್ಟು ಸಾಮಾನ್ಯ ಕ್ರಿಯಾಚರಣೆ ಮತ್ತು ಸೌಹಾರ್ದತೆಯ ವೇದಿಕೆಗೆ ತಯಾರಾಗುತ್ತಿದ್ದವು. ಇದನ್ನು ಜಿನೀವಾ ಅಧಿವೇಶನದ ಗೊತ್ತುವಳಿಯಲ್ಲಿ ಸ್ಪಷ್ಟವಾಗಿ ವ್ಯಕ್ತಪಡಿಸಲಾಗಿತ್ತು. "ಈ ನಿಗದಿ ಪಡಿಸುವಿಕೆ ಅಮೇರಿಕ ಸಂಯುಕ್ತ ಸಂಸ್ಥಾನಗಳ ಉತ್ತರ ಭಾಗದ ಕಾರ್ಮಿಕರ ಸಾರ್ವತ್ರಿಕ ಬೇಡಿಕೆಯಾಗಿರುವುದರಿಂದ ಇದನ್ನು ಇಡೀ ಜಗತ್ತಿನ ಕಾರ್ಮಿಕರ ಹೋರಾಟದ ನೆಲೆಗಟ್ಟಾಗಿ ಈ ಅಧಿವೇಶನ ಪರಿವರ್ತಿಸುತ್ತಿದೆ". ಹೀಗೆ ಅಂತರ್ರಾಷ್ಟ್ರೀಯ ಕಾರ್ಯಾಚರಣೆ ಮತ್ತು ಸೌಹಾರ್ದತೆಯ ವೇದಿಕೆ ಪ್ರಾರಂಭವಾಯಿತು.

ಆದರೆ ಇದು ಆರಂಭ ಮಾತ್ರ. 1866-86ರ ಅವಧಿಯಲ್ಲಿ ಮೇ ದಿನಾಚರಣೆಯ ಸಮರಧೀರ ಚಳುವಳಿಗಳು ನಡೆದು ಕಾರ್ಮಿಕ ವರ್ಗ ಬರ್ಬರ ಹತ್ಯೆ ಮತ್ತು ಕೊಲೆಗಳನ್ನು ಎದುರಿಸಬೇಕಾಯಿತು. ಕಾರ್ಮಿಕ ವರ್ಗಕ್ಕೆ ಕಾರ್ಲ್ ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರ ಮಾರ್ಗದರ್ಶನ ದೊರೆಯಿತು. ಹಾಗೆಯೇ ಅವರು ಸ್ಥಾಪಿಸಿದ ಪ್ರಥಮ ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗಕ್ಕೆ ನಂಬಲರ್ಹವಾದ ಮಾರ್ಗದರ್ಶಿ ಯಾಯಿತು. ಪ್ಯಾರಿಸ್‌ನ ಕಾರ್ಮಿಕ ವರ್ಗದ ಬಂಡವಾಯ ಮತ್ತು ಪ್ರಥಮ ಕಾರ್ಮಿಕ ರಾಜ್ಯ ಅಧಿಕಾರದ ಸ್ಥಾಪನೆ. ಈ ಕಮ್ಯೂನ್ ವೀರರ ಭೀಕರ ನರಹತ್ಯೆಯೊಂದಿಗೆ ಯುರೋಪ್ ರಾಷ್ಟ್ರಗಳಲ್ಲಿ ನಡೆಸಲಾಯಿತು. ಪ್ರಥಮ ಅಂತರ್ರಾಷ್ಟ್ರೀಯದ ಕೇಂದ್ರವನ್ನು ಲಂಡನ್‌ನಿಂದ ನ್ಯೂಯಾರ್ಕ್‌ಗೆ ಸ್ಥಳಾಂತರಿಸಲಾಯಿತು. ಪ್ರಥಮ ಅಂತರ್ರಾಷ್ಟ್ರೀಯ 1876ರಲ್ಲಿ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು. ಅಂತರ್ರಾಷ್ಟ್ರೀಯ ಸೌಹಾರ್ದ ಮತ್ತು ಕಾರ್ಮಿಕ ವರ್ಗದ ಐಕ್ಯವನ್ನು ಸಂಘಟಿಸಿದ ಪ್ರಥಮ ಸಂಘಟನೆಯ ಸಮಾಪ್ತಿಯಾಯಿತು.

ಆದರೆ ಕಾರ್ಮಿಕ ವರ್ಗದ ಹೋರಾಟ ಮುಂದುವರೆಯಿತು ಅದನ್ನು ಸಂಪೂರ್ಣವಾಗಿ ಗಮನಿಸಲು ಸಾಧ್ಯವಾಗಲಿಲ್ಲ. 1884ರ ಅಕ್ಟೋಬರ್‌ನಲ್ಲಿ ಅಮೇರಿಕ ಮತ್ತು ಕೆನಡಾಗಳ ಸಂಘಟಿತ ಉದ್ಯಮಗಳ ಫೆಡರೇಶನ್‌ನ ಮತ್ತು ಕಾರ್ಮಿಕ ಸಂಘಗಳ ನಾಲ್ಕನೇ ಅಧಿವೇಶನದಲ್ಲಿ ಮೇ 1886ರಿಂದ ದುಡಿಯುವ ದಿನವನ್ನು 8 ಗಂಟೆಗಳೆಂದು ಕಾನೂನಿನ ರೀತ್ಯಾ ಪರಿಗಣಿಸಬೇಕೆಂದು ನಿರ್ಧರಿಸಲಾಯಿತು.

ಈ ಅಧಿವೇಶನದ ಗೊತ್ತುವಳಿ ಮೇ ಒಂದನೇ ದಿನಾಂಕದಂದು ಮುಷ್ಕರ ಮಾಡಲು ಕರೆ ನೀಡಿತು. ಮತ್ತು ಇದು ಮೇ ದಿನಾಚರಣೆಯ ಸಮರಧೀರ ಪರಂಪರೆಯ ಆರಂಭವಾಗಿತ್ತು. 1886ರ ಮೇ ಸಮಯದಲ್ಲಿ ಹಲವು ಸಾವಿರ ಕಾರ್ಮಿಕರು ಮತ್ತು ಹಲವು ಸಂಘಟನೆಗಳು ಎಂಟು ಗಂಟೆಗಳ ಕೆಲಸದ ದಿನದ ಬೇಡಿಕೆಗಾಗಿ ಮುಷ್ಕರ ಮಾಡಲು ಸಿದ್ಧವಾದವು.

ಚಿಕಾಗೋದಲ್ಲಿ ರಕ್ತಪಾತ

ಸಹಸ್ರಾರು ಕಾರ್ಮಿಕರು ನೇರವಾಗಿ ಕಾರ್ಯಾಚರಣೆ ನಡೆಸಿದ ಚಿಕಾಗೋದಲ್ಲಿ ಮುಷ್ಕರ ಅತ್ಯಂತ ಧೀರವಾಗಿತ್ತು. ಉದ್ಯಮಪತಿಗಳು ಮತ್ತು ಅಮೇರಿಕಾ ಸರ್ಕಾರ ಈ ಹೋರಾಟವನ್ನು ಬಗ್ಗು ಬಡಿಯಲು ನಿರ್ಧರಿಸಿತು. ಮೇ 3-4 ರಂದು ಕಾರ್ಮಿಕರ ಮೇಲೆ ಪೋಲೀಸರು ನಡೆಸಿದ ದೌರ್ಜನ್ಯವನ್ನು ಪ್ರತಿಭಟಿಸಲು ಮೇ ನಾಲ್ಕರಂದು ನಡೆಯುತ್ತಿದ್ದ ಪ್ರದರ್ಶನದಲ್ಲಿ ಕಾರ್ಮಿಕರ ನಾಯಕರನ್ನು ದಮನಿಸಲು ಮತ್ತು ಆರೋಪಕ್ಕೆ ಸಿಕ್ಕಿಸಲು ಪ್ರಚೋದಕರು ಮತ್ತು ಬಾಡಿಗೆ ಗೂಂಡಾಗಳು ಒಂದು ಬಾಂಬ್ ದಾಳಿಯನ್ನು ನಡೆಸಿದರು. ಮೇ. 304ರಂದು "ಹೇ ಮಾರುಕಟ್ಟೆ ಘಟನೆ" ಗಳೆಂದು ಕರೆಯಲ್ಪಡುವ ಈ ಘಟನೆಗಳು ಮೇ ಒಂದರಂದು ನಡೆದ ಮುಷ್ಕರದ ನೇರ ಪರಿಣಾಮವಾಗಿತ್ತು. ಮೇ 3 ರಂದು ಮುಷ್ಕರನಿರತ ಕಾರ್ಮಿಕರ ಮೇಲೆ ಪೋಲೀಸರು ಅಮಾನುಷ ದಬ್ಬಾಳಿಕೆ ನಡೆಸಿ ಆರು ಜನ ಕಾರ್ಮಿಕರನ್ನು ...

ದೌರ್ಜನ್ಯವನ್ನು ಪ್ರತಿಭಟಿಸಲು ಹೇ ಮಾರುಕಟ್ಟೆ ಚೌಕದಲ್ಲಿ ಮೇ 4 ರಂದು ಪ್ರದರ್ಶನ ನಡೆಸಲಾಗಿತ್ತು. ಪ್ರತಿಭಟನಾ ಸಭೆ ಶಾಂತಿಯುತವಾಗಿತ್ತು. ಆದರೆ ಪೋಲೀಸರು ಯಾವುದೇ ಪ್ರಚೋದನೆಯಿಲ್ಲದೆ ಆಕ್ರಮಣ ಮಾಡಿದರು. ಮತ್ತು ಗುಂಪಿನೊಳಗೆ ಒಂದು ಬಾಂಬು ಎಸೆಯಲಾಯಿತು. ಓರ್ವ ಸಾರ್ಜೆಂಟ್ ಸತ್ತುಹೋದ. ಒಂದು ಸಂಘರ್ಷ ನಡೆದು ಹಲವು ಪೋಲೀಸರು ಮತ್ತು ನಾಲ್ವರು ಕಾರ್ಮಿಕರು ಸತ್ತರು. ಆದರೆ ಅಧಿಕಾರಸ್ಥರಿಗೆ ಕಾರ್ಮಿಕರ ಈ ರಕ್ತದಿಂದಿ ತೃಪ್ತಿಯಾಗಲಿಲ್ಲ. ಕಾರ್ಮಿಕರ ಸಮರ ಧೀರ ಮುಂದಾಳುತನದಿಂದ ಆಲ್ಬರ್ಟ್ ಆರ್. ಪಾರ್ಸನ್ಸ್, ಆಗಸ್ಟ್ ಸ್ಪೈಯಿಸ್, ಅಡೋಲ್ಫ್ ಫಿಷರ್ ಮತ್ತು ಜಾರ್ಜ್ ಎಂಗೆಲರ ಮೇಲೆ ಆರೋಪ ಹೊರಿಸಿ ಗಲ್ಲಿಗೆ ಹಾಕಲಾಯಿತು. ಮತ್ತು ಚಿಕಾಗೊದ ಇನ್ನಿತರ ಸಮರಧೀರ ಕಾರ್ಮಿಕರಿಗೆ ಹಲವು ವರ್ಷಗಳ ಜೈಲು ಶಿಕ್ಷೆಯನ್ನು ಕೊಡಲಾಯಿತು.

ಕಾರ್ಮಿಕರ ಶೋಷಣೆಯನ್ನು ನಿಯಂತ್ರಿಸಲು ಪ್ರಯತ್ನಿಸಿದ ಹೋರಾಟಕ್ಕಾಗಿ, ಎಂಟು ಗಂಟೆಗಳ ದುಡಿಮೆಯ ದಿನದ ಬೇಡಿಕೆಯನ್ನು ಮುಂದಿಟ್ಟ ಕಾರಣಕ್ಕಾಗಿ ಬಂಡವಾಳಶಾಹಿ ನ್ಯಾಯಪದ್ಧತಿ ಕಾರ್ಮಿಕ ವರ್ಗದ ನಾಲ್ಕು ಧೀರ ನಾಯಕರ ಜೀವವನ್ನು ಬಲಿ ತೆಗೆದುಕೊಂಡಿತು. ಹೀಗೆ ಆರಂಭವಾಯಿತು ಮೇ ದಿನದ ಸಮರಧೀರ ಪರಂಪರೆ, ಕ್ರಾಂತಿಕಾರಿ ಬಲಿದಾನದ ಪರಂಪರೆ.

ಮೊಕದ್ದಮೆಯ ವಿಚಾರಣೆಯಲ್ಲಿ ಆರೋಪಿಗಳು ಅಪೂರ್ವ ಧೈರ್ಯವನ್ನು ಮತ್ತು ಘನತೆಯನ್ನು ಪ್ರದರ್ಶಿಸಿದರು. ಅವರು ತಮ್ಮನ್ನು ಸಮರ್ಥಿಸಿಕೊಂಡರು ಮತ್ತು ಆಡಳಿತ ವರ್ಗವನ್ನು ಆರೋಪಿಸಿದರು. ಬಂಧನಕ್ಕೊಳಗಾಗದೆ ತಪ್ಪಿಸಿಕೊಂಡಿದ್ದ ಪಾರ್ಸೆನ್ಸ್ ನ್ಯಾಯಾಲಯದಲ್ಲಿ ಹಾಜರಾಗಿ ತನ್ನ ಸಂಗಾತಿಗಳೊಡನೆ ವಿಚಾರಣೆ ಎದುರಿಸಿದ. 1887ರ ನವೆಂಬರ್ 11 ರಂದು ಅಲ್ಬರ್ ಪಾರ್ಸೆನ್ಸ್, ಆಗಸ್ಟ್ ಸ್ಪೈಯಿಸ್, ಜಾರ್ಜ್ ಎಗೆಲ್, ಅಡೋಲ್ಫ್‌ಫಿಶರ್ ಇವರುಗಳನ್ನು ಗಲ್ಲಿಗೆ ಹಾಕಲಾಯಿತು. ಗಲ್ಲಿಗೇರುವ ಮುನ್ನ ಸ್ಪೈಯಿಸ್‌ನ ಕೊನೆಯ ಮಾತುಗಳು **"ನಮ್ಮ ನುಡಿಗಳಿಗಿಂತ ನಮ್ಮ ಮೌನ ಅಮೂಲ್ಯವಾಗುವ ಕಾಲವೊಂದು ಬಂದೇ ಬರುತ್ತದೆ".**

ಜೀವಾವಧಿ ಶಿಕ್ಷೆಗೆ ಗುರಿಪಡಿಸಿದ ಮೂವರು ನಾಯಕರನ್ನು 1893ರಲ್ಲಿ ಬಿಡುಗಡೆಗೊಳಿಸಲಾಯಿತು. ಅವರ ಮೇಲಿನ ಆರೋಪಗಳು ಸಾಬೀತಾಗಲಿಲ್ಲವೆಂದೂ,

ಚಿಕಾಗೋ ಹುತಾತ್ಮರು



ಪಾರ್ಸನ್ಸ್ ಎಂಗೆಲ್ ಸ್ಪೈಜ್ ಫಿಷರ್

ಕಳೆದ ಸೆಪ್ಟೆಂಬರ್ 11 ರ ವಿಶ್ವ ವಾಣಿಜ್ಯ ಕೇಂದ್ರವನ್ನು ನಾಶ ಮಾಡಿದ ಭೀಕರ ಭಯೋತ್ಪಾದನೆಯ ನಂತರ 'ಭಯೋತ್ಪಾದನೆ'ಗೆ ಹೊಸ ಅರ್ಥ ನೀಡಿದೆ. 'ಭಯೋತ್ಪಾದನೆ' ಹಿಂದೆ ಸಾಮ್ರಾಜ್ಯಶಾಹಿಯ ಕೈಗೆಸಿಕ್ಕಿ ಅವರ ಆಯುಧವಾಗಿ ತನ್ನ ಮೂಲ ಅರ್ಥ ಕಳೆದುಕೊಂಡ 'ಸ್ವಾತಂತ್ರ್ಯ', 'ಪ್ರಜಾಪ್ರಭುತ್ವ', 'ಮಾನವ ಹಕ್ಕು' ಗಳಂತಹ ಪದಗಳ ಸಾಲಿಗೆ ಸೇರಿದೆ. ಕಳೆದ ಏಳು ತಿಂಗಳಲ್ಲಿ 'ಭಯೋತ್ಪಾದನೆ' ಸಾಮ್ರಾಜ್ಯಶಾಹಿ ಮತ್ತು ಎಲ್ಲಾ ದೇಶಗಳ ಪ್ರತಿಗಾಮಿ ಆಳುವವರ ಖಡ್ಗವಾಗಿ ಎಲ್ಲಾ ಶಾಂತಿಪ್ರಿಯ ಜನತೆಗೆ ಕಂಟಕವಾಗಿದೆ. 'ಭಯೋತ್ಪಾದನೆ' ಜಗತ್ತು ಎದುರಿಸುತ್ತಿರುವ 'ಸಮಸ್ಯೆ ನಂ. 1' ಮತ್ತು ಅತ್ಯಂತ ಗಂಭೀರ ಸಮಸ್ಯೆ ಎನ್ನಲಾಗುತ್ತಿದೆ. ಭಯೋತ್ಪಾದನೆ ಸಮಸ್ಯೆ ಏನು? ಭಯೋತ್ಪಾದನೆ ಎಂದರೆ ಏನು? ಭಯೋತ್ಪಾದಕರು ಯಾರು? ಭಯತ್ಪಾದನೆ ಯಾಕೆ ಸಮಸ್ಯೆಯಾಗಿದೆ? ಅದನ್ನು ಪರಿಹರಿಸುವುದು ಹೇಗೆ? ಎಂಬುದರ ಬಗ್ಗೆ ಚಿಂತನೆ ನಿಮ್ಮ ಮುಂದಿರುವ ಲೇಖನ.

ಭಯೋತ್ಪಾದನೆ: ಹಲವು ಮುಖಗಳು

'ಭಯೋತ್ಪಾದನೆ' ಮೇಲೆ 'ಬುಶ್ ಭಾಷ್ಯ'ದ ಮೇಲೊಂದು ಭಾಷ್ಯ

ಭಯೋತ್ಪಾದಕರು, ಸ್ವಾತಂತ್ರ್ಯ ಹೋರಾಟಗಾರರು ಮತ್ತು 'ಪ್ರಾಕ್ಸಿಯುದ್ಧದ' ಬಾಡಿಗೆ ಸೈನಿಕರು

ಶರತ್‌ಚಂದ್ರ

ಕಳೆದ ವರ್ಷ ಸೆಪ್ಟೆಂಬರ್ 20 ರ ಅಧ್ಯಕ್ಷ ಜಾರ್ಜ್ ಬುಶ್‌ರ ಕುಖ್ಯಾತ ಭಾಷಣದ ನಂತರ ಭಯುತ್ಪಾದನೆಗೆ ಹೊಸ ಅರ್ಥ ಬಂದಿದೆ. ಸೆಪ್ಟೆಂಬರ್ 11 ರಂದು ನ್ಯೂಯಾರ್ಕ್‌ನಲ್ಲಿ ನಡೆದ ಭೀಕರ ಭಯೋತ್ಪಾದನೆ ಕೃತ್ಯದ ನಂತರ, ಅಫಘಾನಿಸ್ತಾನದ ಮೇಲೆ ಯುದ್ಧ ಸಾರುವ ಮೊದಲು ಈ ಭಾಷಣ ಮಾಡಲಾಗಿತ್ತು. ಬುಶ್ ಭಾಷಣದಲ್ಲಿ ಹೇಳಿದಂತೆ "ನೀವು ನಮ್ಮೊಂದಿಗಿದ್ದೀರಿ ಇಲ್ಲವೇ ಭಯೋತ್ಪಾದಕರೊಂದಿಗೆ ಇದ್ದೀರಿ'. ಭಯೋತ್ಪಾದನೆ ಬಗ್ಗೆ ವೇದವಾಕ್ಯವಾಗಿ'. ನಮ್ಮ ವಾಜಪೇಯಿಯವರು ಬುಶ್ 'ಭಯೋತ್ಪಾದನೆ'ಯ ಭಾಷ್ಯವನ್ನು ಡೊಗ್ಗು ಸಲಾಮು ಹಾಕಿ ಸ್ವೀಕರಿಸುವ ಮೊದಲ ನಾಯಕರಾಗಿ ಕುಖ್ಯಾತರಾದರು. ಅಮೆರಿಕದ ಮತ್ತು ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ದೇಶಗಳ ಆಳುವವರು ತಮ್ಮ ವಿರೋಧಿಗಳನ್ನು 'ಭಯೋತ್ಪಾದಕರು' ಎಂದು ಕರೆಯುವುದು ಹೊಸತಲ್ಲ. ಅಮೆರಿಕನ್ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಡಿದ ಕ್ಯೂಬನ್, ವಿಯೆಟ್ನಾಮ್, ಕೊರಿಯನ್ ದೇಶಭಕ್ತ ಕ್ರಾಂತಿಕಾರಿಗಳನ್ನು 'ಭಯೋತ್ಪಾದಕ' ರೆಂದು ಕರೆದಿತ್ತು. ಫ್ರೆಂಚರು ಅಲ್ಜೀರಿಯನ್ ಹಾಗೂ ಬ್ರಿಟಿಷರು ಭಾರತದ ದೇಶಭಕ್ತ ಕ್ರಾಂತಿಕಾರಿಗಳನ್ನು 'ಭಯೋತ್ಪಾದಕರು' ಎಂದು ಹಣೆಪಟ್ಟಿ ಕಟ್ಟಿದ್ದರು. 90ರದಶಕದ ಮತ್ತು ಸೆಪ್ಟೆಂಬರ್ 11 ರಂದು ನಡೆದ ಭೀಕರ ಭಯೋತ್ಪಾದನೆಯ ಘಟನೆ ಹಿನ್ನೆಲೆಯಲ್ಲಿ ಬುಶ್‌ರ ಭಯೋತ್ಪಾದನೆಯ ಭಾಷ್ಯ ಇಡೀ ಜಗತ್ತಿಗೆ ಅಪಾಯವಾಗಿ ಪರಿಣಮಿಸಿದೆ.

ಬುಶ್‌ರ ಭಾಷ್ಯವನ್ನು ಎಲ್ಲಾ ದೇಶಗಳ ಅತ್ಯಂತ ಪ್ರತಿಗಾಮಿ ನಾಯಕರು ಹರ್ಷೋದ್ಗಾರದಿಂದ ಅಂಗೀಕರಿಸಿದ್ದಾರೆ. ಇಸ್ರೇಲಿ ಪ್ರಧಾನಿ ಶರೋನ್ ಪ್ರಕಾರ ಎಲ್ಲಾ ಪ್ಯಾಲೆಸ್ಟೇನ್ನರು 'ಭಯೋತ್ಪಾದಕರು'. ಆದ್ದರಿಂದ ಅವರ ಮೇಲೆ ಯುದ್ಧ ಮಾಡಬೇಕು. ಸಂಘ ಪರಿವಾರದ ಪ್ರಕಾರ ಮುಸ್ಲಿಮರೆಲ್ಲಾ ಭಯೋತ್ಪಾದಕರು. ಭಾರತದ ಹಲವು ರಾಜ್ಯಗಳಲ್ಲಿ ಬಡವರ ಬಗ್ಗೆ ದನಿ ಎತ್ತುವವರೆಲ್ಲಾ 'ನಕ್ಸಲೈಟ್ ಭಯೋತ್ಪಾದಕರು'. ಆದರೆ ಭಯೋತ್ಪಾದನೆ ಬಗ್ಗೆ ಬುಶ್ ಭಾಷ್ಯವಾಗಲಿ ಇತರ 'ಸರ್ಕಾರಿ' ಭಾಷ್ಯವಾಗಲೀ ನಮಗೆ ಜೀರ್ಣವಾಗುವುದು ಕಷ್ಟ.

ರಾತ್ರೋರಾತ್ರಿ 'ಸ್ವಾತಂತ್ರ್ಯ ಹೋರಾಟಗಾರರು' 'ಭಯೋತ್ಪಾದಕ'ರಾದ್ದದ್ದು.

ಮೊದಲನೆಯದಾಗಿ ಸರ್ಕಾರಿ ಭಾಷ್ಯದ ಭಯೋತ್ಪಾದಕರು ಕೆಲವೊಮ್ಮೆ ರಾತ್ರೋರಾತ್ರಿ ಬಣ್ಣ ಬದಲಾಯಿಸಿ 'ಸ್ವಾತಂತ್ರ್ಯ ಹೋರಾಟಗಾರರು' ಆಗುವುದುಂಟು. ಹಾಗೆನೇ ತಿರುವು ಮುರುವು ಆಗುವುದುಂಟು. 1985 ರಲ್ಲಿ ಅಫಘಾನಿಸ್ತಾನದ ಇಸ್ಲಾಮಿಕ್ ಮೂಲಭೂತವಾದಿಗಳನ್ನು ಅಧ್ಯಕ್ಷ ರೇಗನ್ 'ಸ್ವಾತಂತ್ರ್ಯ ಹೋರಾಟಗಾರರು' ಎಂದು ಕರೆದಿದ್ದರು. ಅದೇ ಇಸ್ಲಾಮಿಕ್ ಮೂಲಭೂತವಾದಿಗಳು ಮತ್ತು ಅವರ ಉತ್ತರಾಧಿಕಾರಿಗಳು ಈಗ ಭಯೋತ್ಪಾದಕರು. ಸೂಡಾನ್‌ನಿಂದ ಫಿಲಿಪ್ಪೈನ್ಸ್ ವರೆಗೆ 'ಸೋವಿಯತ್ ದುಷ್ಟ ಸಾಮ್ರಾಜ್ಯ' ಮತ್ತು ಅವರ ಬೆಂಬಲಿಗರ (ಎಡ ಪ್ರಗತಿಶೀಲ ದೇಶಪ್ರೇಮ ಸರ್ಕಾರಗಳ) ವಿರುದ್ಧ ಹೋರಾಡುತ್ತಿದ್ದ 'ಇಸ್ಲಾಮಿಕ್ ಜೆಹಾದ್' ಗಳು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಅವರಿಗೆ ಅಮೆರಿಕದಿಂದ ಶಸ್ತ್ರಾಸ್ತ್ರ ಸಾಮಗ್ರಿ, ಹಣ, ರಾಜಕೀಯ, ಸೈದ್ಧಾಂತಿಕ ಬೆಂಬಲ ಕುಮ್ಮಕ್ಕು ಕೊಡಲಾಗಿತ್ತು. ಒಸಮಾ ಬಿನ್ ಲಾಡೆನ್ ಸ್ವಾತಂತ್ರ್ಯ ಹೋರಾಟಗಾರರ ನಾಯಕನಾಗಿದ್ದ. ಅಮೆರಿಕಾದ ಮೇಲೆ ತಿರುಗಿ ಬಿದ್ದ ಎಂಬ ಒಂದೇ ಕಾರಣಕ್ಕೆ ಆತ ರಾತ್ರೋರಾತ್ರಿ 'ಭಯೋತ್ಪಾದಕ'ನಾದ. ಅಮೆರಿಕದ ಇಡೀ ದೈತ್ಯ ಮಿಲಿಟರಿ ಶಕ್ತಿ ಆತನ ವಿರುದ್ಧ ತಿರುಗಿಬಿತ್ತು.

ಬುಶ್ ಭಾಷ್ಯದ ಪ್ರಕಾರ 'ಭಯೋತ್ಪಾದನೆ' ಒಂದೇ ರೀತಿಯ ಕುಕೃತ್ಯ ಮಾಡುವವರೆಲ್ಲಾ ಭಯೋತ್ಪಾದಕರಾಗುವುದಿಲ್ಲ. ಚಿಲಿಯಲ್ಲಿ ಚುನಾಯಿತ ಅಧ್ಯಕ್ಷರನ್ನು ಕೊಂದು ಎಡ-ಪ್ರಗತಿಶೀಲ ದೇಶಪ್ರೇಮಿ ಚಳುವಳಿಯನ್ನು ಅತ್ಯಂತ ಕುಖ್ಯಾತ ನರಮೇಧದಿಂದ ಹತ್ತಿಕ್ಕಿದ ಮಿಲಿಟರಿ ಸರ್ವಾಧಿಕಾರಿ ಪಿನೋಶಿಯದ್ದು ಭಯೋತ್ಪಾದಕ ಸರ್ಕಾರವಲ್ಲ. ಆದರೆ ಅಮೆರಿಕದ ವಿರುದ್ಧ ತಿರುಗಿಬಿದ್ದ ಸದ್ದಾಂ ಹುಸೇನರದ್ದು 'ಭಯೋತ್ಪಾದಕ ಸರ್ಕಾರ'. ಹೆಚ್ಚುಕಡಿಮೆ ಕಳೆದ ಐವತ್ತು ವರ್ಷಗಳಲ್ಲಿ ಆಗಾಗ 'ಮಿಲಿಟರಿ ಸರ್ವಾಧಿಕಾರ' ಎದ್ದ ದಕ್ಷಿಣ ಕೊರಿಯಾ ಪ್ರಜಾಸತ್ತಾತ್ಮಕವಾದರೆ, ಉತ್ತರ ಕೊರಿಯಾ ಭಯೋತ್ಪಾದಕ ದೇಶ. ಇರಾಕ್‌ನ ಸದ್ದಾಹುಸೇನ್ ವಿರುದ್ಧ ಇರುವ ಇರಾಕ್‌ನ ಕುರ್ದಿಶ್ ಅಲ್ಪಸಂಖ್ಯಾತ ಚಳುವಳಿ 'ಸ್ವಾತಂತ್ರ್ಯ ಹೋರಾಟ'. ಆದರೆ ಅಮೆರಿಕದ ನೆಚ್ಚಿನ ಬಂಟನಾಗಿರುವ ತುರ್ಕಿಯಲ್ಲಿರುವ ಕುರ್ದಿಶ್ ಚಳುವಳಿ 'ಭಯೋತ್ಪಾದಕ ಚಳುವಳಿ'. ಕಾಶ್ಮೀರ ಮತ್ತು ಅಫಘಾನಿಸ್ತಾದ ಮೂಲಭೂತವಾದಿ ಭಯೋತ್ಪಾದಕರಿಗೆ ಕುಮ್ಮಕ್ಕು/ಬೆಂಬಲ ಕೊಟ್ಟ ಪಾಕಿಸ್ತಾನ ಸರ್ಕಾರ 'ಭಯೋತ್ಪಾದನೆ ವಿರುದ್ಧ ಯುದ್ಧ'ದಲ್ಲಿ ಅಮೆರಿಕದ ಪ್ರಾಣಮಿತ್ರ. ನಿಕರಾಗುವದ 'ಕಾಂಟ್ರಾ'ಗಳು ಭಯೊತ್ಪಾದಕರು ಎಂಬ ಬಗ್ಗೆ ಯಾರಿಗೂ ಸಂಶಯವಿಲ್ಲ. ಆದರೆ ಅಮೆರಿಕಕ್ಕೆ 'ಕಾಂಟ್ರಾ'ಗಳು ಸ್ವಾತಂತ್ರ್ಯ ಹೋರಾಟಗಾರರು. ವಾಜಪೇಯಿ ಸರ್ಕಾರಕ್ಕೆ 'ಸಿಮಿ' ಭಯೋತ್ಪಾದಕರು. ಆದರೆ ಬಾಬ್ರಿ ಮಸೀದಿ ಒಡೆದ ವಿಹೆಚ್‌ಪಿ./ ಭಜರಂಗದಳ ಭಯೋತ್ಪಾದಕರಲ್ಲ. 'ನಮ್ಮವರು' 'ಭಯೋತ್ಪಾದನೆ' ಮಾಡಿದರೆ ಅವರು 'ಜನತೆಯ ರೋಷ'ವ್ಯಕ್ತಪಡಿಸುತ್ತಾರೆ. 'ನಿಮ್ಮವರು' 'ಭಯೋತ್ಪಾದನೆ' ಮಾಡಿದರೆ ಅವರು ಭಯುತ್ಪಾದಕರು ಎಂಬ ಕುತರ್ಕ.

ಅಮೆರಿಕ ಅತಿ ದೊಡ್ಡ ಭಯೋತ್ಪಾದಕ

[illegible] ಭಯೋತ್ಪಾದಕರು ಯಾರು?



ನಿಮಗೂ - ಅವರಿಗೂ ಎಲ್ಲಾ ಅನ್ವಯವಾಗುವ ಭಾಷ್ಯ ಇದೆಯೆ? ಖಂಡಿತ ಇದೆ. ಏನದು? ವಿವಾದದಲ್ಲಿ ಭಾಗಿಯಾಗದಿರುವ ನಿಶಸ್ತ್ರ ಸಾಮಾನ್ಯ ಜನರ ಮೇಲೆ ಬೇಕಾಬಿಟ್ಟಿ ಭೀಕರ ಹಿಂಸಾಚಾರ ಬಳಸಿ, ರಾಜಕೀಯ, ಧಾರ್ಮಿಕ ಅಥವಾ ಇತರ ಗುರಿಗಳನ್ನು ಸಾಧಿಲು ಪ್ರಯತ್ನಿಸುವುದು ಭಯೋತ್ಪಾದನೆ. ಭಯೋತ್ಪಾದಕರು ರಾಜಕೀಯ ವಿರೋಧಿ ಸಂಘಟನೆಗಳು ಮಾತ್ರ ಆಗಿರಬೇಕಿಲ್ಲ. ಸರ್ಕಾರಗಳು, ವ್ಯಕ್ತಿಗಳು, ಗುಂಪುಗಳು, ಸಂಘಟನೆಗಳು ಭಯೋತ್ಪಾದಕ ಆಗಿರಬಹುದು. ಈ ಭಾಷ್ಯದ ಪ್ರಕಾರ ಅಮೆರಿಕದ ಸರ್ಕಾರ ಜಗತ್ತಿನ ಅತಿದೊಡ್ಡ ಭಯೋತ್ಪಾದಕ. ಹೀಗೆಂದು ಹೇಳಿದವರು ಖ್ಯಾತ ಚಿಂತಕ ನೋವಮ್ ಚೋಮ್‌ಸ್ಕಿ. ಜಪಾನ್‌ನ ಹಿರೋಶಿಮಾ, ನಾಗಸಾಕಿಯಲ್ಲಿ ಹಾಕಿದ ಅಣುಬಾಂಬ್, ವಿಯೆಟ್ನಾಮ್ ಮೇಲೆ ಮಾಡಿದ ದೀರ್ಘ ಭೀಕರ ಯುದ್ಧ, ಕಳೆದ ಅರವತ್ತು ವರ್ಷಗಳಲ್ಲಿ ನೂರಾರು ಬಾರಿ ವಿದೇಶಗಳಲ್ಲಿ ಮಿಲಿಟರಿ ಹಸ್ತಕ್ಷೇಪ ನಡೆಸಿದ, ಪ್ರಮುಖ ನಾಯಕರ ಹತ್ಯೆ ನಡೆಸಿದ ಹೆಗ್ಗಳಿಕೆ ಅಮೆರಿಕನ್ ಸರ್ಕಾರದ್ದು. ಹಾಗಿದ್ದಾಗ ಅಮೆರಿಕನ್ ಸರ್ಕಾರ ಅತಿದೊಡ್ಡ ಭಯೋತ್ಪಾದಕ ಅಲ್ಲವೇ? ಇಸ್ರೇಲಿ ಸರ್ಕಾರ, ಚಿಲಿಯ ಸರ್ವಾಧಿಕಾರಿ ಪಿನೋಶೆ ಸರ್ಕಾರ, ಇಂಡೋನೇಶ್ಯಾದ ಸರ್ವಾಧಿಕಾರಿ ಜನರಲ್ ಸುಹಾರ್ತೋ, ವಿಹೆಚ್‌ಪಿ/ಭಜರಂಗದಳ, 'ಇಸ್ಲಾಮಿಕ್ ಜೆಹಾದಿ' ಗುಂಪುಗಳು, ಅಮೆರಿಕದ ಕ್ರಿಶ್ಚಿಯನ್ ಮೂಲಭೂತವಾದಿಗಳು, ಇಟಲಿಯ ಮತ್ತು ಹಲವು ಪ್ರಮುಖ ನಗರಗಳ ಮಾಫಿಯಾ(ಭೂಗತ ಅಪರಾಧ ಪ್ರಪಂಚ), ಎಲ್‌ಟಿಟಿಇ, ನಕ್ಸಲೈಟರು - ಇವರೆಲ್ಲಾ ಭಯೋತ್ಪಾದಕರೆ.

ಪ್ಯಾಲೆಸ್ಟೇನರು ಭಯೋತ್ಪಾದಕರಲ್ಲ

ಸಾಮ್ರಾಜ್ಯಶಾಹಿ ಅಥವಾ ಒಂದು ದೇಶದ ಆಳುವವರ್ಗದ ದಬ್ಬಾಳಿಕೆ, ಭಯೋತ್ಪಾದನೆ ಮಿತಿ ಮೀರಿದಾಗ ಸಹಿಸಲಾರದೆ ಜನ ಪ್ರತಿರೋಧ ಹಿಂಸಾತ್ಮಕ ಪ್ರತಿಕ್ರಿಯೆ ತೋರಿದಾಗ ಅದನ್ನು 'ಭಯೋತ್ಪಾದನೆ' ಎನ್ನಲಾಗುವುದಿಲ್ಲ. ಪ್ಯಾಲೆಸ್ಟೇನ್ ಜನರ ಪ್ರತಿರೋಧ ಇದಕ್ಕೆ ಒಳ್ಳೆಯ ಉದಾಹರಣೆ. 1948 ರಲ್ಲಿ ತಾಯ್ನಾಡಿನಿಂದ ಓಡಿಸಲ್ಪಟ್ಟು ನೆರೆಯ ಅರಬ್ ದೇಶಗಳಲಿ 'ನಿರಾಶ್ರಿತರ [illegible]'ಗಳಲಿ



ದೆಹಲಿಯ ಪಾರ್ಲಿಮೆಂಟ್ ಮೇಲೆ ಧಾಳಿ

ಪ್ಯಾಲೆಸ್ಟೇನ್‌ರ ರೋಷ ಯಾರಿಗಾದರೂ ಅರ್ಥವಾಗಬೇಕು. ತಾಯ್ನಾಡಿನಲ್ಲಿ ಇರುವ ಪ್ಯಾಲೆಸ್ಟೈನ್ನರು ತಮ್ಮ ನೆಲದಲ್ಲೇ ಎರಡನೇ ದರ್ಜೆ ಪ್ರಜೆಗಳಾಗಿದ್ದಾರೆ. ಅವನ್ನು ಓಡಿಸಲು ಎಲ್ಲಾ ಭಯೋತ್ಪಾದಕ ಕೃತ್ಯಗಳನ್ನು ಎಸಗಲಾಗುತ್ತಿದೆ. ಇದಕ್ಕೆ ಪ್ರತಿರೋಧವಾಗಿ ಆರಂಭವಾದ 'ಇಂತಿಫದಾ' ಇಸ್ರೇಲಿನ ಸರ್ಕಾರಕ್ಕೆ ಭಯೋತ್ಪಾದನೆ. 'ಇಂತಿಫದಾ' ನಿಜವಾಗಿಯೂ ಪ್ಯಾಲೆಸ್ಟೇನ್ನರ ಸ್ವಾತಂತ್ರ್ಯದ ಹೋರಾಟದ ಆಶಯದ ಪ್ರತೀಕ. ಇಂತಿಫದಾದಲ್ಲಿ ಜನ ಇಸ್ರೇಲಿ ಟ್ಯಾಂಕುಗಳ ಮೇಲೆ, ಸಶಸ್ತ್ರ ಸೈನಿಕರ ಮೇಲೆ ಕವಣೆ ಕಲ್ಲುಗಳಿಂದ ಆಕ್ರಮಣ ಮಾಡುತ್ತಾರೆ. ಇದು ಭಯೋತ್ಪಾದನೆಯಲ್ಲ. ಹಿಂಸಾಚಾರವಲ್ಲ. ಇಸ್ರೇಲಿ ಸರ್ಕಾರದ ಹಿಂಸಾಚಾರ, ಭಯೋತ್ಪಾದನೆಗೆ ಪ್ರತಿಕ್ರಿಯೆ. 50 ವರ್ಷದ ತೀವ್ರ ದಬ್ಬಾಳಿಕೆಗೆ ಪ್ರತಿಕ್ರಿಯೆಯಾಗಿ ಪ್ಯಾಲೆಸ್ಟೇನ್ನರಲ್ಲಿ ಹಲವು ರಾಜಕೀಯ ಗುಂಪುಗಳಿವೆ. ರಾಜಕೀಯ ಗುಂಪುಗಳಿಗೆ ಸಶಸ್ತ್ರ ಗೆರಿಲ್ಲಾ ಗುಂಪುಗಳಿವೆ. ಅವು ಇಸ್ರೇಲಿ ಸರ್ಕಾರವನ್ನು ಸೋಲಿಸಲು, ಮಣಿಸಲು, ಅದರ ಹಿಂಸಾಚಾರ - ಭಯೋತ್ಪಾದನೆಗೆ ಪ್ರತೀಕಾರ ಮಾಡಲು ಸಾಧ್ಯ ಎಂಬುದನ್ನು ಜನತೆಗೆ ತೋರಿಸಲು ಆ ಮೂಲಕ ಜನತೆಯ ಸ್ವಾತಂತ್ರ್ಯ ಹೋರಾಟದ ದೃಢ ನಿರ್ಧಾರ ಗಟ್ಟಿಗೊಳಿಸಲು ಇಸ್ರೇಲಿ ಸೈನ್ಯ, ಸರ್ಕಾರದ ಪತ್ರಿಕೆಗಳ ಮೇಲೆ ಆಕ್ರಮಣ ಮಾಡುತ್ತಾರೆ. ಪ್ಯಾಲೆಸ್ಟೈನ್ನರ ಮುಖ್ಯ ಸಂಘಟನೆ PLO (ಪ್ಯಾಲೆಸ್ಟೇನ್ ವಿಮುಕ್ತಿ ಸಂಘಟನೆ) ಭಯೋತ್ಪಾದಕರಲ್ಲ. ಇವರು ಸ್ವಾತಂತ್ರ್ಯ ಹೋರಾಟಗಾರರು. ಆದರೆ ಪ್ಯಾಲೆಸ್ಟೇನ್‌ನ 'ಇಸ್ಲಾಮಿಕ್ ಮೂಲಭೂತವಾದಿ' ಹಮಾಸ್ ಗುಂಪು ಇಸ್ರೇಲಿ ಸೈನ್ಯ, ಸರ್ಕಾರದ ಮೇಲೆ ಆಕ್ರಮಣವಲ್ಲದೆ, ದೊಡ್ಡ ಪ್ರಮಾಣದಲ್ಲಿ ಇಸ್ರೇಲಿ ನಾಗರಿಕರ ಮೇಲೆ 'ಆತ್ಮಹತ್ಯಾ ಬಾಂಬ್ ದಾಳಿ' ನಡೆಸುತ್ತದೆ. ಅಷ್ಟರ ಮಟ್ಟಿಗೆ 'ಹಾಮಾಸ್' ಭಯೋತ್ಪಾದಕರ ಗುಂಪು. ಆದರೆ ಇಸ್ರೇಲಿ ಸರ್ಕಾರದ (ಇದಕ್ಕೆ ಅಮೆರಿಕನ್ ಸರ್ಕಾರದ ಪೂರ್ಣ ಮಿಲಿಟರಿ' / ರಾಜಕೀಯ ಬೆಂಬಲ / ಕುಮ್ಮಕ್ಕು ಇದೆ.) ಭಯೋತ್ಪಾದನೆಗೆ ಹಾಮಾಸ್‌ನ ಪ್ರತಿಕ್ರಿಯೆ ಪ್ರತಿ-ಭಯೋತ್ಪಾದನೆ. ಇದೇ ರೀತಿ ಶ್ರೀಲಂಕಾ ತಮಿಳು ಎಲ್‌ಟಿಟಿಇ, ಉತ್ತರ ಐರ್ಲೆಂಡಿನ IRA (ಐರಿಶ್ ರಿಪಬ್ಲಿಕನ್ ಆರ್ಮಿ) ಎರಡೂ ಭಯೋತ್ಪಾದಕ ಗುಂಪುಗಳು ಎನ್ನಬಹುದಾದರೂ, ಅಲ್ಲಿನ (ಶ್ರೀಲಂಕಾ ಮತ್ತು ಬ್ರಿಟಿಷ್) ಸರ್ಕಾರಗಳ ದೀರ್ಘ ಜನಾಂಗೀಯ ದಬ್ಬಾಳಿಕೆ, ಭಯೋತ್ಪಾದಕವಲ್ಲದ ಇತರ ರಾಜಕೀಯ ಸಂಘಟನೆಗಳನ್ನು ಮತ್ತು ಹೋರಾಟಗಳನ್ನು ಮಟ್ಟ ಹಾಕಿದ್ದರ ಹಿನ್ನಲೆಯನ್ನು ನೆನಪಿಟ್ಟುಕೊಳ್ಳಬೇಕು. ಇವುಗಳ ಭಯೋತ್ಪಾದಕ ಕೃತ್ಯ (ಮುಖ್ಯವಾಗಿ ದೊಡ್ಡ ಪ್ರಮಾಣದಲ್ಲಿ ನಾಗರಿಕರ ಮೇಲೆ ಆಕ್ರಮಣ) ಖಂಡನಾರ್ಹವಾದುದು. ಇವೂ ಮುಖ್ಯವಾಗಿ ಪ್ರತಿ- ಭಯೋತ್ಪಾದನೆಯಾಗಿ ಆರಂಭವಾಗಿದ್ದು ಎಂಬುದನ್ನು ನೆನಪಿಟ್ಟುಕೊಳ್ಳಬೇಕು.



'ಪ್ರಾಕ್ಸಿ ಯುದ್ಧ' ದ ಬಾಡಿಗೆ ಸೈನಿಕರು

ಹಲವು ಕಡೆ ಭಯೋತ್ಪಾದಕ ಗುಂಪುಗಳು ವಿದೇಶಿ ಶಕ್ತಿಯೊಂದರ 'ಪ್ರಾಕ್ಸಿ' ಯಾಗಿ ಕೆಲಸ ಮಾಡುತ್ತವೆ. ಸಮಾಜವಾದಿ ದೇಶಗಳ ಮಿಲಿಟರಿ ಬಲದಿಂದಾಗಿ, ಸಮಾಜವಾದಿ ದೇಶಗಳು ಮತ್ತು ಇತರ ಪ್ರಗತಿಶೀಲ - ದೇಶಾಭಿಮಾನಿ ಸರ್ಕಾರಗಳ ಮೇಲೆ 'ಶೀತ-ಸಮರ'ದ ಭಾಗವಾಗಿ ಅಮೆರಿಕನ್ ಸರ್ಕಾರ, ತನ್ನ ಗೂಢಾಚಾರ ಪಡೆ ಸಿಐಎ ಬಳಸಿ ಎಲ್ಲಾ ಕಡೆ 'ಭಯೋತ್ಪಾದಕ ಗುಂಪು'ಗಳನ್ನು ಹುಟ್ಟು ಹಾಕಿತ್ತು. ಈ ಭಯೋತ್ಪಾದಕ ಗುಂಪುಗಳು ಜನರಲ್ಲಿ ಇರುವ ಅತೃಪ್ತಿಯನ್ನು ಬಳಸಿದವು. ಅಂದರೆ ಮುಖ್ಯವಾಗಿ ಧಾರ್ಮಿಕ ಮೂಲಭೂತವಾದ, ಜನಾಂಗೀಯ / ಬುಡಕಟ್ಟು/ ಧಾರ್ಮಿಕ ಪ್ರತ್ಯೇಕತೆ ಮೇಲೆ ಈ ಗುಂಪುಗಳು ಆಧಾರಿತವಾಗಿದ್ದವು. ಲಿಬ್ಯಾ, ಅಲ್ಜೀರಿಯಾ, ಈಜಿಪ್ಟ್‌ನಿಂದ ಇಂಡೋನೇಶ್ಯಾದವರೆಗ (ಮುಸ್ಲಿಂ ದೇಶಗಳಲ್ಲಿ) ಪ್ರಗತಿಪರ ಆಧುನಿಕ ಸರ್ಕಾರಗಳನ್ನು ಬುಡಮೇಲು ಮಾಡಲು 'ಇಸ್ಲಾಮಿಕ್ ಮೂಲಭೂತವಾದ' ವನ್ನು ಅಮೆರಿಕನ್ ಸಾಮ್ರಾಜ್ಯಶಾಹಿ ಹುಟ್ಟುಹಾಕಿ ಸಾಕಿತು. ಸಮಾಜವಾದಿ ದೇಶಗಳಲ್ಲಿ (ಯುಗೋಸ್ಲಾವಿಯಾ, ಝೆಕೋಸ್ಲಾವಿಯಾ, ಸೋವಿಯತ್ ಒಕ್ಕೂಟದ ದೇಶಗಳಲ್ಲಿ) ಜನಾಂಗೀಯ/ ಬುಡಕಟ್ಟು/ ಧಾರ್ಮಿಕ ಪ್ರತ್ಯೇಕತೆ ಆಧಾರದ ಮೇಲೆ ಭಯೋತ್ಪಾದಕ ಗುಂಪುಗಳನ್ನು ಹುಟ್ಟುಹಾಕಿ ಸಾಕಲಾಯಿತು. ಇವೆಲ್ಲಾ ಅಮೆರಿಕದ 'ಪ್ರಾಕ್ಸಿ ಯುದ್ಧ'ದ ಅಸ್ತ್ರಗಳಾದವು. ಅಫಘಾನಿಸ್ತಾನದ ಮುಜಾಹಿದಿನ್/ ತಾಲಿಬಾನ್, ಕಾಶ್ಮೀರದ ಜೈಶ್-ಎ-ಮುಹಮ್ಮದ್ ಮುಂತಾದ ಮೂಲಭೂತವಾದಿ ಗುಂಪುಗಳು ಈ ಥರದ ಗುಂಪುಗಳು. ಇವು ಜನರ 'ಅತೃಪ್ತಿ', 'ರೋಷ' ಬಳಸಿದರೂ ಶುದ್ಧ 'ಭಯೋತ್ಪಾದಕ ಪ್ರಾಕ್ಸಿ ಯುದ್ಧ'ದ ಬಾಡಿಗೆ ಹೋರಾಟಗಾರರ ಗುಂಪುಗಳು. ಇವು ಜನರ 'ಅತೃಪ್ತಿ' 'ರೋಷ'ದಿಂದ ಹುಟ್ಟಿದವು ಅಲ್ಲ.

ಭಯೋತ್ಪಾದನೆ ಸಮಸ್ಯೆ ಏನು? ಏಕೆ?

ಭಯೋತ್ಪಾದನೆ ಎಂದರೆ ಏನು? ಭಯೋತ್ಪಾದಕರು ಯಾರು? ಎಂದು ಗುರುತಿಸಿದ ಮೇಲೆ ಭಯೋತ್ಪಾದನೆ ಸಮಸ್ಯೆ ಇದ್ದಕ್ಕಿದ್ದ ಹಾಗೆ ಯಾಕೆ ತೀವ್ರವಾಗಿದೆ. ಇದರ ಮೂಲ ಕಾರಣ ಏನು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. 'ಭಯೋತ್ಪಾದನೆಯ ಆಳವಾದ ಮೂಲಬೇರುಗಳಿಗೆ ಕಾರಣವಾದ ಆರ್ಥಿಕ-ರಾಜಕೀಯ ಅಂಶಗಳು ಏನೇ ಇರಲಿ, ಭಯೋತ್ಪಾದನೆ ಸಮಸ್ಯೆ ಧುತ್ತೆಂದು ಎಲ್ಲರನ್ನು ಕಾಡಲು ಮುಖ್ಯಕಾರಣ ಯಾರು ಎಂಬುದು ಒತ್ತಟ್ಟಿರಲಿ, **ಭಯೋತ್ಪಾದನೆ ಒಂದು ಅಪಾಯಕಾರಿ ಮತ್ತು ನೈತಿಕವಾಗಿ ಅಸಮರ್ಥನೀಯ ಪ್ರಕ್ರಿಯೆಯಾಗಿ ಬೆಳೆದಿದೆ. ಅದನ್ನು ಬುಡಸಮೇತ ಕಿತ್ತೊಗೆಯಬೇಕು ಎಂಬುದು ನಿರ್ವಿವಾದಿತ ಅಂಶ'** ಎನ್ನುತ್ತಾರೆ ಫಿಡೆಲ್ ಕ್ಯಾಸ್ಟ್ರೋ. ಆದರೆ 'ಭಯೋತ್ಪಾದನೆ' ಜಾಗತಿಕ ಹಸಿವು, ಬಡತನ, ಬೆಳವಣಿಗೆ, ಪರಿಸರ ಮಾಲಿನ್ಯ - ಈ ಮುಂತಾದ ಭೀಕರ ಸಮಸ್ಯೆಗಳನ್ನು ನುಂಗಿ ಹಾಕುವ ದೊಡ್ಡ ಸಮಸ್ಯೆ ಯಾಕಾಗಿದೆ?


ಪ್ಯಾಲೆಸ್ಟೇನ್ ಮೇಲೆ ಇಸ್ರೇಲ್ ಧಾಳಿ

'ಭಯೋತ್ಪಾದನೆ' ಜನತಾ ಹೋರಾಟದ ಅಸ್ತ್ರವಾಗಲಾರದು

ಮಾರ್ಕ್ಸ್‌ವಾದಿಗಳು ಪ್ರಗತಿಪರ ಶಕ್ತಿಗಳು 'ಭಯೋತ್ಪಾದನೆ' ಜನತಾ ಹೋರಾಟದ ಅಸ್ತ್ರವಾಗಲಾರದು ಎಂದು ನಂಬಿವೆ. ಆಳುವ ವರ್ಗಗಳ, ಸಾಮ್ರಾಜ್ಯಶಾಹಿ ಭಯೋತ್ಪಾದನೆಗೆ ಪ್ರತಿರೋಧ ಒಡ್ಡಬೇಕು, ಅವನ್ನು ಹಿಮ್ಮೆಟ್ಟಿಸಬೇಕು. ಆದರೆ 'ಪ್ರತಿ-ಭಯೋತ್ಪಾದನೆ' ಜನರ ಚಳುವಳಿಗೆ ಮಾರಕ ಎಂದು ನಂಬಿವೆ. ಸೆಪ್ಟೆಂಬರ್ 11ರ ಭಯೋತ್ಪಾದಕ ಕೃತ್ಯದ ಪರಿಣಾಮವೇ ಇದಕ್ಕೆ ಉತ್ತಮ ನಿದರ್ಶನ. ಸೆಪ್ಟೆಂಬರ್ 11 ರ ಕೃತ್ಯ ಅಮೆರಿಕನ್ ಆಳುವವರನ್ನು ಮತ್ತು ಸಾಮ್ರಾಜ್ಯಶಾಹಿಯನ್ನು ರಾಜಕೀಯವಾಗಿ - ಮಿಲಿಟರಿಯಾಗಿ-ಸೈದ್ಧಾಂತಿಕವಾಗಿ ಗಟ್ಟಿಗೊಳಿಸಿದೆ ಎಂಬುದು ಈಗ ನಿರ್ವಿವಾದಿತ. ಜನತೆಯ ಹೋರಾಟಕ್ಕೆ ಎಲ್ಲೆಡೆ ಇದರಿಂದ ಹಾನಿಯಾಗಿದೆ. ಭಾರತದಲ್ಲಿ ನಕ್ಸಲೈಟರ, ನೇಪಾಳದಲ್ಲಿ ಮಾವೋವಾದಿಗಳ 'ಭಯೋತ್ಪಾದನೆ' ಸಹ ಇದೇ ರೀತಿ ಆಳುವವರ್ಗಗಳನ್ನು ಬಲಪಡಿಸಿದೆ. ಆಳುವವರ್ಗ, ಸರ್ಕಾರದ ಭಯೋತ್ಪಾದನೆಯನ್ನು, ಹಿಂಸಾಚಾರವನ್ನು ಜನರ ವ್ಯಾಪಕ ಸಂಘಟನೆ, ಪ್ರತಿರೋಧದಿಂದ ಮಾತ್ರ ಎದುರಿಸಲು ಸಾಧ್ಯ. 'ವೈಯಕ್ತಿಕ' 'ಗುಂಪು' ಭಯೋತ್ಪಾದನೆ ಮಾರಕ ಎಂಬುದು ಪ್ರಗತಿಪರ - ಕ್ರಾಂತಿಕಾರಿ ಚಳುವಳಿಯ ಅನುಭವ. ಸಾಮ್ರಾಜ್ಯಶಾಹಿ ಜಾಗತೀಕರಣದ ವಿರುದ್ಧ ಚಳುವಳಿಯಲ್ಲಿ ಹಲವುಬಾರಿ 'ಅರಾಜಕತಾವಾದಿ'ಗಳ ಅನಗತ್ಯ ಅರ್ಥಹೀನ ಹಿಂಸಾಚಾರ ಚಳುವಳಿಯನ್ನು ದುರ್ಬಲಗೊಳಿಸಿದೆ. ಸಮಸ್ಯೆ ಇದಕ್ಕೆ ಪರಿಹಾರ, ಆಳುವವರ್ಗಕ್ಕೆ ಬದಲಿ ಆಧಾರದ ಮೇಲೆ ಜನಾಂದೋಲನ ಸಂಘಟನೆ, ರಾಜಕೀಯ ತಿಳಿವು, ಎತ್ತರಿಸುವ ಸತತ ರಾಜಕೀಯ ಚಟುವಟಿಕೆಯೊಂದೇ ಸಾಮ್ರಾಜ್ಯಶಾಹಿ-ಆಳುವವರ್ಗಗಳನ್ನು ಹಿಮ್ಮೆಟ್ಟಿಸಬಲ್ಲದು. ಈ ಚಳುವಳಿ ನಿರ್ಣಾಯಕ ಘಟ್ಟಗಳನ್ನು ತಲುಪಿದಾಗ 'ಪ್ರಭುತ್ವದ ಅಸ್ತ್ರ'ಗಳನ್ನು ನಿರ್ನಾಮ ಮಾಡಲು, ವಶಪಡಿಸಿಕೊಳ್ಳಲು ಹಿಂಸೆ ಅಗತ್ಯವಾಗಬಹುದು. ಆದರೆ ಅದೂ ಜನತೆಯ ವ್ಯಾಪಕ ಬೆಂಬಲದ ಆಧಾರದ ಮೇಲೆ ಇರಬೇಕು. ಮತ್ತು ಆಳುವವರ್ಗದ ಪ್ರಭುತ್ವದ ವಿಭಾಗಗಳ ಮೇಲೆ ಕೇಂದ್ರೀಕೃತವಾಗಿರಬೇಕಾಗುತ್ತದೆ.

ಜನರನ್ನು ಧಾರ್ಮಿಕ/ಜನಾಂಗೀಯ/ ಬುಡಕಟ್ಟು ಆಧಾರದ ಮೇಲೆ ಒಡೆಯುವ, 'ಯಾದವೀ ಕಲಹ'ದಲ್ಲಿ ಹಚ್ಚುವ ಭಯೋತ್ಪಾದಕ ಗುಂಪುಗಳ ವಿರುದ್ಧ ಎಚ್ಚರ, ಹೋರಾಟ ಅಷ್ಟೇ ಅಗತ್ಯ. ಆ ಗುಂಪುಗಳು ಸಾಮ್ರಾಜ್ಯಶಾಹಿ ಮತ್ತು ಆಳುವ ವರ್ಗಗಳ ವಿರುದ್ಧ ಎಷ್ಟೇ 'ನಿಜ'ವಾಗಿದ್ದರೂ ಅವುಗಳ ವಿರುದ್ಧ ಹೋರಾಡುವುದು ಅಗತ್ಯ.

ಅದೇ ಸಮಯದಲ್ಲಿ 'ಭಯೋತ್ಪಾದನೆ' ಸಮಸ್ಯೆಯ ಪರಿಹಾರದ ಹೆಸರಲ್ಲಿ ಸಾಮ್ರಾಜ್ಯಶಾಹಿ ಸೈದ್ಧಾಂತಿಕ ದಾಳಿಯನ್ನು ಎದುರಿಸಬೇಕು. ಎಲ್ಲಾ 'ಭಯೋತ್ಪಾದನೆ' ಹಿಂದೆ ಒಂದು ತೀವ್ರ ರಾಜಕೀಯ - ಆರ್ಥಿಕ ಸಮಸ್ಯೆ, ಇಲ್ಲವೇ ಸರ್ಕಾರಿ ಭಯೋತ್ಪಾದನೆ ಇರುತ್ತದೆ. ಎಲ್ಲಾ 'ಭಯೋತ್ಪಾದನೆ'ಯ ಹಿಂದೆ ಅಥವಾ ಕಾರಣವಾಗಿ ಸಾಮ್ರಾಜ್ಯಶಾಹಿ ಸರ್ವಾಂತರ್ಯಾಮಿಯಾಗಿ ಇದೆ ಎಂಬುದು ಸರ್ವವಿದಿತ. ರಾಜಕೀಯ - ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸದೆ, ಜನತೆಗೆ ವ್ಯಾಪಕ ರಾಜಕೀಯ-ಆರ್ಥಿಕ ಹಕ್ಕು, ತಮ್ಮ ಭವಿಷ್ಯ ನಿರ್ಧರಿಸುವ ಶಕ್ತಿ ಕೊಡದೆ ಮಿಲಿಟರಿ ಬಲದಿಂದ, ಅಥವಾ POTA(ಪೋಟಾ) ನಂತಹ ಕಾನೂನಿನಿಂದ ಸಮಸ್ಯೆ ಬಗೆಹರಿಸಲು ಸಾಧ್ಯವಿಲ್ಲ ಎಂದು ಆಳುವವರಿಗೆ ಮನದಟ್ಟು ಮಾಡಿಕೊಡಬೇಕು. ತೀವ್ರ ಸಮಸ್ಯೆಯ ಹಿನ್ನೆಲೆಯಲ್ಲಿ ಹುಟ್ಟಿದ ಭಯೋತ್ಪಾದಕ ಗುಂಪುಗಳು, ಸ್ವಾತಂತ್ರ್ಯ-ಸಮಾನತೆಯ ಹೋರಾಟಗಾರರು, 'ಪ್ರಾಕ್ಸಿ ಯುದ್ಧ'ದಲ್ಲಿ ತೊಡಗಿರುವ ಬಾಡಿಗೆ ಸೈನಿಕರು - ಇವರನ್ನೆಲ್ಲಾ ಒಂದೇ ತಕಡಿಯಲ್ಲಿ ತೂಗುವ ಪ್ರಚಾರದ ಬಗ್ಗೆ ಎಚ್ಚರಬೇಕು. ಇವರನ್ನು ಗುರುತಿಸಿ ಪ್ರತ್ಯೇಕಿಸುವ ಚಾಣಾಕ್ಷತೆ ಬೇಕು. ಸರ್ಕಾರಗಳಿಗೂ, ಜನತಾ ಸಂಘಟನೆಗಳಿಗೂ ಆಗ ಮಾತ್ರ ಈಗ ಧುತ್ತೆಂದು 'ಸಮಸ್ಯೆ ನಂ. 1' ನಂತೆ ಆಗಿರುವ ಭಯೋತ್ಪಾದನೆಗೆ ಪರಿಹಾರ ಸಾಧ್ಯ.


ನಕ್ಸಲೈಟರು

..... ಕ್ರಾಂತಿಕಾರಿ ಮೇ ದಿನಾಚರಣೆ


ಪುಟ 7 ರಿಂದ

ನಮ್ಮ ರಾಜ್ಯದಲ್ಲಿಯೂ ಸಹಾ ತಾರನಹಳ್ಳಿ ರಾಮಸ್ವಾಮಿ ವರದಿ, ಇದೇ ಶಿಫಾರಸ್ಸನ್ನು ಮಾಡಿದೆ. ಸರ್ಕಾರ ಅದರ ಜಾರಿಗೆ ಮುಂದಾಗಿದೆ. ಇದರ ಜೊತೆಗೆ ಹಲವಾರು ವರ್ಷಗಳ ತ್ಯಾಗ ಬಲಿದಾನದ ಹೋರಾಟದಿಂದ ಪಡೆದ ಸೌಲಭ್ಯಗಳನ್ನು ಕಸಿಯಲು ಪ್ರಯತ್ನಗಳು ನಡೆಯುತ್ತಿವೆ. ಕೇಂದ್ರ ಸರ್ಕಾರ ಬಂಡವಾಳಗಾರರ ಮಾಲೀಕರ ಪರವಾಗಿ ಕಾರ್ಮಿಕ ಕಾಯ್ದೆಗಳನ್ನು ತಿರುಚಲು ಪ್ರಯತ್ನಿಸುತ್ತಿದೆ.

ಜಾಗತೀಕರಣ ವಿರುದ್ಧ ಜಿಮ್ಮಿದ ಹೋರಾಟಗಳು

ಒಂದೆಡೆ ಬಹುರಾಷ್ಟ್ರೀಯ ಸಂಸ್ಥೆಗಳ ಬಂಡವಾಳಗಾರರ ದಾಳಿ ದುಡಿಯುವ ವರ್ಗದ ರೈತರ ಮೇಲೆ ನಡೆಯುತ್ತಿರುವಾಗಲೇ ಇನ್ನೊಂದೆಡೆ ಪ್ರತಿಭಟನೆಗಳು ನಡೆಯುತ್ತಿವೆ. ಅಮೇರಿಕಾದ ಸಿಯಾಟಲ್‌ನಲ್ಲಿ ಆರಂಭವಾದ ನವ ಜಾಗತೀಕರಣದ ವಿರುದ್ಧದ ಹೋರಾಟ ಜಗತ್ತಿನಾದ್ಯಂತ ಹರಡಿವೆ. ಇಟಾಲಿಯಾ ಜಿನಿವೋದಲ್ಲಿ 3 ಲಕ್ಷ ಜನ ಪ್ರತಿಭಟನೆ ನಡೆಸಿ ಒಬ್ಬ ಪ್ರತಿಭಟನಾಕಾರ ಹುತಾತ್ಮನಾಗಿದ್ದಾನೆ. ಮೊದಲ ಭಾರಿಗೆ ಜಗತ್ತಿನಾದ್ಯಂತ WTO ತೀರ್ಮಾನದ ವಿರುದ್ಧ ಪ್ರತಿಭಟನೆ ನಡೆದಿದೆ. ನಮ್ಮ ದೇಶದಲ್ಲೂ ಸಹಾ ಎಲ್ಲಾ ಸಂಘ ಸಂಸ್ಥೆಗಳು ಈ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದವು. ನಮ್ಮ ದೇಶದಲ್ಲೂ ಸಹಾ ರೈತ ಕೃಷಿ ಕಾರ್ಮಿಕ, ಮಹಿಳೆ, ವಿದ್ಯಾರ್ಥಿ, ಕಾರ್ಮಿಕ ಸಂಘಟನೆಗಳು, ಯುವಕರು ಎನ್.ಪಿ.ಎಂ.ಓ. ಅಡಿಯಲ್ಲಿ ಕೇಂದ್ರ ಸರ್ಕಾರದ ದಿವಾಳಿಕೋರ ನೀತಿಯ ವಿರುದ್ಧ ಪ್ರತಿಭಟನೆ ನಡೆಸಿವೆ. ಮಾರ್ಚ್ 14 ರಂದು INTUC ಹೊರತಾಗಿ ಮಿಕ್ಕೆಲ್ಲಾ ಕಾರ್ಮಿಕ ಸಂಘಟನೆಗಳ ಬಿಎಂಎಸ್ ಒಳಗೊಂಡು ದೇಶವ್ಯಾಪಿ ಪ್ರತಿಭಟನಾ ದಿನಾಚರಣೆ ಆಚರಿಸಿವೆ. ಏಪ್ರಿಲ್ 16 ರಂದು ಸಾರ್ವಜನಿಕ ರಂಗದ ಕಾರ್ಮಿಕರು, ಬಂದರು ಕಾರ್ಮಿಕರು, ಔಷಧಿ ಮಾರಾಟಮಾಡುವ ನೌಕರರು, ಸರ್ಕಾರಿ ನೌಕರರು, ಬ್ಯಾಂಕ್ ವಿಮಾ ನೌಕರರು ಹಿಂದೆಂದೂ ಕಾಣದ ಐಕ್ಯತೆ ಪ್ರದರ್ಶಿಸಿ ಮುಷ್ಕರ ನಡೆಸಿದ್ದಾರೆ. ಈ ಮುಷ್ಕರಕ್ಕೆ ಸಿಐಟಿಯು ಬೆಂಬಲ ನೀಡಿತ್ತು. ಪ್ರಶ್ಚಿಮ ಬಂಗಾಳದಲ್ಲಿ ಕೈಗಾರಿಕಾ ಬಂದ್ ನಡೆದಿದೆ. ಕೇರಳ ಸರ್ಕಾರ ಸರ್ಕಾರಿ ನೌಕರರ ಕಡಿತ ವಿರೋಧಿಸಿ, 6 ಲಕ್ಷ ನೌಕರರು ಒಂದು ತಿಂಗಳಿಗೂ ಹೆಚ್ಚುಕಾಲ ಮುಷ್ಕರವನ್ನು ESMA ವನ್ನು ಧಿಕ್ಕರಿಸಿ ನಡೆಸಿದ್ದಾರೆ. ಆಂಧ್ರ, ತಮಿಳುನಾಡು ಸಾರಿಗೆ ನೌಕರರು ಮುಷ್ಕರ ನಡೆಸಿದ್ದಾರೆ. ಅಂಗನವಾಡಿ ನೌಕರರು, ಕೈಮಗ್ಗ ನೌಕರರು ಇತ್ಯಾದಿ ಸಹಾ ಹೋರಾಟದ ಹಾದಿ ಹಿಡಿದಿದ್ದಾರೆ. ಸಿಐಟಿಯು ಜನರಲ್ ಕೌನ್ಸಿಲ್ ಸಿಲಿಗುರಿಯಲ್ಲಿ ನಡೆದು ಕಲ್ಲಿದ್ದಲು ಗಣಿಯನ್ನು ಖಾಸಗೀಕರಣ ಮಾಡುವುದರ ವಿರುದ್ಧ 6 ಲಕ್ಷ ಕಲ್ಲಿದ್ದಲು ಕಾರ್ಮಿಕರ ಹೋರಾಟವನ್ನು ಬೆಂಬಲಿಸಲು ತೀರ್ಮಾನಿಸಿದೆ.

1948ರಲ್ಲೇ 8 ಗಂಟೆ ದುಡಿಮೆ ಕಾನೂನು ಬಂದಿದ್ದರೂ ಸಹಾ, ಬೆಂಗಳೂರು ನಗರದ ಪವರ್‌ಲೂ ಕಾರ್ಮಿಕರಿಗೆ, ಪೆಟ್ರೋಲ್ ಪಂಪ್‌ಗಳಲ್ಲಿ ದುಡಿಯುವವರಿಗೆ, ರೈಸ್ ಮಿಲ್ ಕಾರ್ಮಿಕರಿಗೆ ಇದು ಇಂದಿಗೂ ಸಹಾ ಜಾರಿಯಾಗಿಲ್ಲ. ಸರ್ಕಾರ ನಿಗದಿ ಪಡಿಸಿದ ಕನಿಷ್ಠ ಕೂಲಿ ಸಾಹ ಜಾರಿಯಾಗುತ್ತಿಲ್ಲ. ಅಸಂಘಟಿತ ಕೃಷಿ ಕಾರ್ಮಿಕರಿಗೆ ಸಮಗ್ರ ಕಾನೂನಿನ ರಕ್ಷಣೆ ಇಲ್ಲ. ಕೇಂದ್ರ ಸರ್ಕಾರಕ್ಕೆ ನೇಮಕವಾಗುವ ನೌಕರರಿಗೆ ಇನ್ನೂ ಮುಂದೆ ಪಿಂಚಣಿ ಸೌಲಭ್ಯವಿಲ್ಲ. ದುಡಿಯುವ ವರ್ಗದ ರೈತಾಪಿ ಜನತೆಯ ವಿರುದ್ಧ ನಡೆಯುತ್ತಿರುವ ದಾಳಿಗೆ ಪ್ರತಿಭಟನೆ ನಡೆದಿದ್ದರೂ, ಸಾಕಷ್ಟು ಬಲಿಷ್ಠವಾಗಿಲ್ಲ. ಈ ನೀತಿಗಳು ಹೋಗಬೇಕಾದರೆ, ದುಡಿಯುವ ವರ್ಗದ ನೇತೃತ್ವದಲ್ಲಿ ದೇಶಾದ್ಯಂತ ಐಕ್ಯ ಹೋರಾಟ ಬೆಳೆದು ಬರಬೇಕು. ಮೇ ದಿನದಂದು ರಾಜ್ಯದ ದುಡಿಯುವ ವರ್ಗದ ಐಕ್ಯತೆ, ಕೃಷಿ ಕಾರ್ಮಿಕರ ಹಾಗೂ ರೈತರ ಸಖ್ಯತೆ ಬೆಳೆಸಲು ಪಣತೊಡಬೇಕಿದೆ, ಇದರ ಜೊತೆಗೆ ಸಾಮ್ರಾಜ್ಯಶಾಹಿ ವಿರೋಧಿ ಜನಜಾಗೃತಿ ಬೆಳೆಸಬೇಕು. ಕೋಮು ವಿಷ ಬೀಜ ಬಿತ್ತುವುದರ ವಿರುದ್ಧ ಹೋರಾಡಬೇಕು, ಈ ನಿಟ್ಟಿನಲ್ಲಿ ನಾವು ಮುಂದಾಗೋಣ ಮೇ ದಿನ ಚಿರಾಯುವಾಗಲಿ, ಅಂತರ ರಾಷ್ಟ್ರೀಯ ಕಾರ್ಮಿಕ ದಿನಾಚರಣೆ ಚಿರಾಯುವಾಗಲಿ.



.....ಕ್ರಾಂತಿಕಾರಿ ಪರಂಪರೆ

ಪುಟ 7 ರಿಂದ

ಗಲ್ಲಿಗೇರಿಸಿದ ಇತರ ನಾಯಕರೊಂದಿಗೆ, ಅವರೆಲ್ಲ ಪಕ್ಷಪಾತಿಯಾದ ನ್ಯಾಯಾಧೀಶರ ತೀರ್ಪಿಗೆ ಬಲಿಪಶುಗಳಾದರೆಂಬುದನ್ನು ಇಲಿನಾಯಿಸ್‌ನ ಗವರ್ನರ್ ಒಪ್ಪಿಕೊಂಡ. ಮುಖ್ಯ ಸಾಕ್ಷಿಗಳಿಗೆ ಲಂಚ ಕೊಡಲಾಗಿತ್ತು. ಅಮೇರಿಕದ ಬಂಡವಾಳಶಾಹಿ ನ್ಯಾಯಬದ್ಧತಿಯ ನಿಜವಾದ ಬಣ್ಣ ಜಗತ್ತಿನ ಮುಂದೆ ಬಟ್ಟ ಬಯಲಾಗಿತ್ತು.

ಅಮೆರಿಕಾದ ಕಾರ್ಮಿಕರ ಬಲಿದಾನ ವ್ಯರ್ಥವಾಗಲಿಲ್ಲ. ಯುರೋಪ್‌ನಲ್ಲಿ ಬೆಳೆದುಬರುತಿದ್ದ ಕಾರ್ಮಿಕ ವರ್ಗದ ಚಳುವಳಿ ಇವರಿಗೆ ನೆರವಾಗಲು ನಿರ್ಧರಿಸಿತು. 1889 ರಲ್ಲಿ ಸೋಷಲಿಸ್ಟ್ ಅಂತರ್ರಾಷ್ಟ್ರೀಯ ಮೊದಲನೆ ಪ್ಯಾರಿಸ್ ಅಧಿವೇಶನ ಮೇ ದಿನಾಚರಣೆಯನ್ನು ಅಂತರ್ರಾಷ್ಟ್ರೀಯಗೊಳಿಸಲು ತೀರ್ಮಾನಿಸಿತು.

ಪ್ರಥಮ ಅಧಿವೇಶನದಲ್ಲಿ ಸೇರಿದ ಪಕ್ಷಗಳು ಮತ್ತು ನಾಯಕರೆಲ್ಲರೂ ಬಹುವಾಗಿ ಮಾರ್ಕ್ಸ್‌ವಾದಿ ಬೋಧನೆಗಳಿಂದ ಪ್ರಭಾವಿತರಾಗಿದ್ದರು. ಮತ್ತ ಮೇ ದಿನಾಚರಣೆಯನ್ನು ಅಂತರ್ರಾಷ್ಟ್ರೀಯ ಗೊಳಿಸುವ ಬಗ್ಗೆ ತೀರ್ಮಾನಿಸುವಾಗ ಅವರು ಅಂದಿನ ಪರಿಸ್ಥಿತಿಗೆ ಮಾರ್ಕ್ಸ್‌ವಾದಿ ತಿಳುವಳಿಕೆಯನ್ನು ಉಪಯೋಗಿಸಿದರು. ಆದುದರಿಂದ ಅವರು ಬರೇ ತುರ್ತಿನ ಆರ್ಥಿಕ ಬೇಡಿಕೆಗಳನ್ನು ಮಂಡಿಸುವುದರಲ್ಲಿ ಮಾತ್ರ ತೃಪ್ತರಾಗಲಿಲ್ಲ. ಬದಲು ಆಂಶಿಕ ಬೇಡಿಕೆಗಳ ಹೋರಾಟದೊಡನೆ ಯುದ್ಧಕ್ಕೆ ವಿರೋಧಿಯಾದ, ಬಂಡವಾಳಶಾಹಿಯನ್ನು ಕೊನೆಗೊಳಿಸುವ, ಹೋರಾಟದೊಡನೆ ಸಂಯೋಜಿಸಿದರು.

ಗುಜರಾತಿನಲ್ಲಿ ನಡೆದದ್ದು......

ಪುಟ 3 ರಿಂದ

ಹಲವು ವಾರಗಳ ನಂತರ ಗುಜರಾತಿಗೆ ಭೇಟಿ ಕೊಟ್ಟ ಪ್ರಧಾನಿ ಒಂದೆಡೆ ಎಡಭಾಗದಲ್ಲಿ ಭಾಷಣ ಮಾಡುತ್ತಿದ್ದರೆ ಅಲ್ಲೇ ಪಕ್ಕದಲ್ಲಿ ಬಲಭಾಗದಲ್ಲಿ ಹಲ್ಲೆ, ಕೊಲೆ, ಲೂಟಿ, ದೊಂಬಿ ನಡೆದೇ ಇದ್ದವು. ಅವು ಇನ್ನೂ ನಿಂತಿಲ್ಲ.

ಇನ್ನೂ ತಪ್ಪಿತಸ್ಥರನ್ನು ಗುರುತಿಸಲಾಗಿಲ್ಲ

ದೇಶದಲ್ಲಿ ಎಷ್ಟೊಂದು ತನಿಖಾ ಸಂಸ್ಥೆಗಳಿವೆ, ಎಷ್ಟೆಲ್ಲಾ ವ್ಯವಸ್ಥೆಗಳಿವೆ. ಇದುವರೆಗೂ ಈ ಹತ್ಯಾಕಾಂಡದ ಬಗೆಗೆ ಯಾವ ಸಮರ್ಪಕ ತನಿಖೆಗೂ ತೀರ್ಮಾನವಾಗಿಲ್ಲ - ಗುಜರಾತ್ ಸರ್ಕಾರ ಮುಖ್ಯಮಂತ್ರಿ ನರೇಂದ್ರಮೋದಿ 'ಗೋದ್ರಾ' ಘಟನೆಯ ಬಗೆಗೆ ಮಾತ್ರ ತನಿಖೆ ಮಾಡಲಾಗುವುದು ಎಂದಿದ್ದಾರೆ. ಎಲ್ಲಾ ಕ್ರಿಯೆಗೂ, ಪ್ರತಿಕ್ರಿಯೆ ಇದ್ದೇ ಇದೆ ಎಂದು ಅವರು 'ಗೋದ್ರಾ' ನಂತರದ ಹತ್ಯಾಕಾಂಡವನ್ನು ಸಮರ್ಥಿಸಿ ಕೊಳ್ಳುತ್ತಿದ್ದಾರೆ. ನೈಸರ್ಗಿಕ ವಿಜ್ಞಾನದ ಈ ನಿಯಮವನ್ನು ನರಮೇಧಗಳನ್ನು ಸಮರ್ಥಿಸಲು ಬಳಸಬಾರದು - ಈ ಬಗೆಗೆ ಸಮರ್ಪಕವಾದ ತನಿಖೆಯಾಗಬೇಕು - ಒಬ್ಬ ನ್ಯಾಯಾಧೀಶರಿಂದ ಇಂತಹ ತನಿಖೆ ಕಷ್ಟ. ಈ ಹಿಂಸಾಚಾರ ಎಷ್ಟು ವ್ಯಾಪಕ ಎಂದರೆ ಹಲವು ಹಂತಗಳಲ್ಲಿ ವ್ಯಾಪಕ ತನಿಖೆ ಮಾಡಬೇಕು - ಏಕೆಂದರೆ ಇದು ಜನರ ಭಾವೋದ್ವೇಗದ ಪ್ರತಿಕ್ರಿಯೆ ಅಲ್ಲ, ಅತ್ಯಂತ ವ್ಯವಸ್ಥಿತವಾದ ಸಂಚು.

ಇಷ್ಟೆಲ್ಲಾ ಜೊತೆಗೆ ಮಾಜಿ ಪೋಲಿಸ್ ಮಹಾನಿರ್ದೇಶಕರು ಕೊನೆಯದಾಗಿ ತಮ್ಮ ವೃತ್ತಿಜೀವನದ ಅನುಭವವನ್ನೂ ಹೇಳಿದರು. ಉತ್ತರಖಂಡ ಚಳುವಳಿ ನಿರತ ಮಹಿಳೆಯರ ಮೇಲೆ ಇಂತಹುದೇ ರೀತಿಯಲ್ಲಿ ಪೋಲೀಸ್ ದೌರ್ಜನ್ಯ ನಡೆದಾಗ ಅಂದಿನ ಯು.ಪಿ. ಮುಖ್ಯಮಂತ್ರಿ ಮುಲಾಯಂಸಿಂಗ್ ಯಾದವ್ ದೃಢವಾದ ನಿಲುವು ತಳೆದು ಸಿಬಿಐ ತನಿಖೆ ನಡೆಸಿದರು. ಈಗ ಅಪರಾಧಿ ಪೋಲೀಸರಿಗೆ ಶಿಕ್ಷೆಯಾಗಿದೆ. ಇಂತಹ ದೃಢವಾದ ನಿಲುವು ಈಗ ಅಗತ್ಯ ಎಂದರು.

ನಿವೃತ್ತ ನ್ಯಾಯಮೂರ್ತಿ ಹೆಚ್.ಜಿ.ಬಾಲಕೃಷ್ಣರವರು ಇದೇ ಸಭೆಯಲ್ಲಿ ಮಾತನಾಡಿದರು. ಗುಜರಾತ್ ರಾಜ್ಯದಲ್ಲಿ ಸಂವಿಧಾನದ ಆಡಳಿತವನ್ನು ಬುಡಮೇಲು ಮಾಡಲಾಗಿದೆ. ಅಲ್ಲಿ ಕಾನೂನಿನ ಆಡಳಿತ ಇದೆಯೇ? ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದು ಅತ್ಯಂತ ಅಪಾಯಕಾರಿ ಸನ್ನಿವೇಶ ಗುಜರಾತಿನಲ್ಲಿ ಪ್ರಜಾಪ್ರಭುತ್ವ ಸತ್ತಿದೆ. ಈ ಗಂಭೀರ ಸನ್ನಿವೇಶದಲ್ಲಿ ಈ ಹಿಂದೆ ಹಲವು ಸಂದರ್ಭಗಳಲ್ಲಿ ನಡೆದಿರುವಂತೆ ಸರ್ವೋಚ್ಚ ನ್ಯಾಯಾಲಯ ಮಧ್ಯ ಪ್ರವೇಶಿಸಬೇಕು. ರಾಷ್ಟ್ರಪತಿಗಳು ರಾಷ್ಟ್ರದ ಜಾತ್ಯಾತೀತ ಸಂವಿಧಾನದ ರಕ್ಷಣೆಗಾಗಿ ಸಹ ಮಧ್ಯಪ್ರವೇಶಿಸಬೇಕು. ಆರೆಸ್ಸೆಸ್ ಪ್ರಚಾರಕ ನರೇಂದ್ರ ಮೋದಿಯನ್ನು ವಿಚಾರಣೆಗೆ ಗುರಿಪಡಿಸಬೇಕು ಎಂದು ಪ್ರತಿಪಾದಿಸಿದರು.

ಕೀಳರಿಮೆಯಿಂದ ದ್ವೇಷ ಹುಟ್ಟುತ್ತದೆ

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪ್ರೊ. ಜಿ.ಕೆ.ಗೋವಿಂದರಾವ್‌ರವರು ಮಾತನಾಡಿ, ನಮ್ಮ ಧರ್ಮದ ಬಗೆಗೆ ನಮಗಿರುವ ಕೀಳರಿಮೆ, ಸಂಶಯಗಳಿಂದಾಗಿ ಅನ್ಯ ಧರ್ಮದ ಬಗೆಗೆ ದ್ವೇಷ, ಅದನ್ನು ನಾಶ ಮಾಡಬೇಕೆಂಬ ಭಾವನೆ ಬರುತ್ತದೆ. ಇನ್ನೊಂದು ಧರ್ಮವನ್ನು ನಾಶ ಮಾಡುವುದರಿಂದ ತನ್ನ ಧರ್ಮವನ್ನು ಉಳಿಸಿಕೊಳ್ಳಬೇಕೆಂಬ ವಿಕೃತ ಚಿಂತನೆ ಬರುತ್ತದೆ ಎಂದರು.. ಯಾವ ಧರ್ಮವೂ ಹಿಂಸಾಚಾರವನ್ನು ಪ್ರತಿಪಾದಿಸಿಲ್ಲ. ಆದರೆ ಎಲ್ಲಾ ಧರ್ಮವೂ ಹಿಂಸೆಯನ್ನು ಆಚರಿಸುತ್ತವೆ ಎಂದ ಅವರು ಹಿಂದೂಗಳು ಮುಸ್ಲಿಂ ಎಲ್ಲರೂ ತಮ್ಮದೇ ಆದ ಚಿಪ್ಪಿನೊಳಗೆ ಸೇರಿಕೊಳ್ಳುವ ಬದಲಿಗೆ ಚಿಪ್ಪನ್ನು ಒಡೆದು ಹೊರಬರಬೇಕೆಂದರು.

ಇದು ಬರಿಯ ಮಾತನಾಡುವ ಕಾಲವಲ್ಲ ನಾವೆಲ್ಲಾ ಸೇರಿ ಕೋಮುದ್ವೇಷದ ಜ್ವಾಲೆ ನಮ್ಮ ಮನೆಯ ಬಾಗಿಲನ್ನು ತಟ್ಟುವ ಮುಂಚೆ ಈ ಅಪಾಯದ ಬಗೆಗೆ ಜನಕ್ಕೆ ವಿವರಿಸೋಣ ಎಂದರು.

ವಾಜಪೇಯಿ ಅಡ್ವಾಣಿಗಿಂತ ಅಪಾಯಕಾರಿ.

ವಾಜಪೇಯಿ ಅಡ್ವಾಣಿಗಿಂತ ಅಪಾಯಕಾರಿ. ಏಕೆಂದರೆ ಅಡ್ವಾಣಿಯದ್ದು ಒಂದು ಮುಖ 'ಮಂದಿರವಲ್ಲೇ ಕಟ್ಟುವೆವು' ಎನ್ನುವುದು. ಆದರೆ ವಾಜಪೇಯಿಯವರದ್ದು ಸಂದರ್ಭಕ್ಕೆ ತಕ್ಕಂತೆ ನಟನೆ. ಗುಜರಾತ್ ಕೋಮು ದಳ್ಳುರಿಯ ನಂತರ ಪ್ರಧಾನಿ ವಾಜಪೇಯಿಯ ಎಲ್ಲಾ ಮುಖವಾಡಗಳೂ ಕಳಚಿಬಿದ್ದಿವೆ. ನರೇಂದ್ರಮೋದಿ ಈ ದೇಶದ ಕಪ್ಪ ಚುಕ್ಕೆಯಾದರೆ ವಾಜಪೇಯಿ ಅದಕ್ಕಿಂತ ದೊಡ್ಡ ಕಪ್ಪ ಚುಕ್ಕೆ. ವಾಜಪೇಯಿ ಒಬ್ಬ ನಟ. ಆದರೆ ಅತ್ಯಂತ ಕೆಟ್ಟ ನಟ. ವಾಜಪೇಯಿ ಅಜಾತಶತ್ರುವಂತೆ. ಆದರೆ ಒಂದು ಮೌಲ್ಯಕ್ಕೆ ಬದ್ಧರಾದವಾರಾರು ಅಜಾತಶತ್ರುಗಳಾಗಲು ಸಾಧ್ಯವಿಲ್ಲ ಎಂದರು.

ಮನುಶಾಸ್ತ್ರವನ್ನು ಹೇರುವ ಪಿತೂರಿ

ಹಿಂಬಾಗಿಲಿನಿಂದ ಮನುಧರ್ಮಶಾಸ್ತ್ರವನ್ನು ದೇಶದ ಮೇಲೆ ಹೇರುತ್ತಿರುವ ಬಿಜೆಪಿ-ಆರೆಸ್ಸೆಸ್‌ನ ಮೊದಲ ಗುರಿ ಅಲ್ಪಸಂಖ್ಯಾತರು, ನಂತರ ದಲಿತರು ನಂತರ ಮಹಿಳೆಯರು. ಬಿನ್‌ಲಾಡೆನ್‌ನ್ನು 'ಆದರ್ಶ' ಮಾಡಿಕೊಂಡಿರುವ ಈ ಶಕ್ತಿಗಳು ಈ ದೇಶದ ಪ್ರಜಾಪ್ರಭುತ್ವ ವೈವಿಧ್ಯಮಯ ಜೀವನ ಎಲ್ಲವನ್ನೂ ನಾಶ ಮಾಡುತ್ತಿದ್ದಾರೆ. ಸಾವಿರ ಕೋಟಿ ಹಣ ವೆಚ್ಚವಾದರೂ ಪರವಾಗಿಲ್ಲ ಈ ಸರ್ಕಾರ ತೊಲಗಬೇಕು. ಚುನಾವಣೆ ನಡೆದು ಈ ಮತಾಂಧರನ್ನು ಮೂಲೆಗುಂಪು ಮಾಡಬೇಕು. ಏಕೆಂದರೆ ಸಾವಿರ ಕೋಟಿಗಿಂತ (ಸಾವಿರ ಕೋಟಿ ಮೌಲ್ಯದ) ಜನರ ಪ್ರಾಣ-ಜೀವನ ಮುಖ್ಯ ಎಂದು ಅವರು ಪ್ರತಿಪಾದಿಸಿದರು.

ಪ್ರಕೃತಿಯ ಸೊಬಗು-ವೈವಿಧ್ಯತೆಯನ್ನು ಹಾಗೂ ಎಂತಹ ಹಿಂಸೆ, ರಕ್ತಪಾತ, ತೊಂದರೆಗಳ ನಂತರವೂ ಮಕ್ಕಳ ಮುಗ್ಧತೆ-ಜನರ ಜೀವನೋತ್ಸಾಹವನ್ನು ಗುರುತಿಸಿದ, ಇವುಗಳನ್ನು ಸಮೀಕರಿಸಿದ ಜಿ.ಕೆ.ಗೋವಿಂದರಾವ್‌ರವರು ಭವಿಷ್ಯದ ಸೌಹಾರ್ದ-ಮಾನವೀಯ ಬದುಕಿನ ಕುರಿತು ಆಶಾವಾದ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಆರಂಭದಲ್ಲಿ ಖ್ಯಾತ ನ್ಯಾಯವಾದಿ ಎಚ್.ಎನ್. ನಾಗಮೋಹನದಾಸ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸಮುದಾಯದ ಶಶಿಧರ ಬಾರಿಘಾಟ್ ನಿರೂಪಿಸಿ ವಂದಿಸಿದರು.

ಹೆಚ್.ಎಸ್.ಕೃಷ್ಣಮೂರ್ತಿ,
ಆರ್.ರಾಮಕೃಷ್ಣ

ವಿಶ್ವದ ಬಂಡವಾಳಗಾರರನ್ನು ಬೆನ್ನಟ್ಟಿದ ಪ್ರತಿಭಟನಾಕಾರರು

2001 ರಿಂದ 2002 ಏಪ್ರಿಲ್

(ಇನ್ನಷ್ಟು ಫೋಟೋಗಳು ಪುಟ 12 ರಲ್ಲಿ)



▲ ಮಾರ್ಚ್ 16, 2002 ಬಾರ್ಸಿಲೋನಾ ಯುರೋಪಿಯನ್ ಕೌನ್ಸಿಲ್ ವಿರುದ್ಧ ಪ್ರತಿಭಟನೆ



▲ ಕಾರಕಸ್, ಏಪ್ರಿಲ್ 11 ವೆನಿಜುಲಾದಲ್ಲಿ ಜನತೆಯ ಬಂಡಾಯ



▲ ಸಾರ್ವತ್ರಿಕ ಮುಷ್ಕರ ಏಪ್ರಿಲ್ 16, 2002 ಇಟಲಿಯ ರೋಮ್‌ನಲ್ಲಿ

ಜಾಗತೀಕರಣದ ವಿರುದ್ಧ ಹೋರಾಟದ ಅಲೆಗಳು

ಫೆ. 18.19.2001 ಜಿ-20 ಇಸ್ತಾಂಬುಲ್

ಫೆ. 2001 ಮೆಕ್ಸಿಕೋ - ಮೆಕ್ಸಿಕೋ ಚಲೋ (ಈ ಝುಂಡ್ ಇಸ್ ಕರೆ)

ಮಾರ್ಚ್ 15.17.2001 ಇ.ಸಿ.ಟಿ. ಸಭೆ, ನೇಪಾಳ / ಇಟಲಿ

ಮಾರ್ಚ್ 18-19, 2001 ಸ್ಯಾಂಡಿಯಾಗೋ - ಇಂಟರ್ ಅಮೆರಿಕಾ ಬ್ಯಾಂಕ್ ವಿರುದ್ಧ ಪ್ರದರ್ಶನ

ಮಾರ್ಚ್ 24, 25 - 2001 ಯುರೋಪಿಯನ್ ಸಭೆ - ಪೀಪಲ್ಸ್ ಗ್ಲೋಬಲ್ ಆಕ್ಷನ್ -ಮಿಲಾನ್

ಮಾರ್ಚ್ 27, 28 -2001 ಡಬ್ಲ್ಯುಟಿಒ ವಿರುದ್ಧ ಪ್ರದರ್ಶನ - ಮಾಯಿ/ ಥೈಲಾಂಡ್

ಏಪ್ರಿಲ್ 21, 2001 ಮಲೆಮೋ - ಯುರೋಪಿಯನ್ ಯೂನಿಯನ್ ಪ್ರದರ್ಶನದ ಮೇಲೆ ಪೋಲಿಸ್ ಧಾಳಿ

ಮೇ 9 ರಿಂದ 11, 2001 ಹವಾಯ ಏಷಿಯಾ ಅಭಿವೃದ್ಧಿ ಸಂಸ್ಥೆ

ಜೂನ್ 6-8, 2001 ವಿಶ್ವ ಆರ್ಥಿಕ ಸಭೆ, 'ಫೋರಂ ಡರ್ಬಾನ್

ಜೂನ್ 10, 2001 ಮ್ಯಾಡ್ರಿಡ್, ಜಾರ್ಜ್ ಡಬ್ಲ್ಯು ಬುಷ್ ವಿರುದ್ಧ ಪ್ರತಿಭಟನೆ

ಜೂನ್ 12, 2001 ಫೆ-ಬರ್ಗ್ ಫ್ರೆಂಚ್,ಜರ್ಮನ್ ಶೃಂಗಸಭೆ

ಜೂನ್ 14 -16, 2001 ಗೋಥೆಬರ್ಗ್ / ಸ್ವೀಡನ್, ಯುರೋಪಿಯನ್ ಯೂನಿಯನ್ ಶೃಂಗಸಭೆ

ಜೂನ್ 25-27, 2001 ವಿಶ್ವಬ್ಯಾಂಕ್ ಸಭೆ , ಬಾರ್ಸಿಲೋನಾ, ಸ್ಪೇನ್ ಪ್ರತಿಭಟನೆಯ ಭಾವಚಿತ್ರಗಳು

ಜೂನ್ 30, ಜುಲೈ 2, 2001 ಸಾಲ್‌ಬರ್ಗ್ ಆಸ್ಟ್ರಿಯಾ

ಜುಲೈ 16-27, 2001 ಬಾನ್ ಹವಾಮಾನ ಸಮ್ಮೇಳನ

ಜುಲೈ 20-22, 2002 ಜಿ-8 ಸಭೆ, ಇಟಲಿ, ಜಿನೋವಾ

ಪಿ.ಜಿ.ಯ ಸಭೆ ಜಿನೋವಾ 12, 15

ಜುಲೈ 2 ಬಾರ್ಡರ್ ಕ್ಯಾಂಪ್, ಟಾರಿಫಾ, ಸ್ಪೈ

ಜುಲೈ 4-8 ಬಾರ್ಡರ್ ಕ್ಯಾಂಪ್, ಲೆಂಡಾವ, ಸೋಲ್ವೇನಿಯಾ

ಜುಲೈ 5-12, ಬಾರ್ಡರ್ ಕ್ಯಾಂಪ್ ಕ್ರಿಂಕಿ, ಪೋಲೆಂಡ್/ ಬೈಲೋಸ್ಟಾಕ್/ ಬೆಲಾರಸ್

ಜುಲೈ 27 ಆಗಸ್ಟ್ 5 ಬಾರ್ಡರ್ ಕ್ಯಾಂಪ್, ಫ್ರಾಂಕ್‌ಫರ್ಟ್/ ಜರ್ಮನಿ

ಜುಲೈ/ ಆಗಸ್ಟ್ ಪರಿಸರ ವಾದಿ ಕ್ರಿಯಾತಂಡ - ವಾಟ್‌ಕಿನ್ಸ್/ ಉಡ್ ಮ್ರಿಟ್ರಾ/ ರಶ್ಯಾ

ಸೆಪ್ಟೆಂಬರ್ - ಬೋಫೋ - ಚೈನಾ - ವಿಶ್ವ ಆರ್ಥಿಕ ವೇದಿಕೆ ಪ್ರಾರಂಭ

ಸೆಪ್ಟೆಂಬರ್ 28, 2001 ಕೊಲಂಬಿಯಾ ಜಾಗತೀಕರಣ ವಿರೋಧಿ ಪ್ರದರ್ಶನ

ಸೆಪ್ಟೆಂಬರ್ 28-30 ವಾಷಿಂಗ್ಟನ್‌ನಲ್ಲಿ ವಿಶ್ವಬ್ಯಾಂಕ್ / ಐಎಂಎಫ್ ನ ವಾರ್ಷಿಕ ಸಭೆ -

ಸೆಪ್ಟೆಂಬರ್ 11 ರದಾಳಿಯಿಂದಾಗಿ ರದ್ದು, ಬಂಡವಾಳಶಾಹಿ ವಿರೋಧಿ ಪ್ರದರ್ಶನ

ಅಕ್ಟೋಬರ್ 7-9, 2001 ವಿಶ್ವ ಆರ್ಥಿಕ ವೇದಿಕೆ ಸಭೆ - ಮಿಯಾಮಿ/ ಫ್ಲೋರಿಡಾ

ಅಕ್ಟೋಬರ್ 19, 2001 ಯುರೋಪಿಯನ್ ಯೂನಿಯನ್ ಶೃಂಗಸಭೆ, ಬೆಲ್ಜಿಯಂ ಟಿವಿಬಿಡಿ ರದ್ದಿಗೆ ಒತ್ತಾಯಿಸಿ ಪ್ರದರ್ಶನ, ಸ್ಟಾಕ್‌ಹೋಂ

ಅಕ್ಟೋಬರ್ 29-31, 2001 ವಿಶ್ವ ಆರ್ಥಿಕ ವೇದಿಕೆ ವಾರ್ಷಿಕ ಏಷಿಯನ್ ಫೆಸಿಫಿಕ್ ಶೃಂಗಸಭೆ ಹಾಂಗ್‌ಕಾಂಗ್

ನವೆಂಬರ್ 9-13, 2001 ಕ್ವತಾರ್‌ನಲ್ಲಿ ನಡೆದ ಎರಡನೇ ಡಬ್ಲುಟಿಒ ಸಚಿವಾಲಯದ ಸಭೆ ವಿರುದ್ಧ ಜಾಗತಿಕ ಕಾರ್ಯಕ್ರಮ, ಭಾರತದಲ್ಲೂ ಅಪೂರ್ವ ಯಶಸ್ಸಿ.

ನವೆಂಬರ್ 16-19, 2001 ಪಿಜಿಎ ಯುರೋಪ್ ಸಂಚಾಲಕ ಸಭೆ, ಬಾರ್ಸಿಲೋನ

ನವೆಂಬರ್ 17-18, 2001 ಒಟಾವ/ಕೆನಡಾ ಐಎಂಎಫ್ ವಿಶ್ವಬ್ಯಾಂಕ್ ಸಭೆ

ಡಿಸೆಂಬರ್1 2001 ಇಸ್ರೇಲ್ ವ್ಯಾಪಾರ ಶೃಂಗಸಭೆ

ಬೋವಾಸ್‌ನಲ್ಲಿ-ಪೀಪಲ್ಸ್ ಆಕ್ಷನ್ ಇನಿಷಿಯೇಟಿವ್‌ನಿಂದ ನೇರ ಕಾರ್ಯಾಚರಣೆ

ಡಿಸೆಂಬರ್ 13-15, 2001 ಯುರೋಪಿಯನ್ ಯೂನಿಯನ್ ಶೃಂಗಸಭೆ, ಬ್ರೆಸೆಲ್ಸ್/ ಬೆಲ್ಜಿಯಂ

ಡಿಸೆಂಬರ್ 17-19, 2001 ಪಿಜಿಎ ಯುರೋಪ್ ಸಭೆ

.......184 ಹೇಳುವುದೇನು ?

ಪುಟ 5 ರಿಂದ

ನಿರಾಶ್ರಿತರ ಶಿಬಿರಗಳಲ್ಲಿ ವಾಸಿಸುವಂತೆ, ಮಾಡಿದ ದುಷ್ಟ ಶಕ್ತಿಗಳಿಗೆ, ಅದನ್ನು ತಡೆಯದೆ, ಸಂವಿಧಾನಿಕ ಕರ್ತವ್ಯ ನಿರ್ವಹಿಸದ ಗುಜರಾತಿನ ಬಿಜೆಪಿ ಯ ಮೋದಿ ಸರ್ಕಾರಕ್ಕೆ ವಾಗ್ದಂಡನೆ ವಿದಿಸಲಿದೆ. ಜಾತ್ಯಾತೀತತೆಗೆ ಬದ್ಧವಾಗಿರುವ ಎಲ್ಲಾ ಪಕ್ಷಗಳು (ಎನ್‌ಡಿಎ ಮಿತ್ರಪಕ್ಷಗಳು ಸೇರಿದಂತೆ) ತಮ್ಮ ಬದ್ಧತೆಯನ್ನು ಪಣಕ್ಕಿಡುವ ದಿನ ಈ ನಿಯಮಗಳಡಿ ಚರ್ಚೆಯ ನಂತರ ಮತ ಚಲಾಯಿಸುವ ದಿನ.

ಪ್ರಧಾನಿಗಳೆ ಹೇಳಿದಂತೆ 'ರಾಷ್ಟ್ರ ತಲೆ ತಗ್ಗಿಸುವಂತಾಹ ಘಟನೆ'ಗಳು ರಾಷ್ಟ್ರದ ಪ್ರತಿನಿಧಿಗಳು ತಲೆ ಎತ್ತಿ ವಿದೇಶಗಳಿಗೆ ಹೋಗಲಾರದಂತಹ ಘಟನೆಗಳು ಗುಜರಾತ್‌ನಲ್ಲಿ ನಡೆದಿವೆ.ಎಂದ ಮೇಲೆ ಏಕೆ ಅವರು ನಿಯಮ 184 ರಡಿ ಲೋಕಸಭೆಯಲ್ಲಿ ಹಾಗು ನಿಯಮ 170 ರಡಿ ರಾಜ್ಯಸಭೆಯಲ್ಲಿ ಚರ್ಚಿಸಲು ಹಿಂಜರಿಯುತ್ತಾರೆ. "ಬೇಕಾದರೆ ಅವಿಶ್ವಾಸ ಮತ ತರಲಿ" ಎಂಬ ಸವಾಲನ್ನು ಏಕೆ ಹಾಕುತ್ತಾರೆ. ಉಪ ಸಭಾಪತಿಗಳ ತೀರ್ಪು 'ದುರಾದೃಷ್ಟಕರ' ಎಂದು ಪ್ರಾಥಮಿಕವಾಗಿ ಪ್ರತಿಕ್ರಿಯಿಸಿ, ಕೂಡಲೇ ಏಕೆ ಅದನ್ನು ನಿರಾಕರಿಸುತ್ತಾರೆ, ಎಂಬ ಅಂಶಗಳನ್ನು ಗಮನಿಸಿದರೆ ನಿಯಮ 184 ಮತ್ತು ನಿಯಮ 170 ರ ಶಕ್ತಿ ಎಲ್ಲರಿಗೂ ಅರಿವಾಗುತ್ತದೆ.

ಪ್ರಜಾಸತ್ತಾತ್ಮಕವಾಗಿ ಚುನಾಯಿತ ಸರ್ಕಾರ, ಅದನ್ನು ನಿರ್ವಹಿಸುವಂತೆ ಕೇಂದ್ರ ಸರ್ಕಾರ ಅಂತಹ ಸರ್ಕಾರಗಳಿಗೆ ತಾಕೀತು ಮಾಡದಿದ್ದರೆ ಇಂತಹ'ವಾಗ್ದಂಡನೆ' ಮೂಲಕ ಜನತೆಯ ಅಭಿಪ್ರಾಯ-ಅಭಿಮತ ತಿಳಿಸಲು ಅನುವಾಗುವಂತೆ, ರಾಷ್ಟ್ರಕ್ಕೆ-ಜನತೆಗೆ-ಸಂವಿಧಾನಿಕ ಒಪ್ಪಿತ ಮೌಲ್ಯಗಳಿಗೆ ಬದ್ಧವಾಗಿ ಸರ್ಕಾರ ಕಾರ್ಯನಿರ್ವಹಿಸುವಂತೆ ಮಾಡಲು, ಈ ನಿಯಮ 184 ಹಾಗು 170 ಅನ್ನು ರೂಡಿಸಿಕೊಳ್ಳಲಾಗಿದೆ, ನೂರಾರು ವರ್ಷಗಳ ಸಂಸದೀಯ ಪ್ರಜಾಪ್ರಭುತ್ವದ ಅನುಭವದಿಂದ ಒಂದು ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ, ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಉಳಿಸಿ ಬೆಳೆಸಲು, ಇರುವ ಪ್ರಜಾತಾಂತ್ರಿಕ ರೀತಿ ನೀತಿಗಳು ಇವಾಗಿವೆ. ಸರ್ಕಾರಗಳು ಎಲ್ಲೆಮೀರಿದಾಗ ಅವುಗಳ ಹಳಿ ತಪ್ಪಿದಾಗ, ಮತ್ತೆ ಹಳಿಗೆ ತರಲೆಂದೇ ಇಂತಹ ನಿಯಮಾವಳಿಗಳ ಅಸ್ತ್ರವನ್ನು ವಿರೋಧಪಕ್ಷಗಳಿಗೆ ನೀಡಲಾಗಿದೆ. ರಾಷ್ಟ್ರದ ಎಚ್ಚೆತ್ತ ವಿರೋಧ ಪಕ್ಷಗಳು ತಮ್ಮ ಸಂವಿಧಾನಿಕ ಕರ್ತವ್ಯ ನಿರ್ವಹಿಸುತ್ತಿವೆ, ಸರ್ಕಾರವು ಸಹಾ ತನ್ನ ಹೊಣೆಗಾರಿಕೆಯನ್ನು ಪ್ರದರ್ಶಿಸಲಿ, ಜನತೆಗೆ ಉತ್ತರದಾಯಿಗಳಾದ ಅವರು ಸಂಸತ್ತಿನ ಮೂಲಕ ಉತ್ತರ ನೀಡಲಿ. ನಿಯಮ 184 ಹಾಗು ನಿಯಮ 170 ಕ್ಕೆ ದೊಡ್ಡ ಶಕ್ತಿಯಿದೆ. ಅದು ಜನತೆಯ ಶಕ್ತಿ. ಅವಿಶ್ವಾಸ ಮತಕ್ಕೆ ಇರುವುದಕ್ಕಿಂತ ಏನು ಕಡಿಮೆಯಲ್ಲದ ಶಕ್ತಿ.

ಭಯೋತ್ಪಾದನೆ: ಹಲವು ಮುಖಗಳು

ಪುಟ 9 ರಿಂದ

ಇದಕ್ಕೆ ಮುಖ್ಯ ಕಾರಣ 90 ರ ದಶಕದ ಆರಂಭದಲ್ಲಿ ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ದೇಶಗಳಲ್ಲಿ ಸಮಾಜವಾದಕ್ಕೆ ಮತ್ತು ಆಮೇಲೆ ಎಲ್ಲಾ ಕಡೆ ಪ್ರಗತಿಪರ ಶಕ್ತಿಗಳಿಗೆ ಆದ ರಾಜಕೀಯ - ಸೈದ್ಧಾಂತಿಕ ಹಿನ್ನಡೆ. ಇದರ ಜತೆ ಸಾರ್ವತ್ರಿಕ ಜಾತ್ಯತೀತ ಪ್ರಗತಿಪರ ಮೌಲ್ಯಗಳಿಗೆ ಎಲ್ಲೆಡೆ ದಕ್ಕೆಯಾಗಿದೆ ಮತ್ತು ಇದರ ಜತೆ ಸಾಮ್ರಾಜ್ಯಶಾಹಿ ಪ್ರತಿಗಾಮಿ ಶಕ್ತಿಗಳು ಎಲ್ಲಕಡೆ ಬಲವಾಗಿವೆ. ಅವುಗಳು ಜನಸಾಮಾನ್ಯರ ಬದುಕಿನ ಮೇಲೆ 'ಜಾಗತೀಕರಣ'ದ ಹೆಸರಲ್ಲಿ ದೊಡ್ಡ ಆಕ್ರಮಣ ಹರಿಯಬಿಟ್ಟಿವೆ. ಹೀಗೆ ಒಂದೆಡೆ ಎಲ್ಲಾ ಸಕಾರಾತ್ಮಕ ಮೌಲ್ಯಗಳು ನಾಶವಾದದ್ದರಿಂದ ಜನ ಪ್ರತಿಗಾಮಿ ಧಾರ್ಮಿಕ/ ಜನಾಂಗೀಯ/ಬುಡಕಟ್ಟು ರಾಷ್ಟ್ರೀಯ ಅಂಧ ವಾದದ ಮೌಲ್ಯಗಳಿಗೆ ಮಾರುಹೋಗುತ್ತಿದ್ದಾರೆ. ಈ ಹೆಸರಲ್ಲಿ ಸಾಮ್ರಾಜ್ಯಶಾಹಿಗೆ, ದೇಶದ ಆಳುವ ವರ್ಗಗಳಿಗೆ ಮೇಲೆ 'ಯಾದವೀ ಕಲಹ'ಕ್ಕೆ ಹಚ್ಚಲು, ತಮ್ಮ ನಿಜವಾದ ಸಮಸ್ಯೆ ಮತ್ತು ವೈರಿಗಳನ್ನು (ಆಳುವರ್ಗ, ಸಾಮ್ರಾಜ್ಯಶಾಹಿ) ಮರೆಸಲು ಸುಲಭವಾಗಿದೆ. ಇನ್ನೊಂದುಕಡೆ ಸಾಮ್ರಾಜ್ಯಶಾಹಿ, ಆಳುವವರ್ಗಗಳ ದಬ್ಬಾಳಿಕೆ, ದಮನ, ಭಯತ್ಪಾದನೆಯ ವಿರುದ್ಧ 'ರೋಷ'ವನ್ನು ಧಾರ್ಮಿಕ/ ಜನಾಂಗೀಯ/ ಬುಡಕಟ್ಟು ಆಧಾರಿತ ಗುಂಪುಗಳು ಬಳಸಿ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿವೆ. ಇಂತಹ ಹಲವ ಗುಂಪುಗಳನ್ನು ಸಾಮ್ರಾಜ್ಯಶಾಹಿಗಳು, ಆಳುವವರ್ಗಗಳು ಒಂದೆಡೆ ಹುಟ್ಟುಹಾಕುತ್ತಿದ್ದರೆ ಇನ್ನೊಂದು ಕಡೆ ಇರುವ ಗುಂಪುಗಳಿಗೆ ಪರೋಕ್ಷವಾಗಿ ಕುಮ್ಮಕ್ಕು/ ಬೆಂಬಲ ಕೊಡುತ್ತಿವೆ. ಹಲವು ಕಡೆ ಈ ಗುಂಪುಗಳು ಅವುಗಳ 'ಜನಕ'ರ ನಿಯಂತ್ರಣ ಮೀರಿ ಶುದ್ಧ 'ಭಯೋತ್ಪಾದಕ' ಗುಂಪುಗಳಾಗಿವೆ. ತಾಲಿಬಾನ್ ಇಂತಹ ಒಂದು ಭೀಕರ ಉದಾಹರಣೆ.

ಸಾಮ್ರಾಜ್ಯಶಾಹಿ ಜಾಗತೀಕರಣದ ವಿರುದ್ಧ ಹೋರಾಟಗಳ ಜಾಗತೀಕರಣ - ಕೆಲವು ಚಿತ್ರಗಳು



▲ ಜನವರಿ 2001 ಮೆಕ್ಸಿಕೋದಲ್ಲಿ ಪ್ರತಿಭಟನೆ




ಮಾರ್ಚ್ 11, 2001 ಎಡಿಬಿ ಸಭೆ ವಿರುದ್ಧ ಪೋರ್ಟ್‌ಲೇಜಾ ಬ್ರಾಸಿಲ್‌ನಲ್ಲಿ ▲




ಮೇ 9 -11, 2001 ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಸಭೆ, ಹವಾಯಿನಲ್ಲಿ ಪ್ರತಿಭಟನೆ(ಇಂತಹ ಪ್ರತಿಭಟನೆಗೆ ಹೆದರಿ ಹೊನಲುಲುವಿನಿಂದ ಇಲ್ಲಿಗೆ ಸ್ಥಳಾಂತರಿಸಿದರು ನಡೆದ ಪ್ರತಿಭಟನೆ ▲



▲ 2001 ಏಪ್ರಿಲ್ 21, ಮರ್‌ಬ್ಲೊ ಪೂರ್ವ ಯುರೋಪಿನ ಪ್ರತಿಭಟನಾಕಾರರ ಮೇಲೆ ಪೋಲೀಸ್ ಆಕ್ರಮಣ





ಫೆಬ್ರವರಿ 2002 , ಜರ್ಮನಿಯ ಮ್ಯೂನಿಚ್‌ನಲ್ಲಿ ನ್ಯಾಟೋ ಕೂಟದ ಸಭೆ ವಿರುದ್ಧ ▲

◀ ಜನವರಿ 2002 ಪೋರ್ಟ್ ಅಲೆಗ್ರೆ ವರ್ಲ್ಡ್ ಸೋಶಿಯಲ್ ಫೋರಂ ನಿಂದ ಪ್ರತಿಭಟನೆ



◀ ಐಎಂಎಫ್ ಸಭೆ ವಿರುದ್ಧ ವಾಶಿಂಗ್ಟನ್‌ನಲ್ಲಿ - ಏಪ್ರಿಲ್ 20, 2002

2002, ಮಾರ್ಚ್ 23 ಇಟಲಿಯ ರೋಮ್‌ನಲ್ಲಿ ಮಿಲಿಯಾಂತರ ಜನರ ಪ್ರತಿಭಟನೆ ▼





ದಂಗೆಯ ಬಳಿಕ

ಸದ್ದಿಲ್ಲದೇ ಮನೆಗಳಿಂದ
ದಟ್ಟ ಹೊಗೆ ಕಪ್ಪಗೆ
ಮಲಿನ ಎದೆಯಿಂದ
ದೂರದೂರಕ್ಕೆ ಹರಡುತ್ತಾ
ಗಾಢ ನೀರವತೆ
ಶವದಂತೆ ಮಲಗಿರುವ ರಸ್ತೆ
ಮುರಿದ ಗಾಡಿ
ಅಡಿಮೇಲಾಗಿ
ಗಾಲಿಗಳನ್ನು ಗಾಳಿಗೆ ಎತ್ತಿನೋಡುತ್ತಿದೆ
ಆಕಾಶದತ್ತ ಬೆಕ್ಕಸ ಬೆರಗಾಗಿ
ಆಗಿದ್ದನ್ನೆಲ್ಲ ನಂಬಲೇ ಆಗದಂತೆ
ಗಾಢ ನೀರವತೆ
ಧೂಳೀಪಟವಾದ ಅಂಗಡಿಚೀತ್ಕಾರದ
ನಂತರ
ತೆರೆದಂತೇ ಇರುವ ಬಾಯಿ
ಮುರಿದ ಕಿಟಕಿ ಸಂದಿನಿಂದ
ಚಿದುರಿರುವ
ಬಳೆಯ ಚೂರುಗಳನ್ನು ಮುಗುಡ ತುಂಬಿ
ಆಸೆಯಿಂದ ನಿರುಕಿಸುತ್ತಿದೆ
ನಿನ್ನೆಯವರೆಗೆ ಈ ಚೂರುಗಳೇ ಆ ಬೊಚ್ಚು
ಬಾಯ
ನೂರು ವರ್ಣದ ಹಲ್ಲುಗಳಾಗಿದ್ದವು
ಗಾಢ ನೀರವತೆ
ಗಾಢ ನೀರವತೆಯು ಹೀಗೆಂದಿತು
ಕೇಳು ಧೂಳಿಪಟವಾದ ಅಂಗಡಿಯೇ
ಹೊಗೆಯಾಡುತ್ತಿರುವ ಮನೆಯೇ
ಮುರಿದ ಗಾಡಿಯೇ
ನೀವೊಂದೇ ಅಲ್ಲ
ಇಲ್ಲಿ ಇನ್ನೂ ಇವೆ
ಮುರಿದುಹೋದಂತವು ದುಃಖಿಸೋಣ
ಅವುಗಳಿಗೆ
ಆದರೆ ಮೊದಲು ಇವರಿಗಾಗಿ ಅಳೋಣ
ಲೂಟಿ ಮಾಡಲು ಬಂದು
ತಾವೇ ಲೂಟಿಯಾದರಲ್ಲಿ
ಏನು ಲೂಟಿಯಾಯಿತು
ಎಂಬ ಅರಿವೂ ಇಲ್ಲ
ಅವರಿಗೆ
ಮಂದದೃಷ್ಟಿ
ಶತಶತಮಾನದ ಸಂಸ್ಕೃತಿ
ಆ ಬಡಪಾಯಿಗಳಿಗೆ ಕಾಣಲೇ ಇಲ್ಲ.

- ಜಾವೇದ್ ಅಖ್ತರ್

1992ರ ಕವಿತೆ ಉರ್ದುವಿನಿಂದ ಇಂಗ್ಲಿಷಿಗೆ
ಶಬನಾಅಜ್ಮಿ
ಕನ್ನಡಕ್ಕೆ ಹಾ.ಮ.ಕನಕ
ಕೃಪೆ: ಲಂಕೇಶ್ ಪತ್ರಿಕೆ

PKB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002
...ಸಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್